ದುಡಿವ ಜನರ ಪ್ರಾಣ ಮಿತ್ರ

ಐಕ್ಯರಂಗ

ಸಂಪುಟ 27 ಸಂಚಿಕೆ 36 ಸೆಪ್ಟೆಂಬರ್ 4, 2005 ಬೆಲೆ ರೂ. 3.00





ಭಾರತ - ಅಮೆರಿಕಾ ಒಪ್ಪಂದ ಅಪಾಯಕಾರಿ - ಪ್ರಕಾಶ್‌ಕಾರಟ್



ಆಹಾರ-ಉದ್ಯೋಗ-ಭೂಮಿ ಆಂದೋಲನ

ಒಡಲ ಕಿಡಿ ಉರಿಯಾಗಿ



ಸೆಪ್ಟೆಂಬರ್ 29 ರ ಮುಷ್ಕರದ ಮಹತ್ವ

ಗ್ರಾಮೀಣ ಉದ್ಯೋಗ ಖಾತರಿ ಕಾನೂನು ಜನತೆಯ ವಿಜಯ



ವೃತ್ತಿ ಶಿಕ್ಷಣ ಬಿಕ್ಕಟ್ಟು - ರಾಜ್ಯಾದ್ಯಂತ ಶಾಲಾ-ಕಾಲೇಜು ಬಂದ್



- ಕರ್ನಾಟಕಕ್ಕೆ ಪಶ್ಚಿಮ ಬಂಗಾಳ ಮಾದರಿ !
- ಮತ್ತೆ ಜನತೆಯತ್ತ 'ಸಮುದಾಯ'

ಅಪಾಯಕಾರಿ ಭಾರತ-ಅಮೇರಿಕಾ ರಕ್ಷಣಾ ಒಪ್ಪಂದ

ಭಾರತ ದೇಶದ ಸಂಸತ್ತನ್ನು ಮತ್ತು ಜನತೆಯನ್ನು ಕತ್ತಲೆಯಲ್ಲಿಟ್ಟು ಹಿಂದಿನ ಎನ್‌ಡಿಎ ಸರ್ಕಾರ ಮತ್ತು ಈಗಿನ ಯುಪಿಎ ಸರ್ಕಾರಗಳು ಅಮೆರಿಕಾ ದೇಶದೊಂದಿಗೆ ಮಾಡಿಕೊಂಡಿರುವ ರಕ್ಷಣಾ ಒಪ್ಪಂದಗಳು ರಾಷ್ಟ್ರೀಯ ಹಿತಾಸಕ್ತಿಗೆ ಹಾಗೂ ಭಾರತ ದೇಶದ ಸ್ವತಂತ್ರ ವಿದೇಶಾಂಗ ನೀತಿಗೆ ಗಂಭೀರ ಹಾನಿ ಮಾಡುವ ಅತ್ಯಂತ ಅಪಾಯಕಾರಿ ನೀತಿಯಾಗಿದೆ. ಜಗತ್ತಿನ ಒಂದು ಪ್ರಬಲ ಶಕ್ತಿಯಾಗಿ ಮೂಡಿಬರುತ್ತಿರುವ ಚೀನ ದೇಶವನ್ನು ಹಣಿಯುವ ಅಮೆರಿಕಾದ ದೂರಗಾಮಿ ಉದ್ದೇಶಕ್ಕೆ ಪೂರಕವಾದ ಹೊಸ ವ್ಯೂಹಾತ್ಮಕ ಕಾರ್ಯತಂತ್ರದ ಭಾಗವಾಗಿರುವ ಇಂತಹ ಒಪ್ಪಂದಗಳು ಜಾರಿಯಾಗಲು ಬಿಡುವುದು ಸಾಧ್ಯವಿಲ್ಲ. ಬಹುಧ್ರುವೀಯ ಜಗತ್ತಿನ ರಚನೆಗೆ ಪೂರಕವಾದ ವಿದೇಶಾಂಗ ನೀತಿ ಅನುಸರಿಸಬೇಕೆನ್ನುವ ಸಮಾನ ಕನಿಷ್ಟ ಕಾರ್ಯಕ್ರಮದ ಸ್ಫೂರ್ತಿಗೂ ಅದು ವಿರುದ್ಧ ಎಂದು ಪಕ್ಷದ ಪ್ರಧಾನ ಕಾರ್ಯದರ್ಶಿ ಕಾಮ್ರೇಡ್ ಪ್ರಕಾಶ್ ಕಾರಟ್ ತಿಳಿಸಿದರು.

ಇತ್ತೀಚೆಗೆ ವಾಷಿಂಗ್‌ಟನ್‌ಗೆ ಭೇಟಿ ನೀಡಿದ ಪ್ರಧಾನಿ ಮನಮೋಹನಸಿಂಗ್‌ರವರು ಅಮೆರಿಕಾ ದೇಶದೊಂದಿಗೆ ಸಹಿ ಮಾಡಿರುವ ರಕ್ಷಣಾ ಒಪ್ಪಂದವು ಭಾರತದೇಶವು ಬಹುಧ್ರುವೀಯ ಜಗತ್ತಿನ ರಚನೆಗೆ ಪೂರಕವಾದ ಸ್ವತಂತ್ರ ವಿದೇಶಾಂಗ ನೀತಿಯನ್ನು ಅನುಸರಿಸಬೇಕೆಂಬ ಸಮಾನ ಕನಿಷ್ಟ ಕಾರ್ಯಕ್ರಮದ ಸ್ಫೂರ್ತಿಗೆ ವಿರುದ್ಧವಾಗಿದ್ದು ಸಿಪಿಐ(ಎಂ) ಮತ್ತು ಎಡಪಕ್ಷಗಳು ನೀತಿಯ ವಿರುದ್ಧ ರಾಷ್ಟ್ರಾದ್ಯಂತ ಜನರನ್ನು ಅಣಿನೆರೆಸಿ ತೀವ್ರವಾಗಿ ಪ್ರತಿಭಟಿಸುವವು ಎಂದು ಪ್ರಕಾಶ್ ಕಾರಟ್‌ರವರು ತಿಳಿಸಿದರು.

ಜುಲೈ ತಿಂಗಳ ಪ್ರಧಾನಿಗಳ ಅಮೆರಿಕಾ ಭೇಟಿಗೆ ಮುಂಚೆ ಅಮೆರಿಕಾಕ್ಕೆ ಭೇಟಿ ನೀಡಿದ ರಕ್ಷಣಾಸಚಿವ ಪ್ರಣಬ್ ಮುಖರ್ಜಿಯವರು ಮಾಧ್ಯಮಗಳಿಗೆ ಸಂದರ್ಶನ ನೀಡಿ 'ಇದೊಂದು ಪರಿಶೀಲನಾತ್ಮಕ ಭೇಟಿ' ಎಂದು ಹೇಳಿದ್ದರು. ಆದರೆ ಆ ನಂತರ ಅವರು ಇರಾಕ್ ವಿರುದ್ಧ ಅನಾಗರಿಕ ಯುದ್ಧಧಾಳಿಯನ್ನು ಯೋಜಿಸಿದ ಅಮೆರಿಕಾ ರಕ್ಷಣಾ ಕಾರ್ಯದರ್ಶಿ ಡೋನಾಲ್ಡ್ ರಮ್ಸ್‌ಫೆಲ್ಡ್ ಜೊತೆಗೆ 10 ವರ್ಷಗಳ ಕಾಲಕ್ಕೆ ಅನ್ವಯವಾಗುವ ಭಾರತ-ಅಮೆರಿಕಾ ಜಂಟಿ ರಕ್ಷಣಾ ಒಪ್ಪಂದಕ್ಕೆ ಸಹಿ ಹಾಕಿ ಬಂದಿದ್ದಾರೆ. ತಮ್ಮ ಸರ್ಕಾರವನ್ನು ಬೆಂಬಲಿಸುತ್ತಿರುವ ಎಡಪಕ್ಷಗಳನ್ನು, ಸಂಸತ್ತನ್ನು, ರಾಷ್ಟ್ರದ ಜನತೆಯನ್ನು ಕತ್ತಲೆಯಲ್ಲಿಟ್ಟು ಈ ಒಪ್ಪಂದ ಮಾಡಿಕೊಳ್ಳಲಾಗಿದೆ. ಹಿಂದೆ ಎನ್‌ಡಿಎ ಸರ್ಕಾರ ಸಹ ಹೀಗೆ ಸತತವಾಗಿ 15 ತಿಂಗಳುಗಳ ಕಾಲ ಅಮೆರಿಕಾದೊಂದಿಗೆ ರಹಸ್ಯ ಮಾತುಕತೆಯಲ್ಲಿ ತೊಡಗಿತ್ತು. ಎನ್‌ಡಿಎ ಸರ್ಕಾರ ವಿದೇಶಾಂಗ ಮಂತ್ರಿ ಜಸ್ವಂತ್ ಸಿಂಗ್ ಅಮೆರಿಕಾದ ಸಹಾಯಕ ರಕ್ಷಣಾ ಕಾರ್ಯದರ್ಶಿ ಸ್ಟ್ರೋಕ್ ಡ್ಯಾಕ್‌ವೆತ್ ರವರೊಂದಿಗೆ ರೋವ್- ಜನಿವಾ-ಲಂಡನ್ ಮುಂತಾದ ಕಡೆಗಳಲ್ಲಿ - ಕಡೆಗೆ ವಿಮಾನ ನಿಲ್ದಾಣಗಳ ಲಾಂಜ್(ವಿಶ್ರಾಂತಿ ಕೊಠಡಿ)ಗಳಲ್ಲಿ ಸಹ ಈ ರಹಸ್ಯ ಮಾತುಕತೆಗಳನ್ನು ನಡೆಸಿದ್ದಾರೆ. ಭಾರತದ ದೇಶದ ಜನತೆ ಈ ರಹಸ್ಯ ರಾಜತಾಂತ್ರಿಕ ನೀತಿಯನ್ನು ಇಂತಹ ರಹಸ್ಯ ವಿದೇಶಾಂಗ ನೀತಿಯನ್ನು ಖಂಡಿತ ಒಪ್ಪುವುದಿಲ್ಲ ಎಂದು ಕಾರಟ್‌ರವರು ಸ್ಪಷ್ಟವಾಗಿ ಘೋಷಿಸಿದರು.


ಅಮೇರಿಕಾ ದೇಶದ ರಕ್ಷಣಾ ನೀತಿ ಸಹ ಅಮೆರಿಕಾ ಸೆನೆಟ್‌ನಲ್ಲಿ ಚರ್ಚೆಯಾಗುತ್ತದೆ. ನಮ್ಮ ದೇಶದಲ್ಲಿ ಮಾತ್ರ ಏನೂ ಆಗಬಹುದು. ದೇಶದ ಪಾರ್ಲಿಮೆಂಟಿಗೆ - ಜನರಿಗೆ ಹೇಳಲಿಕ್ಕೆ ಏನೂ ಇಲ್ಲ ಎಂದ ಕಾರಟ್ ಯುಪಿಎ ಸರ್ಕಾರ ಎನ್‌ಡಿಎ ಸರ್ಕಾರದ ನೀತಿಯನ್ನೇ ಮುಂದುವರಿಸಬಾರದೆಂದು ಆಗ್ರಹಿಸಿದರು.

ಪಿ.ವಿ.ನರಸಿಂಹ ರಾಯರ ಕಾಲದಲ್ಲಿ ಅಮೆರಿಕಾವು ತನ್ನ ನೀತಿ ಬದಲಿಸಿತು. ಭಾರತದೊಂದಿಗೆ ಮಿಲಿಟರಿ ಸಹಕಾರ ಒಪ್ಪಂದಕ್ಕೆ ಬಂದಿತು. ಇದರಿಂದಾಗಿ ಅಮೆರಿಕಾ-ಭಾರತದ ಸೇನೆಗಳ ಜಂಟಿ ಕವಾಯತು, ಜಂಟಿ ತರಬೇತಿಗಳು ನಡೆದವು. ಭಾರತದ ಸೇನಾಧಿಕಾರಿಗಳಿಗೆ ಅಮೆರಿಕಾದ 'ಅಂತರರಾಷ್ಟ್ರೀಯ ಮಿಲಿಟರಿ ಕೇಂದ್ರ'ದಲ್ಲಿ ತರಬೇತಿ ನೀಡಲಾಯಿತು. ಭಾರತದ ಮಲಬಾರ್ ಪ್ರಾಂತ್ಯದಲ್ಲಿ ನೌಕಾಪಡೆಗಳ ಜಂಟಿ ಸಮರಾಭ್ಯಾಸ ನಡೆಯಿತು. ಇದು ನಂತರ ಭೂಸೇನೆ, ವಾಯುಸೇನೆಗಳಿಗೂ ವಿಸ್ತರಿಸಿತು. ಪೋಕ್ರಾನ್ ಅಣ್ವಸ್ತ್ರ ಸ್ಫೋಟಗಳ ನಂತರ ಇವು ನಿಂತಿದ್ದವು. ಭಾರತ ದೇಶದ ಸೇನಾಧಿಕಾರಿಗಳ ಜೊತೆಗೆ ಅಮೆರಿಕಾ ದೇಶವು ಸಂಪರ್ಕ ಸಾಧಿಸಿಕೊಳ್ಳಲು ಬಿಡುವ ಎನ್‌ಡಿಎ ಸರ್ಕಾರದ ಅತ್ಯಂತ ಅಪಾಯಕಾರಿ ನೀತಿಯನ್ನೇ ಯುಪಿಎ ಸರ್ಕಾರ ಮುಂದುವರಿಸಲು ಪ್ರಯತ್ನಿಸುತ್ತಿದೆ.

ಭಾರತ ದೇಶವು ಇದೇ ಪ್ರಪ್ರಥಮ ಬಾರಿ ಅಮೆರಿಕಾ ದೇಶದ 'ಮೂರನೇ ಜಗತ್ತಿನ ದೇಶಗಳಲ್ಲಿನ ಬಹುರಾಷ್ಟ್ರೀಯ-ಬಹುಪಕ್ಷೀಯ ಕಾರ್ಯಾಚರಣೆ ಒಪ್ಪಂದಕ್ಕೆ ಸಹಿ ಹಾಕಿದೆ. (ಅಂದರೆ ಮೂರನೇ ಜಗತ್ತಿನ ದೇಶಗಳ ಮೇಲೆ ವಿವಿಧ ದೇಶಗಳ ಸೇನೆಗಳು ಜಂಟಿಯಾಗಿ ಅಮೆರಿಕಾದ ಅಪೇಕ್ಷೆಯಂತೆ ವಿಶ್ವಸಂಸ್ಥೆಯನ್ನು ಧಿಕ್ಕರಿಸಿ ಧಾಳಿ ನಡೆಸುವುದು-ಅದರಲ್ಲಿ ಭಾರತದ ಸೈನ್ಯ ಪಾಲ್ಗೊಳ್ಳುವುದು).

ಅಮೆರಿಕಾದ 'ದಿಢೀರ್ ಭಾರತ ಪ್ರೇಮ'ದ ಗುಟ್ಟೇನು ?

ಭಾರತದ ಗಡಿರಾಜ್ಯವಾದ ಮಿಜೋರಾಂ ರಾಜ್ಯದ ಅರಣ್ಯದಲ್ಲಿ ಮತ್ತು ಲಡಾಕ್‌ನಲ್ಲಿ ಅಮೆರಿಕಾದ ಸೈನ್ಯದೊಂದಿಗೆ ಜಂಟಿ ಕವಾಯತು ನಡೆಸಲಾಯಿತು. ಇವೆರಡು ಚೀನಾ ಗಡಿ ಭಾಗಗಳು. ಇದರ ಉದ್ದೇಶ ಪ್ರಪಂಚದಲ್ಲಿ ಅತಿ ವೇಗವಾಗಿ ಮುಂದುವರೆಯುತ್ತಿರುವ ಮತ್ತು ಮುಂದೆ ತನಗೆ ಕಂಟಕ ಪ್ರಾಯವಾಗಬಹುದಾದ ಚೈನಾವನ್ನು ಗುರಿಯಾಗಿ ಇರಿಸಿಕೊಂಡು ಈ ತಂತ್ರ ಯೋಜಿಸಲಾಗಿದೆ. ಇದರಿಂದ ಅಮೇರಿಕಾ ತನ್ನ ಜಾಗತೀಕ ಯುದ್ಧತಂತ್ರಕ್ಕೆ ಸಂಪೂರ್ಣವಾಗಿ ಭಾರತವನ್ನು ಬಳಸಿಕೊಳ್ಳುವ


ಉಪನ್ಯಾಸ ಮಾಡುತ್ತಿರುವ ಪ್ರಕಾಶ್ ಕಾರಟ್

ಹುನ್ನಾರಗಳು ನಡೆಸುತ್ತಿದೆ ಎಂದು ಪ್ರಕಾಶ್ ಕಾರಟ್ ತಿಳಿಸಿದರು.

ಅಮೆರಿಕಾದೊಂದಿಗಿನ ಒಪ್ಪಂದದ ಅಘಾತಕಾರಿಯಾದ ನಾಲ್ಕು ಅಂಶಗಳು :

1. ಭಾರತ - ಅಮೇರಿಕಾದ ರಕ್ಷಣಾ ಒಪ್ಪಂದದಲ್ಲಿ ತನ್ನ ಕಾರ್ಯ ಸಾಧನೆಗೆ ಭಾರತವನ್ನು ಬಳಸಿಕೊಂಡು ತಾನು ಗುರಿಯಿಟ್ಟ ರಾಷ್ಟ್ರವನ್ನು ನಿರ್ನಾಮ ಮಾಡುವ ಉದ್ದೇಶವನ್ನು ಅಮೆರಿಕಾ ಹೊಂದಿದೆ. ವಿಶ್ವಸಂಸ್ಥೆಯ ಅನುಮೋದನೆ ಇಲ್ಲದೆಯೇ ಇರಾಕ್. ಅಫಘಾನಿಸ್ಥಾನ ಮುಂತಾದ ರಾಷ್ಟ್ರಗಳಲ್ಲಿ ಭಯೋತ್ಪಾದನೆ ನೆಪದಲ್ಲಿ ಅಮೆರಿಕಾ ನಡೆಸುತ್ತಿರುವ ದಬ್ಬಾಳಿಕೆಯನ್ನು ಕಂಡು ಪ್ರಜಾಪ್ರಭುತ್ವದಲ್ಲಿ ನಂಬಿಕೆ ಇರುವ ನಾವು ಅದನ್ನು ವಿರೋಧಿಸಬೇಕು.

2. ಅಮೇರಿಕಾವು ತನ್ನ ರಕ್ಷಣಾ ಕಾರ್ಯಾಚರಣೆಯ ಕಾರ್ಯ ಜಾಲವನ್ನೂ ವಿಸ್ತರಿಸಿಕೊಳ್ಳಲು, ಭಾರತದ ಹಿಂದಿನ ಪ್ರಧಾನಿ ವಾಜಪೇಯಿ ಅವರೊಂದಿಗೆ 'ಕ್ಷಿಪಣಿ ರಕ್ಷಣಾ ಸಹಕಾರ' (ಮಿಸ್ಸೈಲ್ ಡಿಫೆನ್ಸ್ ಕೋ ಆಪರೇಷನ್) ಎನ್ನುವ ಒಪ್ಪಂದಕ್ಕೆ ಬಂದಿತು. ಭಾರತದ ರಕ್ಷಣೆಯಲ್ಲಿ ಸ್ವಾಭಿಮಾನ ಸ್ಥಾಪಿಸುವ ಬದಲು ಅಮೇರಿಕಾದ ಅಧ್ಯಕ್ಷ ಜಾರ್ಜ್ ಡಬ್ಲ್ಯು ಬುಷ್ ಅವರನ್ನು ರಕ್ಷಣಾ ವ್ಯವಹಾರ ಒಪ್ಪಂದ ಮಾಡಿಕೊಳ್ಳಲು ಕರೆತಂದರು ಮತ್ತು ಸದಾ ನಾವು ನಿಮ್ಮೊಂದಿಗೆ ಇರುವ ಭರವಸೆಯನ್ನು ನೀಡಿದ ಪರಿಣಾಮ ಇಂದು ಭಾರತ ಮತ್ತು ಪಾಕಿಸ್ತಾನ ದೇಶಗಳು ಕ್ಷಿಪಣಿ ಅಭಿವೃದ್ಧಿಗೊಳಿಸುವಲ್ಲಿ ಪೈಪೋಟಿಗೆ ಇಳಿಯಲು ಕಾರಣವಾಗಿದೆ. ಈ ರೀತಿ ಒಪ್ಪಂದದಿಂದ ಭಾರತ ಅಮೇರಿಕಾ ರಕ್ಷಣೆಗೆ ಬರುತ್ತದೆಯೇ? ಅಥವಾ ಒಪ್ಪಂದದ ಪ್ರಕಾರ ಭಾರತದ ಮಿಸ್ಸೈಲ್ಸ್ ಕ್ಷಿಪಣಿ ತಯಾರಿಕೆಯಲ್ಲಿ ಅಮೇರಿಕಾ ಸಹಕರಿಸಲಿದೆಯೇ ಎಂದು ಪ್ರಶ್ನಿಸಿದ ಅವರು ಅಮೇರಿಕಾದ ಮಿತ್ರ ರಾಷ್ಟ್ರಗಳೇ ಈ ಒಪ್ಪಂದವನ್ನು ಟೀಕಿಸಿವೆ.



3. ಪಿ.ಎಸ್.ಐ.-ಇರಾಕ್‌ನ ಮೇಲೇರಿ ಹೋಗುವ ಅಮೆರಿಕಾದ ಯುದ್ಧ ನೌಕೆಗೆ ರಕ್ಷಣೆ ನೀಡಬೇಕಾದಂತಹ ರೀತಿಯಲ್ಲಿ ಅಮೇರಿಕಾವು ಕೈಗೊಳ್ಳುವ ಯುದ್ಧಗಳಲ್ಲಿ ಭಾರತ ರಕ್ಷಣಾಪಡೆ ಅವರೊಂದಿಗೆ ಹೋಗಬೇಕಾಗುತ್ತದೆ ಇದರಿಂದ ಭಾರತವು ಕೀಳುಮಟ್ಟದಲ್ಲಿ ಕಾರ್ಯ ನಿರ್ವಹಿಸಬೇಕಾಗುತ್ತದೆ. ಈ ರೀತಿ ವಾಜಪೇಯಿ ಸರ್ಕಾರ ಕೈಗೊಂಡ ತೀರ್ಮಾನದ ಫಲವೇ ಹಿಂದಿನ ಎನ್.ಡಿ.ಎ. ಸರ್ಕಾರ ಚುನಾವಣೆಗಳಲ್ಲಿ ಸೋಲಲು ಕಾರಣವಾಯಿತು ಎಂದು ತಿಳಿಸಿದರು.

4. ನಮ್ಮ ಭಾರತದ ರಕ್ಷಣಾ ಇಲಾಖೆಯು ಅಮೇರಿಕಾವು ಆಧುನಿಕ ಕ್ಷಿಪಣಿಗಳನ್ನು ಮತ್ತು ಎಫ್-16 ಮತ್ತು ಎಫ್-18 ಯುದ್ಧ ವಿಮಾನಗಳನ್ನು ಭಾರತಕ್ಕೆ ಬಳುವಳಿಯಾಗಿ ನೀಡುವುದಾಗಿ ತಿಳಿಸಿದಾಗ ಹರ್ಷಗೊಂಡಿತು. ಅಮೇರಿಕಾದ ಧೋರಣೆಯನ್ನು ಅರ್ಥಮಾಡಿಕೊಳ್ಳದ ನಮ್ಮ ಹಿಂದಿನ ಪ್ರಧಾನಿ ಪಾಕಿಸ್ತಾನದ ಸ್ಥಾನಮಾನಕ್ಕೆ ಭಾರತವನ್ನು ತಂದು ನಿಲ್ಲಿಸಿದರು. ಅಮೆರಿಕಾ ಸನ್ನಿವೇಶವನ್ನು ಸರಿಯಾಗಿ ಬಳಸಿಕೊಳ್ಳಲು ಭಾರತದೊಂದಿಗೆ ಒಪ್ಪಂದ ಮಾಡಿಕೊಂಡು ಕುತಂತ್ರ ನೀತಿಯನ್ನು ಅನುಸರಿಸುತ್ತಿದೆ. ಆದ್ದರಿಂದ ಭಾರತವು ಅಮೆರಿಕಾ ದೇಶಕ್ಕೆ ಅನಗತ್ಯ ವಿನಾಯಿತಿ ರಿಯಾಯಿತಿ ನೀಡದೇ ಹಂತಹಂತವಾಗಿ ಮುಂದುವರೆಯಬೇಕೆಂದು ಕಾರಟ್ ಎಚ್ಚರಿಸಿದರು.

ಈ ಹಿನ್ನೆಲೆಯಲ್ಲಿ ಯು.ಪಿ.ಎ. ಸರ್ಕಾರವು ಇಡೀ ವಿಶ್ವದಲ್ಲಿಯೇ ತಾನೇ ದೊಡ್ಡಣ್ಣ ಎನ್ನುವಂತೆ ವರ್ತಿಸುತ್ತಿರುವ ಅಮೇರಿಕಾದೊಂದಿಗಿನ ಒಪ್ಪಂದದ ವಿಚಾರದಲ್ಲಿ ಎಚ್ಚರಿಕೆಯಿಂದ ವರ್ತಿಸಬೇಕು. ತೃತೀಯ ಜಗತ್ತಿಗೆ ನಾಯಕತ್ವವನ್ನು ನೀಡುತ್ತಿರುವ ಭಾರತದ ಈ ಧೋರಣೆಯಿಂದ ಅವುಗಳು ತಮ್ಮ ಬಾಂಧವ್ಯಗಳನ್ನು ಕಡಿದುಕೊಳ್ಳಲಿವೆ ಮತ್ತು ನೆರೆ ಹೊರೆಯ ರಾಷ್ಟ್ರಗಳ ಬಾಂಧವ್ಯಗಳಲ್ಲಿಯೂ ಬಹಳಷ್ಟು ಸಮಸ್ಯೆ ಕಾಣಿಸಿಕೊಳ್ಳಲಿದೆ. ಇದರಿಂದ ಬಹುಧ್ರುವೀಯ ಜಗತ್ತಿನ ಆಶಯ ಸಹ ಈಡೇರುವುದು ಸಾಧ್ಯವಿಲ್ಲ.

ಹಿಂದೆ ಸ್ವಾತಂತ್ರ್ಯ ನಂತರ ಪ್ರಧಾನಿ ಜವಹಾರ್‌ಲಾಲ್ ನೆಹರು ಅವರು ಪ್ರಧಾನಿ ಆಗಿದ್ದಾಗ ವಿದೇಶಾಂಗ ನೀತಿಯನ್ನು ಜಾರಿಗೊಳಿಸ ಬೇಕಾದರೆ ರಾಜ್ಯಗಳ ಮುಖ್ಯಮಂತ್ರಿಗಳಿಗೆ ಪತ್ರ ಬರೆದು, ಸಭೆ ಕರೆದು ಚರ್ಚಿಸಿ ನಿರ್ಣಯಗಳನ್ನು ಕೈಗೊಳ್ಳುತ್ತಿದ್ದರು. ಆದರೆ ಇಂದು ಸಂಸತ್ತಿಗೆ ತಿಳಿಸದೇ ಮತ್ತು ಜನರಿಗೆ ತಿಳಿಸದೇ ಇರುವುದನ್ನು ನಾವು ಖಡಾಖಂಡಿತವಾಗಿ ವಿರೋಧಿಸಬೇಕಾಗಿದೆ.

ಭಾರತವು ಅಮೆರಿಕಾದೊಂದಿಗೆ ಸ್ನೇಹವನ್ನು ಸ್ವಲ್ಪ ಯೋಚಿಸಿ ಬೆಳೆಸಬೇಕಾಗಿದೆ. ಸಮತೋಲನ ಸಂಬಂಧಗಳು (ಬ್ಯಾಲೆನ್ಸ್ ರಿಲೇಷನ್‌ಷಿಪ್) ಮತ್ತು ಅಮೇರಿಕಾದ ಗುರಿಗಳನ್ನು ವಿವೇಚನೆಗೆ ಒಳಪಡಿಸಬೇಕೆ ವಿನಹ ಹೇಳಿದ್ದಕ್ಕೆಲ್ಲ ಸಹಿ ಮಾಡಿ ಗುಲಾಮರಾಗಬಾರದು. ಇಂದು ಅಮೇರಿಕಾವು ಭಯೋತ್ಪಾದನೆಯ ವಿರುದ್ಧ ಮತ್ತು ಪ್ರಜಾಪ್ರಭುತ್ವದ ಹೆಸರಿನಲ್ಲಿ ಇರಾಕಿನಲ್ಲಿ ನಡೆಸಿದ ಸಮರಕ್ಕೆ ಭಾರಿ ವಿರೋಧ ವ್ಯಕ್ತವಾಗಿದೆ. ಇದರ ಉದ್ದೇಶ ಇಡೀ ವಿಶ್ವವನ್ನು ತಮ್ಮ ಅಡಿಯಲ್ಲಿ ಇಟ್ಟುಕೊಳ್ಳುವುದಾಗಿದೆ. ಒಂದೊಮ್ಮೆ ಆಧುನಿಕ ಜಾತ್ಯತೀತ ದೇಶವಾಗಿದ್ದ ಇರಾಕ್‌ನಲ್ಲಿ ಅಮೆರಿಕಾದ ದುಷ್ಟ ನೀತಿಯಿಂದಾಗಿ ಇಂದು ಆತ್ಮಹತ್ಯಾ ಬಾಂಬರ್‌ಗಳು ಹುಟ್ಟಿಕೊಂಡಿದ್ದಾರೆ. ಅಲ್ಲಿ ಇಲ್ಲದಿದ್ದ ಅಲ್‌ಖೈದಾ ಪ್ರವೇಶ ಮಾಡಿದೆ. ಭಯೋತ್ಪಾದನೆ ಈಗ ಅಲ್ಲಿಂದ ಲಂಡನ್ ಸೇರಿದಂತೆ ಜಗತ್ತಿಗೆಲ್ಲಾ ವಿಸ್ತರಿಸುತ್ತಿದೆ. ಅಮೆರಿಕಾದ ಈ ಮಾದರಿಯ ಭಯೋತ್ಪಾದನಾ ವಿರೋಧಿ ಸಮರದಿಂದ ಇನ್ನಷ್ಟು ಭಯೋತ್ಪಾದನೆ ಹೆಚ್ಚುತ್ತದೆಯೋ ಹೊರತು ಕಡಿಮೆಯಾಗುವುದು ಸಾಧ್ಯವಿಲ್ಲ ಎಂದು ಪ್ರಕಾಶ್ ಕಾರಟ್ ತಿಳಿಸಿದರು.

ರಾಜಕೀಯ ಪಕ್ಷಗಳನ್ನು ಕುರಿತು ಮಾತನಾಡಿದ ಪ್ರಕಾಶ್ ಕಾರಟ್, ದೇಶದ ಮಾಜಿ ಗೃಹಮಂತ್ರಿ ಅಡ್ವಾಣಿಯವರು ಪ್ರಧಾನಿಗಳಿಗೆ ಯಾರ ಮಾತನ್ನಾದರೂ ಕೇಳಿ ಆದರೆ ಕಮ್ಯುನಿಸ್ಟರ ಮಾತನ್ನು ಕೇಳಬೇಡಿ ಎಂದು ಹೇಳಿರುವುದು ದುರದೃಷ್ಟಕರ ಎಂದ ಅವರು ಇರಾಕ್‌ನಲ್ಲಿ, ವಿಯಟ್ನಾಂನಲ್ಲಿ ಜನ ಯಾವ ರೀತಿ ಪ್ರತ್ಯುತ್ತರ ನೀಡುತ್ತಿದ್ದಾರೆ ಎಂದು ಪ್ರಶ್ನಿಸಿದರು.

'ಪ್ರಜಾಪ್ರಭುತ್ವ ನಿಧಿ' ಹೆಸರಿನಲ್ಲಿ ಸುಮಾರು 10 ಮಿಲಿಯನ್ ಡಾಲರ್ ಸಂಗ್ರಹಿಸಿದ ಅಮೇರಿಕಾ ಪ್ರಜಾಪ್ರಭುತ್ವದ ವಿರೋಧಿ ಕಾರ್ಯಗಳಿಗೆ ಅದನ್ನು ವಿನಿಯೋಗಿಸಿದೆ ಎಂದರು. ಅಮೇರಿಕಾದೊಂದಿಗೆ ಸಹಕರಿಸಲಿಲ್ಲ ಎಂದು ವೆನಿಜುವೆಲಾದ ಅಧ್ಯಕ್ಷರಾದ ಹ್ಯುಗೋ ಚಾವೇಝ್ ಅವರ ಮೇಲೆ ದೈಹಿಕ ಹಲ್ಲೆ ನಡೆಸಲಾಯಿತು. ಅಣ್ವಸ್ತ್ರ ಪ್ರಸರಣ ನಿಷೇಧಕ್ಕೆ ಅಮೇರಿಕಾ ತಾನು ಒಪ್ಪದೆ ಭಾರತಕ್ಕೆ ಸಹಿ ಹಾಕಲು ಒತ್ತಾಯ ಮಾಡುತ್ತಿರುವುದು ದುರದೃಷ್ಟಕರ ಎಂದು ಪ್ರಕಾಶ್ ಕಾರಟ್ ಹೇಳಿದರು.

ಅಣು ಶಕ್ತಿ ಒಪ್ಪಂದ

ಭಾರತವು ತನ್ನ ಸಾಮರ್ಥ್ಯದ ಆಧಾರದ ಮೇಲೆ ವಿಶ್ವಸಂಸ್ಥೆಯ ಭದ್ರತಾ ಮಂಡಳಿಯಲ್ಲಿ ಸ್ಥಾನ ಪಡೆಯಬೇಕೆ ವಿನಹಃ ಯಾವುದೇ ರಿಯಾಯ್ತಿಗಳಿಂದ ಪಡೆಯುವುದು ಸರಿಯಲ್ಲ. ಭಾರತವು ಕೇವಲ ಅಮೇರಿಕಾದೊಂದಿಗೆ ಅಲ್ಲದೆ ಇಡೀ ವಿಶ್ವದ ಇತರೆ ರಾಷ್ಟ್ರಗಳನ್ನು ಮತ್ತು ಯುರೋಪಿಯನ್ ಒಕ್ಕೂಟವನ್ನು ಗಮನದಲ್ಲಿ ಇಟ್ಟುಕೊಂಡು ಅವುಗಳ ಬಾಂಧವ್ಯವೃದ್ಧಿಗೆ ಯತ್ನಿಸಬೇಕಿದೆ. ಅಣು ಶಕ್ತಿಯನ್ನು ಕೇವಲ ಶಾಂತಿಗಾಗಿ ಬಳಸಿಕೊಳ್ಳಬೇಕು. ಸಿ.ಟಿ.ಬಿ.ಟಿ.ಗೆ ಸಹಿ ಹಾಕಬಾರದು.

ಅಣುಶಕ್ತಿ ಕೇಂದ್ರದ ಅಧ್ಯಕ್ಷರ ಪ್ರಕಾರ 'ಅಮೇರಿಕಾವು ಕೈಗೊಳ್ಳುವ ಸಂಶೋಧನೆಗಳನ್ನು ನಾವು ಹಂತ ಹಂತವಾಗಿ ಕೈಗೊಂಡು ನಂತರ ಅವಶ್ಯಕತೆ ಇದ್ದರೆ ಮಾತ್ರ ಅವುಗಳನ್ನು ಬಳಸಿಕೊಳ್ಳಬಹುದಾಗಿದೆ ಎಂದರು ಮತ್ತು ಅಮೆರಿಕಾದ ಸಿಐಎ ಕೇಂದ್ರ ಕಛೇರಿಗೆ ಭೇಟಿ ನೀಡಿದ ಪ್ರಥಮ ಗೃಹ ಸಚಿವ ಅಡ್ವಾಣಿ, ಇದು ನಿಜಕ್ಕೂ ದುರದೃಷ್ಟಕರ. ಅಮೇರಿಕಾದೊಂದಿಗಿನ ಅತಿಯಾದ ಸ್ನೇಹವನ್ನು ಕಡಿಮೆ ಮಾಡಿಕೊಳ್ಳುವಂತೆ ಯು.ಪಿ.ಎ. ಸರ್ಕಾರಕ್ಕೆ ಸೂಚಿಸಲಾಗಿದೆ ಎಂದು ತಿಳಿಸಿದರು.

ಸಿಪಿಐ(ಎಂ) ಪಕ್ಷದ ಬೆಂಗಳೂರು ಜಿಲ್ಲಾ ಸಮಿತಿ ಸಂಘಟಿಸಿದ್ದ ಈ ಉಪನ್ಯಾಸ ಕಾರ್ಯಕ್ರಮದ ಅಧ್ಯಕ್ಷತೆಯನ್ನು ರಾಜ್ಯ ಕಾರ್ಯದರ್ಶಿ ಜಿ.ಎನ್.ನಾಗರಾಜ್ ವಹಿಸಿದ್ದರು. ಜಿಲ್ಲಾ ಮುಖಂಡರಾದ ಮೀನಾಕ್ಷಿಸುಂದರಂ ಸ್ವಾಗತಿಸಿದರು, ಜಿಲ್ಲಾ ಕಾರ್ಯದರ್ಶಿ ಪ್ರಕಾಶ್.ಕೆ ರವರು ಭಾಷಣವನ್ನು ಅನುವಾದಿಸಿ ವಂದನಾರ್ಪಣೆ ಮಾಡಿದರು.

ಆರ್.ಎನ್.ಆನಂದ ಕುಮಾರ್,
ವಿಕ್ರಮ್ ವಿನ್ಸೆಂಟ್

ಇಂದಿಗಾಗಿ ನಾಳಿನ ಕಾರ್ಯಕ್ರಮ

- **ಆಗಸ್ಟ್ 27 ರಿಂದ ಸೆಪ್ಟೆಂಬರ್ 7**
  ಸೆಪ್ಟೆಂಬರ್ 29 ರ ಮುಷ್ಕರದ ಹಿನ್ನೆಲೆಯಲ್ಲಿ ಕಛೇರಿಗಳಲ್ಲಿ, ಕೈಗಾರಿಕಾ ಕೇಂದ್ರಗಳಲ್ಲಿ ಧರಣಿ, ಮೆರವಣಿಗೆ, ರ್‍ಯಾಲಿ ಇತ್ಯಾದಿ. ಜಿಲ್ಲಾ ಕೇಂದ್ರಗಳಲ್ಲಿ ರ್‍ಯಾಲಿ
- **ಸೆಪ್ಟೆಂಬರ್ 1 ಮತ್ತು 2, 2005**
  ಹಮಾಲಿ ನೌಕರರ ರಾಜ್ಯ ಸಮ್ಮೇಳನ, ಬಳ್ಳಾರಿ
- **ಸೆಪ್ಟೆಂಬರ್ 1 ರಿಂದ 15, 2005**
  ಕಿಸಾನ್ ಸಭಾಗಳಿಂದ ದೇಶದಾದ್ಯಂತ ಪ್ರಚಾರಾಂದೋಲನ. ಸೆಪ್ಟೆಂಬರ್ 29 ರಂದು ರಸ್ತೆ ತಡೆ ಚಳುವಳಿ.

ಸೆಪ್ಟೆಂಬರ್ 29 ರ ಮುಷ್ಕರದ ಮಹತ್ವ

2005 ಸೆಪ್ಟೆಂಬರ್ 29 ರ ಮುಷ್ಕರ ಸ್ವತಂತ್ರ ಭಾರತದ ಕಾರ್ಮಿಕ ಚಳುವಳಿಯಲ್ಲೇ ಅತ್ಯಂತ ಮಹತ್ವದ ಮುಷ್ಕರವಾಗಲಿದೆ. ಹಲವಾರು ಕಾರಣಗಳಿಂದ ಈ ಮುಷ್ಕರ ಪ್ರಧಾನವಾದುದು.

1. ಯುಪಿಎ ಸರ್ಕಾರ ಅಧಿಕಾರಕ್ಕೆ ಬಂದ 15 ತಿಂಗಳುಗಳಲ್ಲಿ ಇದು ಪ್ರಥಮ ಮುಷ್ಕರ.

2. ಶೇಕಡ 7 ರಷ್ಟಿರುವ ಸಂಘಟಿತ ಕಾರ್ಮಿಕರು, ಶೇಕಡಾ 93 ರಷ್ಟಿರುವ ಅಸಂಘಟಿತ ಕಾರ್ಮಿಕರು ಹಾಗೂ ಕೃಷಿಕಾರ್ಮಿಕರೊಂದಿಗೆ ವಿಶಾಲವಾದ ಐಕ್ಯತೆಯನ್ನು ಬೆಸೆಯುವ ಮುಷ್ಕರ ಇದು.

3. ನಿರುದ್ಯೋಗದಿಂದ ತತ್ತರಿಸಿರುವ ಗ್ರಾಮೀಣ ಮತ್ತು ನಗರಗಳ ಯುವ ಜನರಿಗೆ, ಆಶಾಕಿರಣವನ್ನು ಮೂಡಿಸುವ ಉದ್ಯೋಗ ಖಾತರಿ ಯೋಜನೆಯನ್ನು ಎಲ್ಲಾ ಜಿಲ್ಲೆಗಳಿಗೂ ವಿಸ್ತರಿಸಲು ಒತ್ತಾಯಿಸುವ ಮುಷ್ಕರ.

4. ಹಿಂದಿನ ಎನ್‌ಡಿಎ ಮತ್ತು ಇಂದಿನ ಯುಪಿಎ ಸರ್ಕಾರಗಳು ಅನುಸರಿಸಿದ ಜಾಗತೀಕರಣ ನೀತಿಗಳಿಂದ ಹಾನಿಗೀಡಾದ ರೈತ ಸಮುದಾಯಕ್ಕೆ ಭೂಸುಧಾರಣೆ ಮತ್ತು ನೀರಾವರಿ ಯೋಜನೆಗಳ ಜಾರಿಗೆ ಒತ್ತಾಯಿಸುವುದರ ಮೂಲಕ ರೈತ-ಕಾರ್ಮಿಕ ಸಖ್ಯತೆಯನ್ನು ಪ್ರತಿಪಾದಿಸುವ ಮುಷ್ಕರ.

5. ದೇಶದ ಆರ್ಥಿಕ ಸ್ವಾವಲಂಬನೆಗಾಗಿ ಪರಮ ಕಾಣಿಕೆ ನೀಡಿದ ಸಾರ್ವಜನಿಕ ಉದ್ದಿಮೆಗಳನ್ನು ಲೂಟಿ ಮಾಡಲು ಬಿಡುವುದಿಲ್ಲ ಎಂದು ಸಾರುವ ಮುಷ್ಕರ.

6. ಟಿ.ವಿ. ಮತ್ತು ಪತ್ರಿಕೆಗಳಲ್ಲಿ ಮಹಿಳೆಯರನ್ನು ಮಾರಾಟದ ಭೋಗವಸ್ತು ಎಂದು ಚಿತ್ರಿಸುತ್ತಿರುವ ಸಂದರ್ಭದಲ್ಲಿ, ಮಹಿಳೆಯರ ಗೌರವವನ್ನು ಎತ್ತಿಹಿಡಿಯುವ ಮುಷ್ಕರ.

ಒಟ್ಟಾರೆಯಾಗಿ 16 ಬೇಡಿಕೆಗಳನ್ನು ಮುಂದಿಟ್ಟು ಎಲ್ಲಾ ಜನ ವಿಭಾಗಗಳನ್ನು ಬಾಧಿಸುವ ಹಾಗೂ ದೇಶದ ಆರ್ಥಿಕ ಸ್ವಾವಲಂಬನೆಯನ್ನು ಎತ್ತಿಹಿಡಿಯುವ, ಜಾಗತೀಕರಣದ ಧಾಳಿಕೋರರಿಂದ ರಕ್ಷಿಸುವ ಮುಷ್ಕರ ಸೆಪ್ಟೆಂಬರ್ 29 ರಂದು ನಡೆಯಲಿದ್ದು, ದೇಶದಲ್ಲಿ ಹೊಸ ಸಂಚಲನವನ್ನು ಮೂಡಿಸಲಿದೆ.

ಸಿಐಟಿಯು, ಎಐಟಿಯುಸಿ ಸೇರಿದಂತೆ ಏಳು ವಿದೇಶಿ ಕೇಂದ್ರ ಕಾರ್ಮಿಕ ಸಂಘಟನೆಗಳು ಮತ್ತು ಹಲವಾರು ಅಖಿಲ ಭಾರತ ಸ್ವತಂತ್ರ ಒಕ್ಕೂಟಗಳು ಜಂಟಿಯಾಗಿ ಕರೆ ನೀಡಿರುವ ಮುಷ್ಕರದಲ್ಲಿ ಬಿಜೆಪಿಗೆ ಸಮರ್ಥನೆ ನೀಡುವ ಬಿಎಂಎಸ್ ಮತ್ತು ಕಾಂಗ್ರೆಸ್‌ಗೆ ಸಮರ್ಥನೆ ನೀಡುವ ಇಂಟಕ್ ಮಾತ್ರ ಭಾಗವಹಿಸುತ್ತಿಲ್ಲ. ಆದರೆ ಮುಷ್ಕರದ ಕಾವು ಏರ ತೊಡಗುತ್ತಿದ್ದಂತೆ ಈ ಸಂಘಟನೆಗಳಿಗೆ ಸಂಯೋಜಿತ ಗೊಂಡ ಸಂಘಗಳು ಅಥವಾ ಸದಸ್ಯರು ಮುಷ್ಕರದಲ್ಲಿ ಭಾಗವಹಿಸುವ ಎಲ್ಲಾ ಲಕ್ಷಣಗಳು ಕಾಣುತ್ತಿವೆ.

ಹೋರಾಟಗಳ ಸರಮಾಲೆ

ಬಿಜೆಪಿ ನೇತೃತ್ವದ ಎನ್‌ಡಿಎ ಸರ್ಕಾರ ಅನುಸರಿಸಿದ ಆರ್ಥಿಕ ನೀತಿಗಳಿಂದ ಬೇಸತ್ತ ಕಾರ್ಮಿಕ ವರ್ಗ ಹಲವಾರು ಅಖಿಲ ಭಾರತ ಹೋರಾಟಗಳನ್ನು ನಡೆಸಿತ್ತು. 2002 ಏಪ್ರಿಲ್ 16 ರಂದು ಸಾರ್ವಜನಿಕ ಉದ್ದಿಮೆಗಳನ್ನು ರಕ್ಷಿಸಲು ಅಲ್ಲಿನ ಕಾರ್ಮಿಕರು ಹೋರಾಟ ನಡೆಸಿದರೆ, 2003 ರ ಮೇ 21 ರಂದು ಆರ್ಥಿಕ ನೀತಿಗಳ ವಿರುದ್ಧ ಇಡೀ ಕಾರ್ಮಿಕವರ್ಗ ಸೆಟೆದು ನಿಂತು ಮುಷ್ಕರ ನಡೆಸಿದ್ದರು. ಇದಕ್ಕೆ ಇತರೆ ಸಾಮೂಹಿಕ ಸಂಘಟನೆಗಳು ಬೆಂಬಲ ಸೂಚಿಸಿದ್ದು, ಕೆಲವೊಂದು ರಾಜ್ಯಗಳಲ್ಲಿ ಬಂದ್ ಕೂಡಾ ನಡೆಯಿತು. ತಮಿಳುನಾಡಿನ ಜಯಲಲಿತಾ ಸರ್ಕಾರ ಮತ್ತು ಸುಪ್ರೀಂಕೋರ್ಟ್‌ನ ತೀರ್ಪಿನಿಂದಾಗಿ ಮುಷ್ಕರದ ಹಕ್ಕಿನ ಮೇಲೆ ಧಾಳಿ ಎರಗಿದಾಗ 2004 ರ ಫೆಬ್ರವರಿ 24 ರಂದು ವ್ಯಾಪಕ ಮುಷ್ಕರ ನಡೆಸುವುದರ ಮೂಲಕ 'ಹೋರಾಟ ಮಾಡಿ ಗಳಿಸಿದ ಹಕ್ಕನ್ನು ಹೋರಾಟ ಮಾಡಿಯೇ ಉಳಿಸಿ ಕೊಳ್ಳುವುದಾಗಿ' ಕಾರ್ಮಿಕ ವರ್ಗ ಘೋಷಿಸಿತು.

ಇದಲ್ಲದೆ ಕೈಗಾರಿಕಾ ಮಟ್ಟದಲ್ಲಿ, ರಾಜ್ಯವಾರು ಹಲವಾರು ಹೋರಾಟ ಗಳು ನಡೆದಿದ್ದವು. ಈ ಎಲ್ಲಾ ಪ್ರತಿಭಟನೆಗಳ ಫಲವಾಗಿ ಕೋಮುವಾದಿ ಬಿಜೆಪಿ ನೇತೃತ್ವದ ಎನ್‌ಡಿಎ ಸರ್ಕಾರ ಸೋತು ಕಾಂಗ್ರೆಸ್ ನೇತೃತ್ವದ ಯುಪಿಎ ಸರ್ಕಾರ ಅಧಿಕಾರಕ್ಕೆ ಬಂದಿತು. ಆದರೆ ಇಂದು ಅಧಿಕಾರದಲ್ಲಿರುವ ಯುಪಿಎ ಈ ಇತಿಹಾಸವನ್ನು ಮರೆತಿದೆ.



ಅದೇ ಆರ್ಥಿಕ ನೀತಿಯ ಮುಂದುವರಿಕೆ

'ಚರಿತ್ರೆಯಿಂದ ಪಾಠ ಕಲಿಯದವರು ಚರಿತ್ರೆಯನ್ನು ನಿರ್ಮಿಸಲಾರರು' ಎಂಬ ಮಾತೊಂದಿದೆ. ಎಡಪಕ್ಷಗಳ ಬೆಂಬಲದೊಂದಿಗೆ ಸರ್ಕಾರ ನಡೆಸಬೇಕಾದ ಅನಿವಾರ್ಯತೆ ಎದುರಿಸಿದ ಯುಪಿಎ, ಸಾಮಾನ್ಯ ಕನಿಷ್ಟ ಕಾರ್ಯಕ್ರಮಗಳಿಗೆ ಒಪ್ಪಬೇಕಾಗಿ ಬಂದರೂ, ಅದರಲ್ಲಿ ಅಡಕವಾಗಿರುವ ಅಂಶಗಳಿಗೆ ವಿರುದ್ಧವಾಗಿ ನಡೆದುಕೊಳ್ಳುತ್ತಿದೆ. ಸಾಮಾನ್ಯ ಕನಿಷ್ಟ ಕಾರ್ಯಕ್ರಮದಲ್ಲಿ ಇಂದಿನ ವ್ಯವಸ್ಥೆಯಲ್ಲಿ ಮೂಲಭೂತ ಬದಲಾವಣೆ ತರುವ ಯಾವುದೇ ಪ್ರಸ್ತಾಪ ಇಲ್ಲದಿದ್ದರೂ, ಸಾರ್ವಜನಿಕ ಉದ್ದಿಮೆಗಳನ್ನು ರಕ್ಷಿಸುವ, ಗ್ರಾಮೀಣ ಬಡಜನರಿಗೆ ಉದ್ಯೋಗ ಅವಕಾಶಗಳನ್ನು ಕಲ್ಪಿಸುವ ಕೆಲವು ಅಂಶಗಳಿದ್ದವು. ಆದರೆ ಸರಕಾರದಲ್ಲಿರುವ ವಿಶ್ವಬ್ಯಾಂಕ್ ಆರ್ಥಿಕ ನೀತಿಯ ಪ್ರತಿಪಾದಕರು ಹಿಂದಿನ ನೀತಿಗಳನ್ನೇ ಮುಂದುವರಿಸುತ್ತಿದ್ದಾರೆ. ನವರತ್ನಗಳೆಂದೇ ಖ್ಯಾತಿಪಡೆದ ಸಾರ್ವಜನಿಕ ಉದ್ದಿಮೆಯ ಶೇರುಗಳನ್ನು ಮಾರಾಟ ಮಾಡಲು ಮುಂದಾಗಿದ್ದು ಮಾತ್ರವಲ್ಲದೆ ಅದರಿಂದ ಬರುವ ಹಣವನ್ನು ಆ ಉದ್ದಿಮೆಯನ್ನು ಅಭಿವೃದ್ಧಿಪಡಿಸುವ ಬದಲಾಗಿ ಕೇಂದ್ರ ಸರ್ಕಾರದ ಬಜೆಟ್ಟಿಗೆ ಖರ್ಚು ಮಾಡುವ ಕುತಂತ್ರದಲ್ಲಿ ಇದ್ದಾರೆ. ಹಿಂದೆ ಮಾರುತಿ ಉದ್ಯೋಗ್‌ನ ಶೇರುಗಳನ್ನು ಮಾರಾಟ ಮಾಡುವಾಗಲೂ ಇದೇ ತಂತ್ರವನ್ನು ಬಳಸಿದ್ದ ಕೇಂದ್ರ ಸರ್ಕಾರ, ಇಂದು ಪ್ರತಿಷ್ಠಿತ ಕಂಪನಿ ಜಪಾನಿನ ಬಹುರಾಷ್ಟ್ರೀಯ ಕಂಪನಿ ಸುಜುಕಿಯ ಪಾಲಾದುದನ್ನು ಮರೆತಿದೆ. ಅಥವಾ 'ಜಾಣ ಮರೆವು' ಆವರಿಸಿದೆ. ಉದ್ಯೋಗ ಖಾತರಿ ಯೋಜನೆಯನ್ನು 200 ಜಿಲ್ಲೆಗಳಿಗೆ ಮಾತ್ರ ಸೀಮಿತಗೊಳಿಸುವ ಮೂಲಕ ಅಸಂಖ್ಯಾತ ಕೃಷಿ ಕಾರ್ಮಿಕರಿಗೆ, ಗ್ರಾಮೀಣ ಮತ್ತು ನಗರದ ನಿರುದ್ಯೋಗಿಗಳಿಗೆ ಆಶಾಕಿರಣವನ್ನು ಮೂಡಿಸುವಲ್ಲಿ ವಿಫಲವಾಗಿದೆ.

ಸೆಪ್ಟೆಂಬರ್ 29 ರ ಮುಷ್ಕರದಲ್ಲಿ ಸಂಘಟಿತ ಕಾರ್ಮಿಕ ವರ್ಗವು ತನ್ನ ಬೇಡಿಕೆಗಳೊಂದಿಗೆ ಅಸಂಘಟಿತರ, ಕೃಷಿಕೂಲಿಕಾರರ, ರೈತರ, ಮಹಿಳೆಯರ -ಹೀಗೆ ಎಲ್ಲಾ ಜನವಿಭಾಗದ ಬೇಡಿಕೆಯನ್ನು ಕೈಗೆತ್ತಿಕೊಂಡಿದೆ. ಶೋಷಿತ, ದುಡಿಯುವ ಜನರ ವಿಶಾಲ ಐಕ್ಯತೆಯನ್ನು ಹುಟ್ಟುಹಾಕುವ ಈ ಮುಷ್ಕರ ಕಾರ್ಮಿಕ ಚಳುವಳಿಯ ಇತಿಹಾಸದಲ್ಲಿ ಪ್ರಮುಖ ಮೈಲಿಗಲ್ಲು. ಇದರ ಯಶಸ್ವಿಗೆ ಶ್ರಮಿಸೋಣ

ಬ್ಯಾಂಕುಗಳ ಶೇರುಗಳ ಮಾರಾಟ, ವಿಲೀನದ ಪ್ರಸ್ತಾಪ, ಖಾಸಗಿ ಬ್ಯಾಂಕುಗಳಲ್ಲಿ ಶೇ 74 ರಷ್ಟು ವಿದೇಶಿ ಬಂಡವಾಳದ ಪ್ರಸ್ತಾಪ, ಟೆಲಿಕಾಂ ಕ್ಷೇತ್ರದಲ್ಲಿ ವಿದೇಶಿ ಬಂಡವಾಳ, ವಿಮಾನ ಯಾನಗಳಲ್ಲಿ ಖಾಸಗಿಯವರಿಗೆ ಅವಕಾಶದ ಜತೆಯಲ್ಲಿ ವಿಮಾನ ನಿಲ್ದಾಣಗಳ ಖಾಸಗೀಕರಣದ ಪ್ರಸ್ತಾಪ, ಚಿಲ್ಲರೆ ಮಾರಾಟದಲ್ಲಿ, ನೇರ ಬಂಡವಾಳ ಮೊದಲಾದ ಕ್ರಮಗಳ ಮೂಲಕ ದೇಶದ ಆರ್ಥಿಕತೆಯನ್ನು ವಿದೇಶಿಯರಿಗೆ ಒತ್ತೆ ಇಡುವ ಹಿಂದಿನ ಸರ್ಕಾರದ ಧೋರಣೆ ಮುಂದುವರೆದಿದೆ.

ನೌಕರರ ಸಾರ್ವಜನಿಕ ಭವಿಷ್ಯನಿಧಿ(PF) ಯಲ್ಲಿ 1 ಲಕ್ಷ ಕೋಟಿ ರೂ. ಜಮಾ ಆಗಿದೆ. ಹಾಗೆಯೇ 95 ರ ನಿವೃತ್ತಿ ಯೋಜನೆಯಲ್ಲಿ ಸಾವಿರಾರು ಕೋಟಿ ರೂ. ಇದೆ. ಇದನ್ನು ಶೇರು ಮಾರುಕಟ್ಟೆಯಲ್ಲಿ ವಿನಿಯೋಗಿಸಲು ಪ್ರಯತ್ನ ನಡೆಯುತ್ತಿದೆ. ಅಂದರೆ ವಿದೇಶಿ ಬಂಡವಾಳಗಾರರು, ದೊಡ್ಡ ಉದ್ದಿಮೆದಾರರು, ಶೇರುಮಾರುಕಟ್ಟೆ ದಲಾಲರು ಈ ಹಣವನ್ನು ದೋಚಲು ಹೊಂಚು ಹಾಕುತ್ತಿದ್ದಾರೆ. ಅವರ ಒತ್ತಡಕ್ಕೆ ಹಿಂದಿನ ಎನ್‌ಡಿಎ ಸರ್ಕಾರದಂತೆ ಇಂದಿನ ಯುಪಿಎ ಸರ್ಕಾರವೂ ಮಣಿಯುತ್ತಿದೆ. ಯಾವಾಗಲೂ ಅವರ ಲಾಭದ ಆಸೆಯನ್ನೇ ಪ್ರಧಾನವಾಗಿಟ್ಟುಕೊಂಡಿರುವ ವಿದೇಶಿ ಬಂಡವಾಳಗಾರರು ಒಮ್ಮಿಂದೊಮ್ಮೆಗೆ ಭಾರತದ ಶೇರು ಮಾರುಕಟ್ಟೆಯಿಂದ ಬಂಡವಾಳ ಹಿಂತೆಗೆದು ಬೇರೆ ದೇಶದಲ್ಲಿ ತೊಡಗಿಸಿದರೆ, ತಮ್ಮ ಬೆವರು ಸುರಿಸಿ ಗಳಿಸಿದ ಹಣವನ್ನು ತೊಡಗಿಸಿದ ನಿವೃತ್ತಿದಾರರಿಗೆ ಪಂಗನಾಮ!

ಕಾರ್ಮಿಕ ಸಂಘಗಳ ಮೇಲೆ ಮುಂದುವರಿದ ಧಾಳಿ

ಬಹುರಾಷ್ಟ್ರೀಯ ಕಂಪನಿಗಳಿಗೆ ಉತ್ತೇಜನ ನೀಡುವ ನೆಪದಲ್ಲಿ ಕಾರ್ಮಿಕ ಕಾನೂನುಗಳಿಗೆ ಬೆಲೆ ಇಲ್ಲದಂತಾಗಿದೆ. ಹರ್ಯಾಣ ರಾಜ್ಯದ ಗುರ್‌ಗಾಂವ್ ನಲ್ಲಿ ಕಾರ್ಮಿಕರ ಮೇಲೆ ನಡೆದ ಪಾಶವೀ ಕೃತ್ಯ ಇದಕ್ಕೊಂದು ಉದಾಹರಣೆ. ಬೆಂಗಳೂರಿನ ಟಯೋಟ ಕಿರ್ಲೋಸ್ಕರ್ ಕಂಪನಿ, ಮೆಟಲ್ ಕ್ಲೋಸರ್ಸ್ ಮೊದಲಾದ ಕಡೆಗಳಲ್ಲಿ ಕಾರ್ಮಿಕ ಕಾನೂನುಗಳಿಗೆ ಯಾವುದೇ ಬೆಲೆ ಇಲ್ಲದಂತಾಗಿದೆ. ಗಾರ್ಮೆಂಟ್ಸ್ ಫ್ಯಾಕ್ಟರಿಯಲ್ಲಿ ದುಡಿಯುತ್ತಿರುವ ಮಹಿಳೆಯರಿಗೆ 12 ಗಂಟೆಯ ಕೆಲಸ, ಜತೆಗೆ ಕನಿಷ್ಠ ವೇತನವೂ ದೊರಕುತ್ತಿಲ್ಲ. ಅಲ್ಲದೆ ಲೈಂಗಿಕ ಕಿರುಕುಳ ಬೇರೆ. ರಫ್ತು ವ್ಯಾಪಾರ ಮಾಡುವ ಮಾಲಿಕ ಕೋಟಿಗಟ್ಟಲೆ ಸಂಪಾದಿಸಿದರೂ ಮಹಿಳಾ ಕಾರ್ಮಿಕರನ್ನು ಕೇಳುವವರೇ ಇಲ್ಲ.

ಬೋನಸ್ ಕಾಯಿದೆಗೆ ತಿದ್ದುಪಡಿ ತಾರದೆ ಇರುವುದರಿಂದ ಹೆಚ್ಚುಕಡಿಮೆ ಎಲ್ಲಾ ಕಾರ್ಮಿಕರೆ ಬೋನಸ್‌ನಿಂದ ವಂಚಿತರಾಗಿದ್ದಾರೆ. ಅಸಂಘಟಿತ ಕಾರ್ಮಿಕರಿಗೆ ಬೋನಸ್ ಎಂಬುದು ಮರೀಚಿಕೆ.

ಈಗಿರುವ ಕೈಗಾರಿಕಾ ವಿವಾದ ಕಾಯಿದೆ ಪ್ರಕಾರ 100 ಕ್ಕಿಂತ ಹೆಚ್ಚು ನೌಕರರನ್ನು ಹೊಂದಿರುವ ಸಂಸ್ಥೆಗಳು ರಿಟ್ರೆಂಚ್‌ಮೆಂಟ್ ಅಥವಾ ಲೇ ಆಫ್ ಮಾಡಲು ಸರ್ಕಾರದ ಒಪ್ಪಿಗೆ ಪಡೆಯಬೇಕಾಗುತ್ತದೆ ಅದನ್ನು ಇನ್ನುಮುಂದೆ 300ಕ್ಕೆ ಏರಿಸುವ ಪ್ರಸ್ತಾಪವನ್ನು ಯುಪಿಎ ಸರ್ಕಾರ ಮುಂದಿಟ್ಟಿದೆ. ಇದರಿಂದ ಶೇಕಡಾ 90 ರಷ್ಟು ಸಂಸ್ಥೆಗಳು ಕೈಗಾರಿಕಾ ವಿವಾದ ಕಾಯಿದೆಯಿಂದ ಹೊರಗುಳಿಯುವುದು ಮಾತ್ರವಲ್ಲದೆ, ಈಗ ಸಿಗುತ್ತಿರುವ ಅಲ್ಪಸ್ವಲ್ಪ ರಕ್ಷಣೆಯಿಂದ ವಂಚಿತರಾಗುತ್ತಾರೆ.

ಭಾರತವು ಅಂತರರಾಷ್ಟ್ರೀಯ ಕಾರ್ಮಿಕ ಸಂಘಟನೆ (ILO) ಯ ಸಂಸ್ಥಾಪಕ ಸದಸ್ಯನಾಗಿದ್ದರೂ ಅದು ಅಂಗೀಕರಿಸಿದ ಸಾಮೂಹಿಕ ಚೌಕಾಸಿಯ ಹಕ್ಕು ಮತ್ತು ಸಂಘಟನೆಯ ಹಕ್ಕನ್ನು ಭಾರತ ಸರ್ಕಾರವು ಅಂಗೀಕರಿಸಿಲ್ಲ. ಇದರಿಂದಾಗಿ ಸರ್ಕಾರಿ ನೌಕರರಿಗೆ ಮುಷ್ಕರ ಮಾಡುವ ಹಕ್ಕನ್ನು ಮಾನ್ಯ ಮಾಡಿಲ್ಲ. ಆದರೆ ನೆನೆಗುದಿಗೆ ಬಿದ್ದಿರುವ 6ನೆ ವೇತನ ಆಯೋಗದ ರಚನೆಗೆ ಯಾವುದೇ ಕ್ರಮ ಕೈಗೊಂಡಿಲ್ಲ. ಮುಷ್ಕರದ ಹಕ್ಕಿನಿಂದ ವಂಚಿತರಾದವರು ವೇತನ ಏರಿಕೆ, ಸೇವಾ ಸೌಲಭ್ಯಗಳಿಂದಲೂ ವಂಚಿತರು! ಹೊಸತಾಗಿ ಕೆಲಸಕ್ಕೆಸೇರಿದ ನೌಕರರ 2004 ಕ್ಕಿಂತ ಮೊದಲು ಜಾರಿಯಲ್ಲಿರುವ ನಿವೃತ್ತಿವೇತನ ಕಾಯಿದೆಗೆ ಒಳಪಡುವುದಿಲ್ಲ!

ಕರ್ನಾಟಕ ರಾಜ್ಯದಲ್ಲಂತೂ, ವಿಶ್ವಬ್ಯಾಂಕ್ ಶರತ್ತುಗಳಿಗೆ ಮಣಿದು ಸರ್ಕಾರಿ ನೌಕರರಿಗೆ 5ನೆ ವೇತನ ಆಯೋಗದ ಹಲವಾರು ಶಿಫಾರಸ್ಸುಗಳೇ ಜಾರಿಯಾಗಿಲ್ಲ.

ಪ್ರಮುಖ ಕಾರ್ಮಿಕ ಸಂಘಟನೆಗಳು ಮತ್ತು ಎಡ ಪಕ್ಷಗಳ ಒತ್ತಾಯದ ಮೇರೆಗೆ ಭವಿಷ್ಯ ನಿಧಿಯ ಮೇಲೆ ಕಡಿತಗೊಳಿಸಿದ್ದ ಶೇ 1(8.5 ರಿಂದ 9.5 ರಷ್ಟು ಬಡ್ಡಿಯನ್ನು ಪುನಃ ನೀಡಿದರೂ, ಎನ್‌ಡಿ...

ಪುಟ 5 ಕ್ಕೆ

ಬೆಂಗಳೂರಿನ ಟೌನ್‌ಹಾಲ್‌ನಲ್ಲಿ ಕಾರ್ಮಿಕ ಸಂಘಟನೆಗಳ ಜಂಟಿ ಕ್ರಿಯಾ ಸಮಿತಿಯಡಿಯಲ್ಲಿ ನಡೆದ ಸಮಾವೇಶದಲ್ಲಿ ವಿ.ಜೆ.ಕೆ.ನಾಯರ್ ಮಾತನಾಡುತ್ತಿರುವುದು.



ವಿದೇಶಿ ಬಂಡವಾಳದ ಹೆಸರಲ್ಲಿ ಕಾರ್ಮಿಕರ ಸುಲಿಗೆ ಸಲ್ಲದು

ಆಗಸ್ಟ್ 24, 2005 ಕರ್ನಾಟಕದ ಕಾರ್ಮಿಕ ಚಳುವಳಿಯ ಧ್ರುವತಾರೆ ಕಾಮ್ರೇಡ್ ಸೂರ್ಯನಾರಾಯಣ ರಾವ್‌ರವರ 81ನೇ ಜನ್ಮದಿನಾಚರಣೆ. ಇದರ ಹಿನ್ನೆಲೆಯಲ್ಲಿ ಕಾಂ|| ಎಸ್.ಸೂರ್ಯನಾರಾಯಣರಾವ್ ಸ್ಮಾರಕ ದತ್ತಿ ಉಪನ್ಯಾಸ ಸಮಿತಿಯು 'ಬಂಡವಾಳ ಹೂಡಿಕೆ ಉತ್ತೇಜನ ಮತ್ತು ಕಾರ್ಮಿಕರ ಹಕ್ಕುಗಳು' ಎಂಬ ವಿಷಯದ ಬಗ್ಗೆ ವಿಚಾರ ಸಂಕಿರಣವೊಂದನ್ನು ಸಂಘಟಿಸಿತ್ತು. ಇದರಲ್ಲಿ ವಿದೇಶಿ ಬಂಡವಾಳ ಮತ್ತು ಕಾರ್ಮಿಕರ ಹಕ್ಕುಗಳ ಬಗ್ಗೆ ನಡೆದ ವಿಚಾರಮಂಥನದ ವರದಿ

ಕಾಮ್ರೇಡ್ ಸೂರಿ ಜನ್ಮದಿನಾಚರಣೆ

ಯಾವತ್ತೂ ಕಾರ್ಮಿಕರ ಪರವಾಗಿ ಕಾನೂನು ಸಮರ ನಡೆಸುತ್ತಾ ಬಂದಿರುವ ಕರ್ನಾಟಕ ರಾಜ್ಯದ ಹಿರಿಯ ನ್ಯಾಯವಾದಿ ಕೆ.ಸುಬ್ಬರಾವ್‌ರವರು ಅಧ್ಯಕ್ಷತೆ ವಹಿಸಿದ್ದ ಈ ವಿಚಾರ ಸಂಕಿರಣದಲ್ಲಿ ಸಿಐಟಿಯು ರಾಜ್ಯ ಪ್ರಧಾನ ಕಾರ್ಯದರ್ಶಿ, ಅಖಿಲ ಭಾರತ ಉಪಾಧ್ಯಕ್ಷರಾದ ವಿ.ಜೆ.ಕೆ. ನಾಯರ್ ಚರ್ಚೆಗೆ ಪೂರಕವಾಗಿ (ಲಿಖಿತ)ವಿಷಯ ಮಂಡಿಸಿದರು. ರಾಜ್ಯ ಸರ್ಕಾರದ ಕಾರ್ಮಿಕ ಮತ್ತು ಹಜ್ ಖಾತೆ ಸಚಿವರಾದ ತನ್ವೀರ್ ಸೇಠ್, ಸಿಪಿಐ(ಎಂ) ಶಾಸಕರಾದ ಜಿ.ವಿ.ಶ್ರೀರಾಮ ರೆಡ್ಡಿ ವಿಚಾರ ಸಂಕಿರಣದಲ್ಲಿ ಮಾತನಾಡಿದರು.

ವಿಜೆಕೆಯವರು ಮಾತನಾಡುತ್ತ ವಿದೇಶಿ ಬಂಡವಾಳವನ್ನು ಆಕರ್ಷಿಸುವ ರಾಜ್ಯಗಳ ನಡುವೆ ಪೈಪೋಟಿಯಲ್ಲಿ ಈಗ ಮಹಾರಾಷ್ಟ್ರದ ನಂತರದ ಸ್ಥಾನ - ಎರಡನೇ ಸ್ಥಾನವನ್ನು ಕರ್ನಾಟಕವು ಗಳಿಸಿದೆ. ಇದು ಹೇಗೆ ಸಾಧ್ಯವಾಯಿತು! ವಿದೇಶಿ ಬಂಡವಾಳಕ್ಕೆ ನಮ್ಮ ವಿರೋಧವಿಲ್ಲ. ಆದರೆ ಆ ಹೆಸರಿನಲ್ಲಿ ಕಾರ್ಮಿಕರನ್ನು ಸುಲಿಗೆಗೆ ಗುರಿಪಡಿಸುವ ನೀತಿಗೆ ನಮ್ಮ ಒಪ್ಪಿಗೆ ಇಲ್ಲ. ಬಹುರಾಷ್ಟ್ರೀಯ ಕಂಪನಿಗಳಲ್ಲಿ ಸಂಘ ರಚಿಸಿಕೊಂಡರೆ ಮುಖಂಡರನ್ನು ಕಾರ್ಖಾನೆಯಿಂದ ಹೊರಕ್ಕೆ ಹಾಕಲಾಗುತ್ತದೆ. ಇದು ತಪ್ಪಬೇಕು. ಹಿಂದೆ ಗ್ಯಾಟ್ ಡಂಕೆಲ್ - ಒಪ್ಪಂದಗಳ ವಿರುದ್ಧ - ಡಬ್ಲ್ಯು.ಟಿ.ಒ. ಷರತ್ತುಗಳಿಗೆ ಭಾರತ ಸಹಿ ಹಾಕುವಾಗ ನಮ್ಮ ಕಾರ್ಮಿಕ ಮುಖಂಡರು ಚಳುವಳಿ ನಡೆಸಿ ಮೂಳೆ ಮುರಿತ- ಹಲ್ಲು ಮುರಿತಕ್ಕೆ ಒಳಗಾದರು. ಅಂತಹ ಡಬ್ಲ್ಯು.ಟಿ.ಒ. ಷರತ್ತುಗಳಲ್ಲಿ ಕೂಡ ಸಾಮಾಜಿಕ ಉಪನಿಯಮದ ಬಗೆಗೆ ಹೇಳಲಾಗಿದೆ. ಸಾಮೂಹಿಕ ಚೌಕಾಸಿ (Collective Bargain) ಗೆ ಅವಕಾಶವಿದೆ. ಅಂತರರಾಷ್ಟ್ರೀಯ ಕಾರ್ಮಿಕ ಸಂಘಟನೆ (ಐ.ಎಲ್.ಒ.) ಗೌರವಯುತ ಕೆಲಸದ ಸ್ಥಿತಿ (Decent Working Condition) ಬಗೆಗೆ ಹೇಳಿದೆ. ಆದರೆ ಇಲ್ಲಿ ಕಾರ್ಮಿಕರ ಪರಿಸ್ಥಿತಿ ಏನು. ಎಷ್ಟೋ ಕಡೆ ತಿಂಗಳಲ್ಲಿ 26 ದಿನ ಕೆಲಸ ಮಾಡಿಸಿಕೊಂಡು 13 ದಿನದ ಕೆಲಸವನ್ನು ಮಾತ್ರ ದಾಖಲೆ ಮಾಡುತ್ತಾರೆ. ಈ ಬಗೆಗೆ ಪ್ರಶ್ನಿಸಿದರೆ ನಮ್ಮನ್ನು ಜೈಲಿಗೆ ಹಾಕುತ್ತಾರೆ. ಕೆಲವೊಂದು ವಿಷಯದಲ್ಲಿ ದೇಶೀಯ ಬಂಡವಾಳಗಾರರಿಗಿಂತ ಬಹುರಾಷ್ಟ್ರೀಯ ಕಂಪನಿಗಳೇ ವಾಸಿ. ನಮ್ಮವರೇ ನಮ್ಮನ್ನು ಕನಿಷ್ಟ ಕೂಲಿ ಕೊಡದೇ ಕಾರ್ಮಿಕರನ್ನು ಪ್ರತಿನಿತ್ಯ ಕೊಲ್ಲುತ್ತಿದ್ದಾರೆ.

ಆಗಸ್ಟ್ 14ರ ರಾತ್ರಿ ದೇಶ ಸ್ವಾತಂತ್ರ್ಯ ಗಳಿಸುವ ಸಂದರ್ಭದಲ್ಲಿ, ದೇಶದಲ್ಲಿ ಒಬ್ಬ ಮನುಷ್ಯನ ಕಣ್ಣಿನಲ್ಲಿ ಕಣ್ಣೀರಿದ್ದರೂ, ಆ ಸ್ವಾತಂತ್ರ್ಯಕ್ಕೆ ಅರ್ಥವಿಲ್ಲ ಎಂದು ನೆಹರು ಹೇಳಿದ್ದರು. ನೆಹರು ಅವರ ರಾಜಕೀಯ ಪಕ್ಷದ ಸರ್ಕಾರಗಳು ಇಂದುಹಲವಾರು ಇವೆ. ಎಷ್ಟು ಜನರ ಕಣ್ಣಿನಲ್ಲಿ ನೀರಿದೆ? ಗೌರವಯುತ ಕೆಲಸ ಸ್ಥಿತಿ ಇದೆಯೇ ಎಂದು ವಿಜೆಕೆ ನಾಯರ್ ರವರು ಪ್ರಶ್ನೆಗಳನ್ನು ಮುಂದಿಟ್ಟರು.

ಯಾವ ಕಾರ್ಮಿಕ ವರ್ಗದ ಅಭ್ಯುದಯಕ್ಕಾಗಿ-ಯಾವ ಕಾರ್ಮಿಕ ವರ್ಗದ ಹಕ್ಕುಗಳ ರಕ್ಷಣೆಗಾಗಿ ಕಾಂ. ಸೂರಿಯವರು ಸುಮಾರು ಅರ್ಧ ದಶಕಕ್ಕೂ ಹೆಚ್ಚು ಕಾಲ ಅವಿರತ ಶ್ರಮಿಸಿದರೋ - ದುಡಿದರೋ ಆ ಕಾರ್ಮಿಕ ವರ್ಗದ ಸ್ಥಿತಿಗಳ ಬಗ್ಗೆ ಚರ್ಚಿಸುವ ವಿಚಾರ ಸಂಕಿರಣವನ್ನು ಈ ಮಹಾನ್ ನಾಯಕರ ಜನ್ಮದಿನದಂದು ಸಂಘಟಿಸಲಾಗಿದೆ ಎಂದು ವಿಜೆಕೆ ಯವರು ತಿಳಿಸಿದರು.

ವಿಜೆಕೆಯವರು ಮಂಡಿಸಿದ ವಿಚಾರಗಳಿಗೆ ಪ್ರತಿಕ್ರಿಯಿಸಿ ಮಾತನಾಡಿದ ಕಾರ್ಮಿಕ ಸಚಿವರು 1926ರ ಕಾರ್ಮಿಕ ಸಂಘಟನೆಗಳ ಕಾಯ್ದೆಗೆ ನಂತರ ಹಲವು ಬಾರಿ ತಿದ್ದುಪಡಿಗಳನ್ನು ತಂದಿದ್ದರೂ ಸಹ ಅವು ಬಹುತೇಕ ಜಾರಿಯಾಗದೇ ಹಾಗೆಯೇ ಉಳಿದಿವೆ. ಕಾರ್ಮಿಕ ವಿವಾದಗಳನ್ನು ಕಾರ್ಮಿಕ ನ್ಯಾಯಾಲಯಗಳಿಗೆ ಶಿಫಾರಸ್ಸು ಮಾಡಿದರೆ ತುಂಬಾ ವಿಳಂಬವಾಗುತ್ತದೆ. ಹೀಗಾಗಿ ಸರ್ಕಾರವು ಅದಕ್ಕೆ ಬದಲಿಗೆ ತ್ರಿಪಕ್ಷೀಯ ಮಾತುಕತೆಯ ಮೂಲಕ ಸಮಸ್ಯೆಗಳನ್ನು ಇತ್ಯರ್ಥ ಪಡಿಸಲು ಪ್ರಯತ್ನಿಸುತ್ತಿದೆ. ಇಂತಹ ಚರ್ಚೆಗಳು ಕೆಲವು ಪ್ರಕರಣಗಳಲ್ಲಿ 10-12-16 ಸಭೆಗಳವರೆಗೂ ಮುಂದುವರಿದಿರುವುದಿದೆ. 8-10 ಗಂಟೆಗಳ ಕಾಲ ಸತತವಾಗಿ ನಾನೇ ಸಭೆಯಲ್ಲಿದ್ದು ಚರ್ಚಿಸಿದ್ದೇನೆ.

ಕೆಲಸದ ಪರಿಸ್ಥಿತಿಯ ಕುರಿತು ನಿಯಮಾವಳಿ ರೂಪಿಸುವ ಮುನ್ನ 'ಉದ್ಯೋಗ ಸ್ಥಾಯಿ ಆದೇಶ' ನೀಡುವ ಮುಂಚೆ ಕಾರ್ಖಾನೆಯ ಕಾರ್ಮಿಕ ಸಂಘದ ಇಲ್ಲವೇ ಕಾರ್ಮಿಕ ಅಭಿಪ್ರಾಯ - ಒಪ್ಪಿಗೆ ಪಡೆಯಬೇಕೆಂದು ನಿಯಮಾವಳಿಗೆ ಇತ್ತೀಚೆಗೆ ತಿದ್ದುಪಡಿ ತರಲಾಗಿದೆ. ಕಾರ್ಮಿಕರ ಪರವಾಗಿ ತೀರ್ಪು ಇತ್ಯರ್ಥವಾದ ಪ್ರಕರಣಗಳಲ್ಲಿ ಕಾರ್ಮಿಕರಿಗೆ ಪೂರ್ಣ ವೇತನ ನೀಡುವಂತೆ ಸಹ ಕ್ರಮ ವಹಿಸಲಾಗಿದೆ.

ಉದಾರೀಕರಣ - ಖಾಸಗೀಕರಣ - ಹಾಗೂ ವಿದೇಶಿ ಬಂಡವಾಳ ಬರುತ್ತಿರುವ ಹಿನ್ನೆಲೆಯಲ್ಲಿ ಕಾನೂನುಗಳಲ್ಲಿ-ಉದ್ಯೋಗ ಪರಿಸ್ಥಿತಿಗಳಲ್ಲಿ ಹಲವು ಬದಲಾವಣೆಗಳಾಗುತ್ತಿವೆ. ಈ ಸಂದರ್ಭದಲ್ಲಿ ಕಾರ್ಮಿಕರ ಪರವಾಗಿ ತಮ್ಮ ಪ್ರಸ್ತಾಪಗಳನ್ನು ನೀಡಿದಲ್ಲಿ ಅದನ್ನೂ ಪರಿಗಣಿಸಲಾಗುವುದು. ಬಂಡವಾಳ ಕ್ರೋಢೀಕರಣ - ಉದ್ಯೋಗ ಸೃಷ್ಟಿ ಆಗಬೇಕಿದೆ. ಈ ಹಿನ್ನೆಲೆಯಲ್ಲಿ ಕಾರ್ಖಾನೆ ಸ್ಥಾಪನೆಯಾದ 5 ವರ್ಷಗಳವರೆಗೆ ನಿಯಮಾವಳಿಗಳಿಂದ ರಿಯಾಯತಿ ನೀಡಬೇಕೆಂಬ ಪ್ರಸ್ತಾಪವೂ ಇದೆ. ಉತ್ಪಾದನಾ ಕ್ಷೇತ್ರದಲ್ಲಿ ಶೇ. 2-3 ಉದ್ಯೋಗಗಳು ಹೆಚ್ಚಿದರೂ ಲಕ್ಷಾಂತರ ಉದ್ಯೋಗಗಳು ಸೃಷ್ಟಿಯಾಗುವುದೆಂದು ಸಚಿವರು ಹೇಳಿದರು.

ಜಿ.ವಿ.ಶ್ರೀರಾಮರೆಡ್ಡಿಯವರು ಮಾತನಾಡಿ ವಿದೇಶಿ ಬಂಡವಾಳ ಅತಿ ಹೆಚ್ಚು ಬರುತ್ತಿರುವುದು ಷೇರು ಮಾರುಕಟ್ಟೆಗೆ. ಉತ್ಪಾದನಾ ವಲಯಕ್ಕಲ್ಲ. ಎಲ್ಲಿ ಹೆಚ್ಚು ಲಾಭ ಇದೆಯೋ ಅಲ್ಲಿಗೆ ಬಂಡವಾಳ ನುಗ್ಗುತ್ತಿದೆ. ಈ ಹಿನ್ನೆಲೆಯಲ್ಲಿ ನಮ್ಮ ಸಂವಿಧಾನ-ಕಾನೂನುಗಳನ್ನು ಕಾರ್ಮಿಕರ ಹಕ್ಕುಗಳನ್ನು ದಮನ ಮಾಡಲಾಗುತ್ತಿದೆ. ಸಂವಿಧಾನ ನಮಗೆ ನೀಡಿರುವ ಮೂಲಭೂತ ಹಕ್ಕುಗಳನ್ನು ಹಾಗೂ ನಿರ್ದೇಶಕ ತತ್ವವನ್ನು ಧಿಕ್ಕರಿಸಲಾಗಿದೆ.


ವೇದಿಕೆಯಲ್ಲಿ ಕಾರ್ಮಿಕ ಸಚಿವರಾದ ತನ್ವೀರ್ ಸೇಠ್, ಜಿ.ವಿ.ಶ್ರೀರಾಮರೆಡ್ಡಿ ಮತ್ತು ಕೆ.ಸುಬ್ಬರಾವ್ ಮತ್ತಿತರರು.

ಅದಲ್ಲದೆ ಸಿಐಟಿಯು ಕಾಲಿಡುವ ಕಡೆ ಕಾರ್ಖಾನೆಯನ್ನು ಮುಚ್ಚಲಾಗುತ್ತದೆ ಎಂದು ಅಪಪ್ರಚಾರ ಮಾಡಲಾಗುತ್ತಿದೆ. ರಾಜ್ಯ ರಾಜಕಾರಣದಲ್ಲಿ ಭಾರಿ ಕುಸ್ತಿ ನಡೆಸಿರುವ ಡಿ.ಕೆ.ಶಿವಕುಮಾರ್ ಮತ್ತು ದೇವೇಗೌಡರು ಟಯೋಟ ಕಿರ್ಲೋಸ್ಕರ್ ಕಾರ್ಖಾನೆ ಪ್ರಶ್ನೆಯಲ್ಲಿ ಮಾತ್ರ ಮಾಲೀಕರ ಪರವಾಗಿ ಒಂದಾಗಿದ್ದಾರೆ. ಬಂಡವಾಳಿಗರೆಲ್ಲಾ ಸಂಘಟಿತರಾಗಿ ಅವರ ರಾಜಕೀಯ ಮಾಡುತ್ತಿದ್ದಾರೆ. ಕಾರ್ಮಿಕರು ಮಾತ್ರ 'ಬೇಡಿಕೆಗಳಿಗಾಗಿ ಕೆಂಬಾವುಟ, ಚುನಾವಣೆಯಲ್ಲಿ ಹಸಿರು-ಮತ್ತಿತರ ಬಾವುಟ' ಎಂಬ ನಡವಳಿಕೆ ತೋರುತ್ತಿದ್ದಾರೆ. ಇವು ಬದಲಾಗಬೇಕೆಂದರು.

ರೈತರಿಗೆ ಸ್ವಲ್ಪ ರಿಯಾಯಿತಿ ನೀಡುವ ತಕ್ಕ ಮಟ್ಟಿಗೆ ಉತ್ತಮವಾಗಿದ್ದ ಬಜೆಟ್ ಕೊಟ್ಟ ಸಿದ್ಧರಾಮಯ್ಯನವರ ಬಜೆಟ್ ವಿರುದ್ಧ ನಾರಾಯಣಮೂರ್ತಿ-ಪ್ರೇಮ್‌ಜಿ ತಿರುಗಿ ಬಿದ್ದು ಬಜೆಟ್ ನಿರ್ಧಾರ ಬದಲಿಸಿದರು.

ಆಟೋಮೊಬೈಲ್ ಕೈಗಾರಿಕೆಯನ್ನು 'ಸಾರ್ವಜನಿಕ ಅಗತ್ಯ ಸೇವೆ' ಪಟ್ಟಿಯಲ್ಲಿ ಸೇರಿಸುವ ಸರ್ಕಾರ ಯಾರ ಪರವಾಗಿದೆ ಎಂಬುದನ್ನು ಈ ಕಾನೂನೇ ಹೇಳುತ್ತಿದೆ ಎಂದರು. ಇಂದು ನಿಜವಾದ ಅಧಿಕಾರ ಇರುವುದು ಪೋಲೀಸರ ಕೈಯಲ್ಲಿ. ಸ್ವತಃ ರಾಷ್ಟ್ರಪತಿಗಳೇ ಏನಾದರೂ ದೂರು ಕೊಡಬೇಕಾದರೂ ಈ ಪೊಲೀಸರಲ್ಲೆ ದೂರು ಕೊಡಬೇಕು, ಇಂತಹ ಪರಿಸ್ಥಿತಿ ತಪ್ಪಬೇಕು. ಈ ನೀತಿಯ ವಿರುದ್ಧ ಕಾರ್ಮಿಕ ವರ್ಗ ಕಾಂ. ಸೂರಿಯವರು ಹಾಕಿಕೊಟ್ಟ ಮಾರ್ಗದಲ್ಲಿ ಮುನ್ನಡೆಯಬೇಕೆಂದರು.

ಸಭೆಯ ಅಧ್ಯಕ್ಷತೆ ವಹಿಸಿದ್ದ ಕೆ.ಸುಬ್ಬರಾವ್ ರವರು ಮಾತನಾಡಿ 1956ರಲ್ಲಿ ತಾವು ಮಂಗಳೂರಿನಿಂದ ಬೆಂಗಳೂರಿಗೆ ಬಂದಾಗ ಮೊದಲು ಭೇಟಿಯಾಗಿದ್ದೇ ಕಾಂ. ಸೂರಿ ಯವರನ್ನು. ಜನರನ್ನು-ಕಾರ್ಮಿಕರನ್ನು ಸ್ಫೂರ್ತಿಗೊಳಿಸಿ ಉತ್ತೇಜಿಸುವ ಶಕ್ತಿ ಅವರಲ್ಲಿತ್ತು.

ಅಂದು ಬೆಂಗಳೂರಿನಲ್ಲಿ ಹೆಚ್ಚು ಕಾರ್ಖಾನೆಗಳು ಇರಲಿಲ್ಲ. ಆದರೂ ಅಂದಿನ ಕಾರ್ಮಿಕರು ಸಣ್ಣ ಸಭೆಗಳೆಂದರೂ 3 ಸಾವಿರ 4 ಸಾವಿರದ ಸಂಖ್ಯೆಯಲ್ಲಿ ಸೇರುತ್ತಿದ್ದರು. ಇಂದು ಕಾರ್ಮಿಕರಿಗೆ ಭದ್ರತೆ ಇಲ್ಲ. ಎಲ್ಲ ಕಡೆ ಕಾಂಟ್ರಾಕ್ಟ್ ಆಧಾರದ ದುಡಿಮೆ ಜಾರಿಗೆ ಬರುತ್ತಿದೆ. ಕಾಂಟ್ರಾಕ್ಟ್ ಪದ್ಧತಿಯನ್ನು ರದ್ದು ಪಡಿಸಬೇಕು. ನಮ್ಮ ಕಾನೂನು 'ಕಾಂಟ್ರಾಕ್ಟ್ ಲೇಬರ್ ಅಬಾಲಿಷನ್ ಮತ್ತು ರೆಗ್ಯುಲೇಷನ್ ಆಕ್ಟ್' ಎಂದಿದೆ. ಇದರಲ್ಲಿ ರೆಗ್ಯುಲೇಷನ್ ಏಕೆ ಬಂತು. ಅದು ಬೇಡ, ಅಬಾಲಿಷನ್ ಮಾತ್ರ ಇರಲಿ ಎಂದರು.

ನಾವೇನು ಕಮ್ಯುನಿಸಂ ಅನ್ನು ಜಾರಿ ಮಾಡಿ ಎಂದು ಕೇಳುತ್ತಿಲ್ಲ. ಕನಿಷ್ಟ ಸಂವಿಧಾನದಲ್ಲಿ ಹೇಳಲಾಗಿರುವ 'ಸಮಾಜವಾದ'ವನ್ನಾದರೂ ಜಾರಿ ಮಾಡಿ. ಇದುವರೆಗೆ ರಚಿಸಿರುವ ಕಾರ್ಮಿಕ ಕಾನೂನುಗಳನ್ನು ಸರಿಯಾಗಿ ಜಾರಿ ಮಾಡಿ ಎಂದು ಅವರು ಸರ್ಕಾರಗಳನ್ನು ಆಗ್ರಹಿಸಿದರು. ಚೀನಾದ ಬಗೆಗೆ ಬಹಳ ಜನ ಮಾತನಾಡುತ್ತಿದ್ದಾರೆ. ಬಂಡವಾಳಿಗರೂ ಮಾತನಾಡುತ್ತಿದ್ದಾರೆ.

ಚೀನದಲ್ಲಿರುವ ಪರಿಸ್ಥಿತಿ ಭಾರತದಲ್ಲಿಲ್ಲ. ಅಲ್ಲಿ ಏನೇ ಕಾನೂನು ಮಾಡಿದರೂ ಅದು ಜಾರಿಯಾಗುತ್ತದೆ. ಇಲ್ಲಿ ಯಾವುದೂ ಸರಿಯಾಗಿ ಜಾರಿಯಾಗುವುದಿಲ್ಲ. ಕಾರ್ಖಾನೆಗಳಲ್ಲಿ ಕಾರ್ಮಿಕ ಸಂಘವನ್ನು ಮಾನ್ಯತೆ ಮಾಡುವ ಸಂಬಂಧ 'ರಹಸ್ಯ ಮತದಾನ ಪದ್ಧತಿ'ಯನ್ನು ಇಲ್ಲಿಯವರೆಗೂ ಜಾರಿ ಮಾಡಲಾಗಿಲ್ಲ ಎಂದು ಅವರು ವಿಷಾದಿಸಿದರು.

ನಗರದ ಎನ್.ಜಿ.ಒ. ಸಭಾಂಗಣದಲ್ಲಿ ನಡೆದ ಈ ವಿಚಾರ ಸಂಕಿರಣದಲ್ಲಿ ಟ್ರಸ್ಟಿನ ಕಾರ್ಯದರ್ಶಿಗಳಾದ ಕೆ.ಪ್ರಕಾಶ್ ಅತಿಥಿಗಳನ್ನು ಸ್ವಾಗತಿಸಿ ಪ್ರಸ್ತಾವಿಕ ಮಾತುಗಳನ್ನಾಡಿದರು. ಸಿಐಟಿಯು ರಾಜ್ಯ ಸಹ ಕಾರ್ಯದರ್ಶಿ ಪ್ರಸನ್ನ ಕುಮಾರ್, ಸಿಐಟಿಯು ಜಿಲ್ಲಾ ಅಧ್ಯಕ್ಷರಾದ ಇ.ಕೆ.ಎನ್.ರಾಜನ್, ಪ್ರ.ಕಾರ್ಯದರ್ಶಿ ಮೀನಾಕ್ಷಿ ಸುಂದರಂ, ಶ್ರೀಮತಿ ಯಶೋಧ ಸೂರ್ಯನಾರಾಯಣರಾವ್ ವೇದಿಕೆಯಲ್ಲಿದ್ದರು. ಮೀನಾಕ್ಷಿ ಸುಂದರಂ ವಂದಿಸಿದರು. ಆರಂಭದಲ್ಲಿ ಕಾಂ. ಸೂರಿಯವರ ಭಾವಚಿತ್ರಕ್ಕೆ ಹೂಮಾಲೆ ಅರ್ಪಿಸುವ ಮೂಲಕ ಅವರಿಗೆ ಗೌರವ ಸಲ್ಲಿಸಲಾಯಿತು. ನೂರಾರು ಕಾರ್ಮಿಕರು ಮತ್ತು ಸೂರಿಯವರ ಮಕ್ಕಳು - ಕುಟುಂಬದ ಸದಸ್ಯರೂ ಪಾಲ್ಗೊಂಡಿದ್ದರು. ○

ಸ್ವಾತಂತ್ರ್ಯಯೋಧರ ಸ್ಮಾರಕಕ್ಕೆ ಶನಿದೇವರ ಕಾಟ

ದೇಶವು ಸ್ವತಂತ್ರವಾಗಿ ಐವತ್ತೊಂಬತ್ತು(59) ವರ್ಷಗಳು ಸಂದಿವೆ, ಸ್ವಾತಂತ್ರ್ಯಕ್ಕಾಗಿ, ಜನರು ಜಾತಿ, ಮತ, ಬೇದ-ಭಾವಗಳನ್ನು ಮರೆತು ಹೋರಾಟಕ್ಕೆ ಧುಮುಕಿದರು. ಮೊನ್ನೆ ನಡೆದ ವಿವಿಧ ಸಮಾರಂಭಗಳಲ್ಲಿ ಸ್ವಾತಂತ್ರ್ಯ ತ್ಯಾಗ ಬಲಧಾನ ಗಳನ್ನು ಕೊಂಡಾಡಲಾಯಿತು. ಸ್ವಾತಂತ್ರ್ಯಕ್ಕಾಗಿ ಬೆಂಗಳೂರಿನಲ್ಲಿ ಶ್ರೀ ಶ್ಯಾಮಣ್ಣ ಬಿನ್ ಬೇಟೆ ರಂಗಪ್ಪ, ಶ್ರೀ ಜಿ.ವಿ.ತಿರುಮಲಯ್ಯ, ಶ್ರೀ ಪ್ರಹ್ಲಾದಶೆಟ್ಟಿ, ಶ್ರೀ ಗುಂಡಪ್ಪ, ಇವರು ಹೋರಾಟ ನಡೆಸುತ್ತಿರುವ ಸಂದರ್ಭದಲ್ಲಿ ಬ್ರಿಟಿಷ್‌ರ ಗುಂಡಿಗೆ ಬಲಿಯಾದರು. ಅವರ ನೆನಪಿಗಾಗಿ ಮೈಸೂರು ಬ್ಯಾಂಕ್ ವೃತ್ತದಲ್ಲಿ ಹುತಾತ್ಮರ ಸ್ತೂಪವನ್ನು ನಿರ್ಮಿಸಲಾಗಿದೆ. ಆದರೆ ದುರದೃಷ್ಟಕರ ವಿಚಾರವೆಂದರೆ. ಅದು ಜನರಿಗೆ ಕಾಣಿಸದಂತೆ ಸ್ಥಿತಿಗೆ 'ಶ್ರೀ ಶನಿ ದೇವರು' ಅದನ್ನು ಅತಿಕ್ರಮಿಸಿಕೊಂಡಿದೆ. ಅಲ್ಲದೆ ಬೆಂಗಳೂರು ನಗರ ಹೇಗೆ ಬೆಳೆಯುತ್ತಿದೆಯೋ ಹಾಗೇ ಶ್ರೀ ಶನಿದೇವರ ಪುಣ್ಯಕ್ಷೇತ್ರವು ದಿನೇ ದಿನೇ ವಿಸ್ತರಿಸತೊಡಗಿದೆ. ಇದರಿಂದಾಗಿ ಸ್ವಾತಂತ್ರ ಯೋಧರ ಸ್ತೂಪವು ಯಾರಿಗೂ ಕಾಣಿಸದೆ ನೆನಪಿಗೆ ಬಾರದ ಸ್ಥಿತಿಯೊದಗಿದೆ.

ಈ ಹಿಂದೆ ಸ್ವಾತಂತ್ರ್ಯ ಹೋರಾಟಗಾರರ ಈ ಸ್ತೂಪದ ಬಗ್ಗೆ ಕಾಳಜಿವಹಿಸಿ ಎಸ್‌ಎಫ್‌ಐ ಮತ್ತು ಡಿ.ವೈ.ಎಫ್.ಐ ಸಂಘಟನೆಗಳು ಆ ಸ್ಥಳವನ್ನು ಸ್ವಚ್ಛಗೊಳಿಸಿ ಹುತಾತ್ಮರ ಚೌಕವೆಂದು ಹೆಸರಿಡ ಬೇಕೆಂದು ಬೆಂಗಳೂರು ಮಹಾನಗರ ಪಾಲಿಕೆಗೆ ಮನವಿ ಸಲ್ಲಿಸಿ ಒತ್ತಾಯಿಸಿ ದ್ದವು. ಮಹಾನಗರ ಪಾಲಿಕೆ- ಸರ್ಕಾರ ಆ ಬಗ್ಗೆ ಗಮನ ಹರಿಸಲಿಲ್ಲ. ಆದರೆ ಈಗ ಸ್ತೂಪಕ್ಕೆ ಶನಿದೇವರ ಕಾಟ ಆರಂಭವಾಗಿದೆ. ಇದರಿಂದ ಮುಕ್ತಿ ದೊರೆಕಿಸಿ ಮತ್ತೊಮ್ಮೆ ಸ್ವಾತಂತ್ರ ಯೋಧರ ಸ್ತೂಪಕ್ಕೆ ಸ್ವಾತಂತ್ರ್ಯ ಒದಗಿಸುವ ನಿಟ್ಟಿನಲ್ಲಿ ಸಂಬಂಧ ಪಟ್ಟ ಅಧಿಕಾರಿಗಳು ಇತ್ತ ಕಡೆ ಗಮನ ಹರಿಸುವರೆ ಕಾದು ನೋಡಬೇಕಾಗಿದೆ.

ಈ ದೇಶದ ಸ್ವಾತಂತ್ರ್ಯಕ್ಕೆ ಬಂದಿರುವ ಗತಿಯೇ ಸ್ವಾತಂತ್ರ ಯೋಧರ ಸ್ತೂಪಕ್ಕೂ ಬಂದಿದೆ.

ಕಂಬಸಪ್ಪ. ಪಿ


ಹುತಾತ್ಮ ಸ್ಮಾರಕವನ್ನು ಸ್ವಾಹ ಮಾಡಿರುವ ದೇವಸ್ಥಾನದ ಕಟ್ಟಡ

ಉದಾರೀಕರಣದತ್ತಲೇ ತುಡಿಯುತ್ತಿರುವ ಕೇಂದ್ರ ಸರ್ಕಾರಕ್ಕೆ ಈ ಶಾಸನವನ್ನು ಜಾರಿ ಮಾಡುವ ರಾಜಕೀಯ ಇಚ್ಛಾಶಕ್ತಿಯ ಗಂಭೀರ ಕೊರತೆ ಇದೆ ಎಂಬುದು ಎದ್ದುಕಾಣುತ್ತಿದ್ದರೂ ಸಹ ಗ್ರಾಮೀಣ ಉದ್ಯೋಗ ಖಾತರಿ ಯೋಜನೆಯು ಈಗ ಕಾನೂನು ರೂಪಕ್ಕೆ ಬಂದಿರುವುದು ಜನತೆಯ ಒಂದು ದೊಡ್ಡ ವಿಜಯವಾಗಿದೆ. ಈ ಯೋಜನೆಯ ಸಮರ್ಪಕ ಜಾರಿಗಾಗಿ, ಯೋಜನೆಯ ವಿಸ್ತರಣೆ ಮತ್ತು ಬಲವರ್ಧನೆಗಾಗಿ ಚಳುವಳಿ ನಡೆಸಲು ಜನತೆ ಸಜ್ಜಾಗಬೇಕು.



ಕೊನೆಗೂ ಗ್ರಾಮೀಣ ಉದ್ಯೋಗ ಖಾತರಿ ಕಾನೂನು!

ಇದು ಜನತೆಯ ವಿಜಯ : ಇದನ್ನು ರಕ್ಷಿಸೋಣ

'ಗ್ರಾಮೀಣ ಉದ್ಯೋಗ ಖಾತರಿ ಶಾಸನ'ವನ್ನು ಸಂಸತ್ತಿನ ಎರಡೂ ಸದನಗಳು ಕೊನೆಗೂ ಅಂಗೀಕರಿಸಿವೆ. ಈ ಮೂಲಕ ಸ್ವತಂತ್ರ ಭಾರತದಲ್ಲಿ ಕೇಂದ್ರ ಸರಕಾರ ಮೊದಲ ಬಾರಿಗೆ ಉದ್ಯೋಗದ ಕಾನೂನಾತ್ಮಕ ಖಾತರಿ ನೀಡಿದಂತಾಗಿದೆ. ಇದು ಭಾರತ ಗಣತಂತ್ರದಲ್ಲಿ ಉದ್ಯೋಗದ ಹಕ್ಕನ್ನು ಮೂಲಭೂತ ಹಕ್ಕಾಗಿಸುವ ದಿಕ್ಕಿನಲ್ಲಿ ಒಂದು ಹೆಜ್ಜೆ.

ಸಾಮಾನ್ಯ ಕನಿಷ್ಠ ಕಾರ್ಯಕ್ರಮದಲ್ಲಿ ಈ ಬಗ್ಗೆ ವಚನವಿತ್ತಿದ್ದರೂ ಯುಪಿಎ ಸರಕಾರಕ್ಕೆ ಈ ಶಾಸನ ತರಲು ಒಂದು ವರ್ಷಕ್ಕೂ ಹೆಚ್ಚು ಸಮಯ ಹಿಡಿಸಿತು. ಈ ಕಾನೂನಿನ ಜಾರಿಗೆ ಸಂಬಂಧಪಟ್ಟ ಖರ್ಚಿಗೆ ಹಣ ಒದಗಿಸಲು ಬಂದ ದೊಡ್ಡ ಪ್ರತಿರೋಧವೇ ಇದಕ್ಕೆ ಕಾರಣ. ಕೊನೆಗೂ ಬಂದಿರುವುದು ಸಿಪಿಐ(ಎಂ) ಸದಾ ಪ್ರತಿಪಾದಿಸಿಕೊಂಡು ಬಂದಿರುವ ಒಂದು ಸಮಗ್ರ ಉದ್ಯೋಗ ಖಾತರಿ ಕಾನೂನೇನೂ ಅಲ್ಲ. ಇದು ದೇಶದ ಗ್ರಾಮೀಣ ಮತ್ತು ನಗರ ಪ್ರದೇಶಗಳೆರಡಕ್ಕೂ ಅನ್ವಯವಾಗಬೇಕು ಎಂದು ಸಿಪಿಐ(ಎಂ) ಸೂಚಿಸಿತ್ತು. ಅಲ್ಲದೆ ಈ ಕಾರ್ಯಕ್ರಮದಲ್ಲಿ ನೊಂದಾಯಿಸಿಕೊಳ್ಳುವ ಎಲ್ಲಾ ನಿರುದ್ಯೋಗಿಗಳು ಈ ಕಾನೂನಿನಡಿ ಬರಬೇಕು ಮತ್ತು ಈ ಕಾನೂನು ವರ್ಷದಲ್ಲಿ ಕನಿಷ್ಠ 180 ದಿನಗಳ ಕೆಲಸದ ಭರವಸೆ ನೀಡಬೇಕು ಎಂದೂ ಸಿಪಿಐ(ಎಂ) ಸೂಚಿಸಿತ್ತು.

ಈಗ ಅಂಗೀಕಾರಗೊಂಡಿರುವ ಶಾಸನ 200 ಜಿಲ್ಲೆಗಳ ಗ್ರಾಮೀಣ ಭಾರತವನ್ನು ಒಳಗೊಂಡಿದ್ದು, ಪ್ರತಿಯೊಂದು ಕುಟುಂಬದ ಒಬ್ಬ ವ್ಯಕ್ತಿಗೆ ಒಂದು ವರ್ಷದಲ್ಲಿ 100 ದಿನಗಳ ಉದ್ಯೋಗದ ಖಾತರಿ ನೀಡುತ್ತದೆ. ಸದ್ಯಕ್ಕೆ ಈ ಕಾರ್ಯಕ್ರಮವನ್ನು ಹೀಗೆ ಆರಂಭಿಸಬಹುದು ಎಂಬ ಶರತ್ತಿನ ಮೇಲೆ ಎಡಪಕ್ಷಗಳು ಇದಕ್ಕೆ ಒಪ್ಪಿವೆ. ಆದ್ದರಿಂದ ಇದನ್ನು ಇಡೀ ದೇಶಕ್ಕೆ, ಎಲ್ಲಾ ನಿರುದ್ಯೋಗಿಗಳಿಗೆ ವಿಸ್ತರಿಸುವುದಕ್ಕಾಗಿ ಹೋರಾಟ ಮುಂದುವರೆಯುತ್ತದೆ.

ಈ ಶಾಸನ ಕೂಡಾ ಕೊನೆಗೂ ಸಾಧ್ಯವಾದದ್ದು ಅದರಲ್ಲಿನ ಅಂಶಗಳನ್ನು ದುರ್ಬಲಗೊಳಿಸುವ ಪ್ರಯತ್ನಗಳಿಗೆ ಸಿಪಿಐ(ಎಂ) ಮತ್ತು ಎಡಪಕ್ಷಗಳ ಪ್ರತಿರೋಧದಿಂದಾಗಿ. ಕನಿಷ್ಠ ಕೂಲಿ ಇಂತಹ ಒಂದು ವಿವಾದಾತ್ಮಕ ವಿಷಯವಾಗಿತ್ತು. ಕನಿಷ್ಠ ಕೂಲಿಯನ್ನು ಪ್ರತಿಯೊಂದು ರಾಜ್ಯವೂ ನಿಗದಿಪಡಿಸುತ್ತಿದ್ದು ಅವುಗಳಲ್ಲಿ ಬಹಳ ವ್ಯತ್ಯಾಸಗಳಿವೆ. ಪ್ರತಿಯೊಂದು ರಾಜ್ಯ ಕನಿಷ್ಠ ಕೂಲಿಯ ಪ್ರಕಾರ ಕೂಲಿ ನೀಡುವ ಅಂಶ ಈ ಕಾನೂನಿನಲ್ಲಿ ಇದ್ದರೆ ಒಳ್ಳೆಯದಿತ್ತು. ಆದರೆ ಕೊನೆಗೆ ಈ ಯೋಜನೆಗೆ



ಸಂಬಂಧಪಟ್ಟಂತೆ ಕನಿಷ್ಠ ಕೂಲಿ 60 ರೂ.ಗಿಂತ ಕಡಿಮೆಯಿರಬಾರದು. ಅದನ್ನು ಕೇಂದ್ರ ಸರಕಾರ ಹೊರಬೇಕು ಎಂದು ಒಪ್ಪಲಾಯಿತು. ಈ ಯೋಜನೆಯಲ್ಲಿ ನಗದು ಮತ್ತು ವಸ್ತು ರೂಪದ ಭಾಗಗಳೆರಡೂ ಇರುತ್ತವೆ. ರಾಜ್ಯ ಸರಕಾರಗಳು ಖರ್ಚಿನ 10 ಶೇಕಡಾ ನೀಡಿ ಹೊರೆಯಲ್ಲಿ ಪಾಲುಗೊಳ್ಳಬೇಕಾಗಿದೆ. ಎಡಪಕ್ಷಗಳ ಹೋರಾಟದಿಂದಾಗಿ ಕೊನೆಗೂ ಮಸೂದೆ ಕಾನೂನಾಗಿದೆ. ಇದು ಸರಿಯಾದ ದಿಕ್ಕಿನಲ್ಲಿ ಒಂದು ಹೆಜ್ಜೆ.

ಆದರೆ ರಾಜ್ಯ ಸಭೆಯಲ್ಲಿ ಆಗಸ್ಟ್ 24 ರಂದು ಈ ಕುರಿತ ಚರ್ಚೆಯಲ್ಲಿ ಮಧ್ಯಪ್ರವೇಶಿಸಿ ಮಾತನಾಡಿದ ಪ್ರಧಾನ ಮಂತ್ರಿಗಳು ಈ ಶಾಸನ ಬದ್ಧ ಮಸೂದೆಗೆ ಬೆಂಬಲವಾಗಿ ಶಾಸನ ಬದ್ಧ ಹಣ ನೀಡಿಕೆಯಾಗುತ್ತದೆ ಎಂಬ ಬಗ್ಗೆ ಸ್ಪಷ್ಟ ಭರವಸೆ ನೀಡುವಲ್ಲಿ ವಿಫಲವಾಗಿದ್ದಾರೆ. ಇಂತಹ ಭರವಸೆ ನೀಡಿದರೆ ಈ ಭರವಸೆ ಇನ್ನೂ ದೃಢವಾಗಿರುತ್ತಿತ್ತು. ಆದರೆ ಪ್ರಧಾನ ಮಂತ್ರಿಗಳು ಹೇಳಿದ್ದು ಆರ್ಥಿಕ ಬೆಳವಣಿಗೆ 8 ರ ಶೇಕಡಾದಲ್ಲಿಯೇ ಮುಂದುವರೆದರೆ, ಈ ಉದ್ಯೋಗ ಖಾತರಿ ಕಾರ್ಯಕ್ರಮ ಮತ್ತು ಭಾರತ ನಿರ್ಮಾಣ ಇತ್ಯಾದಿ ಇತರ ಕಾರ್ಯಕ್ರಮಗಳಿಗೆ ಹಣ ಒದಗಿಸುವುದು ಏನೂ ಸಮಸ್ಯೆಯಾಗದು ಎಂದು. ಇದೊಂದು ಅಪಾಯಕಾರಿ ಷರತ್ತು. ಯಾವುದೇ ಕಾರಣಕ್ಕೆ ಬೆಳವಣಿಗೆ ಗುರಿ ತಲುಪಲು ವಿಫಲವಾದರೆ ಈ ಯೋಜನೆ ಅಪಾಯಕ್ಕೀಡಾಗುತ್ತದೆ. ಇದಕ್ಕೆ ಅವಕಾಶ ನೀಡಲು ಸಾಧ್ಯವಿಲ್ಲ. ಇದು ಸಂಸತ್ತಿನ ಒಂದು ಶಾಸನವಾದ ಮೇಲೆ ಯುಪಿಎ ಸರಕಾರ ಅದರ ಯಶಸ್ವೀ ಜಾರಿಗೆ ಬದ್ಧವಾಗಿರಲೇಬೇಕು.

ಪ್ರಧಾನಿಗಳು ಮುಂದುವರೆದು, ಬೆಳವಣಿಗೆಯ ಗುರಿಗಳನ್ನು ಸಾಧಿಸಲು ಉದಾರೀಕರಣ, ಖಾಸಗೀಕರಣದ ಸುಧಾರಣೆಗಳು ಅಗತ್ಯ ಎಂದು ಅದನ್ನು ಸಮರ್ಥಿಸಿಕೊಳ್ಳಲು ಯತ್ನಿಸಿದರು. ನಿರ್ದಿಷ್ಟವಾಗಿ, ಸಾರ್ವಜನಿಕ ವಲಯವನ್ನು ರಕ್ಷಿಸಲು ಇನ್ನಷ್ಟು ವಿದೇಶೀ ಹೂಡಿಕೆ ಬರಬೇಕಾಗುತ್ತದೆ ಹಾಗೂ ಸಬ್ಸಿಡಿಗಳನ್ನು ನಿರ್ದಿಷ್ಟಪಡಿಸಬೇಕಾಗುತ್ತದೆ ಎಂದೂ ಹೇಳಿದರು. ಹಾಗೆ ಹೇಳುವಾಗ ಸಾರ್ವಜನಿಕ ವಲಯದ ತೈಲ ಕಂಪನಿಗಳನ್ನು ರಕ್ಷಿಸಲು ಪೆಟ್ರೋಲಿಯಂ ಉತ್ಪನ್ನಗಳ ಬೆಲೆ ಹೆಚ್ಚಿಸಬೇಕಾದೀತು ಎಂಬ ಸೂಚನೆಯನ್ನು ನೀಡಿದರು. ಅಂದರೆ ಉದ್ಯೋಗ ಖಾತರಿ ಕಾನೂನು ಯಶಸ್ವಿಯಾಗಬೇಕಾದರೆ ಅದು ನವಉದಾರವಾದೀ ಸುಧಾರಣೆಗಳ ಜಾರಿಯನ್ನು ಅವಲಂಬಿಸಿದೆ ಎಂದು ನಾವು ನಂಬಬೇಕಂತೆ. ಹಾಗಿದ್ದರೆ ಜನತೆ ತಮ್ಮ ಬದುಕಿನ ಮೇಲೆ ಇನ್ನಷ್ಟು ಧಾಳಿಗಳನ್ನು ಎದುರಿಸಬೇಕಾಗಿ ಬರಬಹುದು - ಸಬ್ಸಿಡಿ ಕಡಿತಗಳು ಹಾಗೂ ಬೆಲೆಯೇರಿಕೆಗಳ ರೂಪದಲ್ಲಿ. ಒಂದು ಉತ್ತಮ ಬದುಕು ಬೇಕೆಂಬ ಜನಗಳ ಆಕಾಂಕ್ಷೆಗಳಿಗೆ ಸ್ಪಂದಿಸಿ ಈ ಉದ್ಯೋಗ ಖಾತರಿ ಶಾಸನ ಅಸ್ತಿತ್ವಕ್ಕೆ ಬಂದಿದೆ. ಇದರೊಂದಿಗೇ ಪ್ರಧಾನಿಗಳು ಹೇಳುವ ಕ್ರಮಗಳ ಮೂಲಕ ಧಾಳಿಗಳು ಬರುವುದಾದರೆ ಸರಕಾರ ಎಡಗೈಯಲ್ಲಿ ಕೊಟ್ಟಿದ್ದನ್ನು ಬಲಗೈಯಲ್ಲಿ ಕಿತ್ತುಕೊಂಡಂತಾಗುತ್ತದೆ. ಇದನ್ನು ಖಂಡಿತಾ ಒಪ್ಪಲು ಸಾಧ್ಯವಿಲ್ಲ.

ಯುಪಿಎ ಸರಕಾರ ಉದ್ಯೋಗ ಖಾತರಿಯನ್ನು ಜಾರಿಗೆ ತರುವಲ್ಲಿ ಎಷ್ಟು ಪ್ರಾಮಾಣಿಕವಾಗಿ ವರ್ತಿಸುತ್ತದೆ ಎಂಬುದನ್ನು ಮುಂಬರುವ ದಿನಗಳು ತೋರಿಸಲಿವೆ. ಸಿಪಿಐ(ಎಂ) ಎಂದಿನಂತೆ ಜಾಗರೂಕತೆಯಿಂದಿದ್ದು ಭಾರತೀಯ ಜನತೆ ಪಡೆದಿರುವ ಈ ಹೊಸ ಹಕ್ಕನ್ನು ಬದಿಗೊತ್ತದಂತೆ, ದುರ್ಬಲಗೊಳಿಸದಂತೆ ನೋಡಿಕೊಳ್ಳುತ್ತದೆ.

ಸೆಪ್ಟೆಂಬರ್ 29 ರ ಮುಷ್ಕರ...............

ಪುಟ 3 ರಿಂದ

ಸರ್ಕಾರ ಶೇ 12 ರಿಂದ ಶೇ 9.5 ಕ್ಕೆ ಕಡಿತಗೊಳಿಸಿದ ಬಡ್ಡಿದರ ಹಾಗೆಯೇ ಇದೆ. ಇದರ ಜತೆಯಲ್ಲಿ ಬ್ಯಾಂಕು, ಅಂಚೆ ಕಛೇರಿ ಇತ್ಯಾದಿ ಉಳಿತಾಯಗಳ ಮೇಲೆ ಬಡ್ಡಿದರ ಕಡಿತಗೊಳಿಸಿರುವುದರಿಂದ ಕಾರ್ಮಿಕರ ಉಳಿತಾಯಕ್ಕೆ ಕೊಡಲಿ ಏಟು ಬಿದ್ದಿದೆ.

ಮಹಿಳೆಯರ ರಕ್ಷಣೆಗಾಗಿ

ಟಿ.ವಿ. ಮತ್ತು ಪತ್ರಿಕೆ ಮಾಧ್ಯಮಗಳಲ್ಲಿ ಹೇರಳವಾಗಿ ಬಿತ್ತರವಾಗುತ್ತಿರುವ ಅಶ್ಲೀಲತೆಯ ಪರಿಣಾಮವಾಗಿ ಕೀಳುಮಟ್ಟದ ಅಭಿರುಚಿ ಹೆಚ್ಚಾಗಿದ್ದು, ಮಹಿಳೆಯರನ್ನು ಕೀಳಾಗಿ ಕಾಣುವ ಪ್ರವೃತ್ತಿ ಹೆಚ್ಚುತ್ತಿದೆ. ಮಹಿಳೆ ಮಾರಾಟದ ಭೋಗವಸ್ತು ಎಂಬಂತೆ ಚಿತ್ರಿತವಾಗುತ್ತಿದೆ. ಇದರ ಪರಿಣಾಮ ಕಛೇರಿಯಲ್ಲಿ ಕೆಲಸ ಮಾಡುವ ಕೆಲವು ಪುರುಷರ ಮೇಲೂ ಆಗುತ್ತಿದ್ದು, ಅದೇ ಕಛೇರಿಯಲ್ಲಿ ಕೆಲಸ ಮಾಡುವ ಮಹಿಳಾ ಕಾರ್ಮಿಕರ ಮೇಲೆ ಲೈಂಗಿಕ ಕಿರುಕುಳ ಹೆಚ್ಚುತ್ತಿದೆ. ಈ ಸಂದರ್ಭದಲ್ಲಿ ಮಹಿಳಾ ಕಾರ್ಮಿಕರಿಗೆ ರಕ್ಷಣೆ ನೀಡಲು ಸಂಘಟನೆಗಳು ಮುಂದಾಗಬೇಕಾಗಿದೆ. ರಾಜ್ಯ, ಜಿಲ್ಲೆ ಮತ್ತು ಉದ್ದಿಮೆ ಮಟ್ಟದಲ್ಲಿ ಲೈಂಗಿಕ ಕಿರುಕುಳ, ದೌರ್ಜನ್ಯಗಳ ಬಗ್ಗೆ ಮಾಹಿತಿ ಪಡೆಯಲು ಹಾಗೂ ಇಂತಹ ದೂರಿನ ಮೇಲೆ ಕ್ರಮಕೈಗೊಳ್ಳಲು ಅನುಕೂಲವಾಗುವಂತೆ ಮಹಿಳಾ ಪ್ರತಿನಿಧಿಗಳಿರುವ ತ್ರಿಪಕ್ಷೀಯ ಸಮಿತಿಗಳನ್ನು ನೇಮಿಸಬೇಕು.

ನಿರುದ್ಯೋಗಿಗಳಿಗೆ ಆತ್ಮವಿಶ್ವಾಸ

ಸಂಘಟಿತ ಕಾರ್ಮಿಕ ವರ್ಗ ತಮ್ಮ ಅಸ್ತಿತ್ವವನ್ನು ಉಳಿಸಿ, ಬೆಳೆಸಿ ಕೊಳ್ಳಬೇಕಾದರೆ ಅಸಂಘಟಿತರ ಮತ್ತು ನಿರುದ್ಯೋಗಿಗಳ ಸಮಸ್ಯೆಗಳಿಗೆ ಪರಿಹಾರ ದೊರಕಿಸಲು ಪ್ರಯತ್ನಿಸಬೇಕು. ಈ ನಿಟ್ಟಿನಲ್ಲಿ ಕೆಲಸದ ಹಕ್ಕು ಮೂಲಭೂತ ಹಕ್ಕಾಗಬೇಕೆಂದು ಸಿಐಟಿಯು ಬಹಳ ಹಿಂದೆಯೇ ಪ್ರತಿಪಾದಿಸಿತ್ತು. ಜುಲೈ 9 ರಂದು ನವದೆಹಲಿಯಲ್ಲಿ ನಡೆದ ಸಮಾವೇಶ ಅಸಂಘಟಿತ ಕಾರ್ಮಿಕರು ಮತ್ತು ಕೃಷಿ ಕಾರ್ಮಿಕರಿಗೆ ಸೇವಾಭದ್ರತೆ ಮತ್ತು ಸಾಮಾಜಿಕ ಭದ್ರತೆಗೆ ಬೇಕಾದ ಶಾಸನವನ್ನು ರಚಿಸಬೇಕೆಂದು ಒತ್ತಾಯ ಮಾಡಿರುವುದಲ್ಲದೆ, ಗ್ರಾಮೀಣ ಉದ್ಯೋಗದ ಮಸೂದೆ ಸ್ವಾಗತಾರ್ಹವಾದರೂ ಕೇವಲ 200 ಜಿಲ್ಲೆಗಳಿಗೆ ಸೀಮಿತವಾಗದೆ ಎಲ್ಲಾ ಜಿಲ್ಲೆಗಳಿಗೂ ವಿಸ್ತರಿಸಬೇಕೆಂದು ಒತ್ತಾಯಿಸಿದೆ. ಸರ್ಕಾರಿ ಕಛೇರಿಗಳು, ಸಾರ್ವಜನಿಕ ಉದ್ದಿಮೆಗಳು, ಸ್ಥಳೀಯ ಸಂಸ್ಥೆಗಳಲ್ಲಿ ನೇಮಕಾತಿಗಳ ಮೇಲಿರುವ ನಿರ್ಬಂಧವನ್ನು ಕೊನೆಗೊಳಿಸಬೇಕೆಂದು ಒತ್ತಾಯಿಸಿದೆ. ಆ ಮೂಲಕ ಆತ್ಮವಿಶ್ವಾಸವನ್ನು ಕಳೆಕೊಂಡಿರುವ ನಿರುದ್ಯೋಗಿ ಯುವಕರಿಗೆ ಭರವಸೆ ಮೂಡಿಸಲು ಪ್ರಯತ್ನಿಸಿದೆ.

ವ್ಯಾಪಕ ಪ್ರಚಾರ ಅಗತ್ಯ:

29 ರ ಮುಷ್ಕರವನ್ನು ಯಶಸ್ವಿಗೊಳಿಸಲು ಭರದ ಸಿದ್ಧತೆಗಳು ನಡೆಯುತ್ತಿವೆ. ಜುಲೈ 9ರ ನವದಹೆಲಿಯ ಸಮಾವೇಶದ ನಂತರ ಜಿಲ್ಲಾ, ರಾಜ್ಯಮಟ್ಟದ ಸಮಾವೇಶಗಳು ನಡೆದಿವೆ. ಆಗಸ್ಟ್ 25 ರಂದು ಬೆಂಗಳೂರಿನಲ್ಲಿ ಪುರಭವನದಲ್ಲಿ ಜರುಗಿದ ಕರ್ನಾಟಕ ರಾಜ್ಯ ಸಮಾವೇಶದಲ್ಲಿ 1000ಕ್ಕೂ ಹೆಚ್ಚು ಪ್ರತಿನಿಧಿಗಳು ಭಾಗವಹಿಸಿದ್ದು, ಹೆಚ್ಚುಕಡಿಮೆ ಎಲ್ಲಾ ಕಾರ್ಮಿಕ, ನೌಕರ ಸಂಘಟನೆಗಳು ತಮ್ಮ ಕೋಟಾಗಳಿಗಿಂತ ಹೆಚ್ಚು ಪ್ರತಿನಿಧಿಗಳನ್ನು ಭಾಗವಹಿಸಲು ಮುತುವರ್ಜಿ ವಹಿಸಿದ್ದು ಸ್ವಾಗತಾರ್ಹ. ಆದರೆ ಈ ಪ್ರಚಾರ ಇನ್ನಷ್ಟು ಕೆಳಹಂತಕ್ಕೆ ತಲುಪಬೇಕಾಗಿದೆ. ಮುಷ್ಕರದಲ್ಲಿ ಭಾಗವಹಿಸುವ ಪ್ರತಿಯೊಬ್ಬ ಕಾರ್ಮಿಕ, ನೌಕರರಿಗೂ 16 ಬೇಡಿಕೆಗಳು ಏನು ಮತ್ತು ಯಾಕೆ ಎಂಬುದರ ಬಗ್ಗೆ ವಿವರಿಸಬೇಕಾಗಿದೆ. ಕೆಲವೊಂದು ಸಂಘಟನೆಗಳು ಮುಷ್ಕರದಲ್ಲಿ ಭಾಗವಹಿಸದೆ ಇರುವ ಹಿನ್ನೆಲೆಯಲ್ಲಿ ಅವರ ಸದಸ್ಯರಿಗೂ ಮುಷ್ಕರದಲ್ಲಿಭಾಗವಹಿಸುವಂತೆ ಪ್ರೇರೇಪಿಸಬೇಕಾಗಿದೆ. ಹಾಗೆ ಮಾಡುವುದರ ಮೂಲಕ ಸುಧಾರಣಾವಾದಿ ಕಾರ್ಮಿಕ ಸಂಘಟನೆಗಳ ಮುಖಂಡತ್ವದ ಮುಖವಾಡವನ್ನು ಕಳಚುವುದು, ಮಾತ್ರವಲ್ಲದೆ, ಕಾರ್ಮಿಕರ, ನೌಕರರ ವಿಶಾಲ ಐಕ್ಯತೆಯನ್ನು ಸಾಧಿಸಲು ಸಾಧ್ಯವಾಗಬೇಕು.

ನಿರುದ್ಯೋಗಿ ಯುವಕರು, ರೈತರು, ಕೃಷಿ ಕಾರ್ಮಿಕರ ಬೇಡಿಕೆಗಳೂ ಈ ಮುಷ್ಕರದಲ್ಲಿ ಒಳಗೊಂಡಿರುವ ಹಿನ್ನೆಲೆಯಲ್ಲಿ, ಆ ವಿಭಾಗದ ಜನರಿಗೂ ಮುಷ್ಕರದ ಕುರಿತು ಅರಿವು ಮೂಡಿಸಬೇಕಾಗಿದೆ. ಹಾಗೆ ಮಾಡಿದರೆ ಮಾತ್ರ ಸರ್ಕಾರದ ನಿಲುವಿನಲ್ಲಿ ಬದಲಾವಣೆ ತರಲು ಸಾಧ್ಯ.

29 ರ ಮುಷ್ಕರವು ಯುಪಿಎ ಸರ್ಕಾರಕ್ಕೆ ಎಚ್ಚರಿಕೆಯ ನೋಟೀಸು. ಶ್ರೀಮಂತರ ಪರ ನೀತಿಗಳನ್ನು ಕೈಬಿಟ್ಟು, ಕಾರ್ಮಿಕರ ಪರ, ಬಡಜನರ ಪರ ನೀತಿಯನ್ನು ಜಾರಿಗೊಳಿಸದೆ ಹೋದಲ್ಲಿ ಮುಂದಿನ ದಿನಗಳಲ್ಲಿ ಇನ್ನಷ್ಟು ಉಗ್ರ ಹೋರಾಟಗಳನ್ನು ಎದುರಿಸಬೇಕಾಗುತ್ತದೆ ಎಂಬುದನ್ನು ಖಡಾಖಂಡಿತವಾಗಿ ಹೇಳುವ ಸೆಪ್ಟೆಂಬರ್ 29 ರ ಮುಷ್ಕರ ಕಾರ್ಮಿಕ ಚಳುವಳಿಯಲ್ಲಿ ಮಹತ್ವದ ಘಟನೆಯಾಗಿ ದಾಖಲಾಗಲಿದೆ.

■ ಬಾಲಕೃಷ್ಣ ಶೆಟ್ಟಿ

ಒಡಲ ಕಿಡಿ ಉರಿ



ಆಹಾರ - ಭೂಮಿ - ಉದ್ಯೋಗದ ಪ್ರಶ್ನೆಗಳ ಆಧಾರದಲ್ಲಿ ಸಿಪಿಐ(ಎಂ) ನೇತೃತ್ವದಲ್ಲಿ ರಾಷ್ಟ್ರವ್ಯಾಪಿ ಆಂದೋಲನದ ಸಿದ್ಧತೆಗಳು ನಡೆಯುತ್ತಿವೆ. ಅದಕ್ಕೆ ಪೂರಕವನಾಗಿ ಮನುಷ್ಯನ ಮೊತ್ತ ಮೊದಲ ಅಗತ್ಯವಾದ ಆಹಾರದ ಕುರಿತು ಈ ಸಂಚಿಕೆಯಲ್ಲಿ ಎರಡು ಲೇಖನಗಳನ್ನು ಪ್ರಕಟಿಸಲಾಗಿದೆ

ಹಸಿವೆಂಬ ಹೆಬ್ಬಾವು ಬಸಿರ ಬಂದು ಹಿಡಿದಡೆ
ವಿಷವೇರಿತಯ್ಯ ಅಪಾದ ಮಸ್ತಕಕ್ಕೆ
ಹಸಿವಿಗನ್ನವನಿಕ್ಕಿ ವಿಷವನಿಳುಹಬಲ್ಲಡೆ
ಆತನೇ ಗಾರುಡಿಗ ಕಾಣಾ ರಾಮನಾಥ
- ದೇವರ ದಾಸಿಮಯ್ಯ

ಚರಾಚರ ಜೀವಿಗಳ ಅಸ್ತಿತ್ವದೊಂದಿಗೆ 'ಹಸಿವೆ'ಯು ಮತ್ತು ಹಸಿವೆಯೊಂದಿಗೆ ಆಹಾರವು ತಳುಕು ಹಾಕಿಕೊಂಡಿದೆ. ಜಗತ್ತಿನ ಮಾನವನ ನಡೆಯು ಹಸಿವೆಯ ಸುತ್ತಲೂ ಹೆಜ್ಜೆ ಹಾಕುತ ಬಂದಿದೆ. ತುತ್ತಿನ ಚೀಲ ತುಂಬಿಕೊಳ್ಳಲು ಜೀವನವಿಡೀ ಬೆವರು ಸುರಿಸುತ ದುಡಿ-ದುಡಿದು ಹೈರಾಣಾಗುವ ಜನಕೋಟಿ ಒಂದೆಡೆಯಾದರೆ, ದುಡಿವ ಕೈಗಳ ತುತ್ತು ಕಸಿಯುವ ಕ್ರೂರ ಮನಸುಗಳು ಇನ್ನೊಂದೆಡೆ. ಆದ್ದರಿಂದಲೇ ಮಾನವನ ಇತಿಹಾಸವು ವರ್ಗ ಸಂಘರ್ಷದ ಚರಿತ್ರೆಯಾಗಿದೆ.

ಈ ಪ್ರಕೃತಿಯ ಉಡಿಯಲ್ಲಿ ಜೀವಸಂಕುಲವೆಲ್ಲ ಸಮಾನತೆಯಿಂದ ಬದುಕಿ ಬಾಳಬೇಕು. ಆದರೆ 'ಸಮಾನತೆ' ಎಂಬುದು ಈ ಪ್ರಜಾಪ್ರಭುತ್ವದ(!) ವ್ಯವಸ್ಥೆಯಲ್ಲಿಯೂ ಕೈಗೆಟುಕದಾಗಿದೆ. ಶೋಷಣಾ ವ್ಯವಸ್ಥೆಯ ಒಡಲೊಳಗೇ ಪ್ರತಿಭಟನೆಯ ಬೀಜ ಹುಟ್ಟಿ ಹೊಸದೊಂದು ವ್ಯವಸ್ಥೆ ಮೈದಳೆದರೂ ಅನ್ಯಾಯ ಮತ್ತು ಅಜ್ಞಾನದ ತೊಟ್ಟಿಲು ತೂಗುತ್ತಲೇ ಇದೆ. ಆದ್ದರಿಂದಲೇ ಜ್ಞಾನವೆಂಬ ಕೈಗಳಿಂದ ಚಳುವಳಿಗಳ ಪ್ರಖರತೆಯಿಂದ ಅನ್ಯಾಯದ ತೊಟ್ಟಿಲು ಮುರಿದು ನೇಣು ಹರಿದು ಶ್ರಮಜೀವಿಗಳ ಸ್ವಾಭಿಮಾನದ ಬದುಕು ಕಟ್ಟಬೇಕಿದೆ.

ಹೀಗೆ ಸ್ವಾಭಿಮಾನದ ಬದುಕು ಕಟ್ಟಿಕೊಳ್ಳುವ ದಿಸೆಯಲ್ಲಿ ಅನೇಕ ಹೋರಾಟಗಳು ನಡೆದಿವೆ. ಹಾಗೆ ನೋಡಿದರೆ ಭಾರತದ ಸಂವಿಧಾನವು ಮಾನವ ಹಕ್ಕುಗಳ ರಕ್ಷಣೆಯನ್ನು ಪ್ರತಿಪಾದಿಸುತ್ತದೆ. ಜನಪ್ರತಿನಿಧಿಯಾದ ಸರಕಾರವು ಪ್ರಜೆಗಳಿಗೆ ಬದುಕಲಿಕ್ಕೆ ಬೇಕಾದ ಮೂಲಭೂತ ಹಕ್ಕುಗಳನ್ನು ಒದಗಿಸಬೇಕು. ಆಹಾರ, ಶಿಕ್ಷಣ, ಆರೋಗ್ಯ, ಉದ್ಯೋಗವು ಮಾನವನ ಬದುಕಿನ ಜರೂರಿಯಾಗಿವೆ. ಈ ಜರೂರಿಗಳ ಪೂರೈಕೆಗಾಗಿ ಸರಕಾರವು ಜನಪರ ಯೋಜನೆಗಳನ್ನು ಹಮ್ಮಿಕೊಂಡು ಕಟ್ಟಕಡೆಯ ವ್ಯಕ್ತಿಗೂ ಆ ಯೋಜನೆಯ ಲಾಭ ತಲುಪುವಂತೆ ಕ್ರಮವಹಿಸಬೇಕು. ಆದರೆ ಸ್ವಾತಂತ್ರ್ಯದ 58 ವರ್ಷಗಳ ತರುವಾಯವೂ ಈ ದೇಶದಲ್ಲಿ ಹಸಿವಿನ ಸಾವುಗಳು ಘಟಿಸುತ್ತಿವೆ. ಆಹಾರ ಧಾನ್ಯದ ಇಳುವರಿ ಹೆಚ್ಚಳವಿದ್ದೂ ಸರಕಾರಿ ಗೋದಾಮಿನಲ್ಲಿ ಧಾನ್ಯಗಳ ದಾಸ್ತಾನು ಭರ್ತಿ ಇದ್ದೂ ಈ ನೆಲದಲ್ಲಿ ತುತ್ತು ಅನ್ನಕ್ಕಾಗಿ ಹಾಹಾಕರಿಸುವ ಅಸಂಖ್ಯಾತ ಒಡಲುಗಳಿವೆ. ಜಗತ್ತಿನ ಜೀವಕೋಟಿಗೆಲ್ಲ ಅನ್ನವಿಕ್ಕುವ ನೇಗಿಲಯೋಗಿ ಸ್ವತಃ ನೇಣಿಗೆ ಕೊರಳೊಡ್ಡುತ್ತಿದ್ದಾನೆ. ಹಸಿವಿನಿಂದ ಘಟಿಸಿದ ಈ ಸಾವುಗಳನ್ನು ಕಂಡು 'ಸುಪ್ರೀಂ ಕೋರ್ಟು' ಛೀಮಾರಿ ಹಾಕಿದೆ ಪ್ರಜಾಪ್ರಭುತ್ವದ ಸರಕಾರಕ್ಕೆ. ಹಾಗೆ ಉಗಿಸಿಕೊಂಡ ರಾಜ್ಯಗಳಲ್ಲಿ ಕರ್ನಾಟಕವೂ ಒಂದು.

ಮೇಲ್ನೋಟಕ್ಕೆ ಕರ್ನಾಟಕ ರಾಜ್ಯವು ಸಮೃದ್ಧ ರಾಜ್ಯವೆಂದು ಬಿಂಬಿಸಲಾಗುತ್ತಿದೆ. ಆದರೆ ವಾಸ್ತವ ಪರಿಸ್ಥಿತಿಯು ಬೇರೆಯೇ ಆಗಿದೆ. ಖಾಸಗೀಕರಣ, ಉದಾರೀಕರಣ ಮತ್ತು ಜಾಗತೀಕರಣ (ಖಾಉಜಾ)ದ ಕರಿ ನೆರಳು ಈ ರಾಜ್ಯದ ತುಂಬ ಹರಡಿಕೊಂಡಿದೆ. ದಿನವಿಡೀ ದುಡಿದರೂ 10 ರೂಪಾಯಿ ಕೂಲಿ ಸಿಗುವುದಿಲ್ಲ. ಒಕ್ಕಲು ತನವು ಕಂಗಾಲಾಗಿದೆ. ಎಲ್ಲ ಕೆಲಸಗಳಿಗೂ ಮಷೀನುಗಳ ಬಳಕೆ. ನಿರುದ್ಯೋಗವು ತಾಂಡವ ನೃತ್ಯ ಮಾಡುತ್ತಿದೆ. (ಗುಲಬರ್ಗಾ ಜಿಲ್ಲೆಯೊಂದರಲ್ಲೇ ಉದ್ಯೋಗಾಕಾಂಕ್ಷಿಗಳು ಸರಕಾರಿ ಕಛೇರಿಯಲ್ಲಿ ತಮ್ಮ ಹೆಸರನ್ನು ದಾಖಲಿಸಿದ್ದಾರೆ. ಅವರ ಸಂಖ್ಯೆಯು 31.3.2003ರವರೆಗೆ 1,03, 725 ಆಗಿತ್ತು. ಈ ಹೊತ್ತಿನವರೆಗೂ ಆ ಸಂಖ್ಯೆಯು ಬೆಳೆದಿರಲಿಕ್ಕೆ ಸಾಕು. ಇವರಲ್ಲಿ 104 ಅಭ್ಯರ್ಥಿಗಳು ಮಾತ್ರ ಉದ್ಯೋಗ ಪಡೆದಿರುವವರು! ಅದೂ ಅನುಕಂಪ ಆಧಾರದಲ್ಲಿ!) ಗ್ರಾಮ ಮತ್ತು ನಗರಗಳೆರಡರಲ್ಲೂ ದುಡಿವ ಕೈಗಳು ಕೆಲಸಕ್ಕಾಗಿ ಪರಿತಪಿಸುತ್ತಿವೆ. ಇದ್ದ ನೆಲದಲ್ಲಿ ಕೆಲಸ ಸಿಗದೇ ಇದ್ದಾಗ ಹೊಟ್ಟೆಯನ್ನು ಮತ್ತು ಹೊಟ್ಟೆಯೊಂದಿಗೆ ಹಸಿವನ್ನು ಅಂಗೈಯಲ್ಲಿ ಹಿಡಿದುಕೊಂಡು ವಲಸೆ ಹೋಗುವವರ ಪ್ರಮಾಣವು ಪ್ರತಿ ವರ್ಷ ಹೆಚ್ಚುತ್ತಲೇ ಇದೆ. ಹಸಿವು ಹಿಂಗಿಸಿಕೊಂಡು ತೃಪ್ತಿ ಮತ್ತು ಸ್ವಾಭಿಮಾನದಿಂದ ಬದುಕಲು ಭೂಮಂಡಲದುದ್ದಕ್ಕೂ ಏಷ್ಟೆಲ್ಲ ಸುತ್ತಾಡಿದರೂ ಉದಾರೀಕರಣದ ನೀತಿಯನ್ನೊಳಗೊಂಡ ಜಾಗತಿಕ ಮಾರುಕಟ್ಟೆಯೇ ಮನುಷ್ಯ ಜೀವನದ ಮೇಲೆ ಹಿಡಿತ ಸಾಧಿಸತೊಡಗಿದೆ. ಆದ್ದರಿಂದಲೇ ಬಡ ಜನತೆಯು ಉಣ್ಣುವ ಅನ್ನದಿಂದಲೂ ವಂಚಿತರಾಗ ತೊಡಗಿದ್ದಾರೆ. ಹಾಗೆ ನೋಡಿದರೆ ಪ್ರತಿ ವ್ಯಕ್ತಿಗೆ ಪ್ರತಿದಿನ 2400 ಕ್ಯಾಲರಿ ಆಹಾರದ ಜರೂರಿ ಇದೆ. ಆದರೆ ಕಳೆದ 20 ವರ್ಷಗಳಿಂದ ಪ್ರತಿ ವ್ಯಕ್ತಿಗೆ ಅವಶ್ಯವಿರುವ ಆಹಾರದ ಕ್ಯಾಲರಿಯ ಪ್ರಮಾಣವು ಕುಂಠಿತವಾಗುತ್ತಿದೆ. ಏಕೆಂದರೆ ಪ್ರತಿ ವ್ಯಕ್ತಿಗೆ ಅವಶ್ಯವಿರುವಷ್ಟು ಆಹಾರವು ಸಿಗುತ್ತಿಲ್ಲ.

ಭಾರತದ ಗ್ರಾಮೀಣ ಪ್ರದೇಶದ ಹತ್ತು ಕುಟುಂಬಗಳ ಪೈಕಿ ಒಂಬತ್ತು ಕುಟುಂಬಗಳು ಮತ್ತು ನಗರ ಪ್ರದೇಶದ ಹತ್ತು ಕುಟುಂಬಗಳ ಪೈಕಿ ಏಳು ಕುಟುಂಬಗಳು ತಮ್ಮ ನೂರು ರೂಪಾಯಿಯ ಆದಾಯದಲ್ಲಿ ಶೇ.60ರಷ್ಟು ಕನಿಷ್ಠ ಅವಶ್ಯಕ ಆಹಾರಕ್ಕಾಗಿ ಖರ್ಚು ಮಾಡುತ್ತವೆ.

ಹೀಗೆ ಖರ್ಚು ಮಾಡಿದಾಗ್ಯೂ ಖಂಡಿತ ಶರೀರಕ್ಕೆ ಅಗತ್ಯವಿರುವ ಪ್ರಮಾಣದಲ್ಲಿ ಸತ್ವಯುತ ಆಹಾರ ದೊರೆಯುತ್ತಿಲ್ಲ. ಭಾರತದಲ್ಲಿ ಶೇ.60ರಷ್ಟು ಜನರಿಗೆ 2400 ಕ್ಯಾಲರಿಗಿಂತಲೂ ಕಡಿಮೆ ಪ್ರಮಾಣದಲ್ಲಿ ಆಹಾರ ಸಿಗುತ್ತದೆ. ಶೇ.40ರಷ್ಟು ಜನರಿಗೆ 1700 ಕ್ಯಾಲರಿ ಆಹಾರವು ತುಂಬ ಕಷ್ಟದಿಂದ ದೊರೆಯುತ್ತದೆ. ಗಾಬರಿಯಾಗುವ ಅಂಶವೆಂದರೆ ಬದುಕಿನ ಬಂಡಿಯನ್ನು ಓಡಿಸುವಲ್ಲಿ ಪುರುಷನಿಗಿಂತಲೂ ಹೆಚ್ಚು ದುಡಿಯುವ ಮಹಿಳೆಯರಲ್ಲಿ ಶೇ.70 ಮಹಿಳೆಯರಿಗೆ ರಕ್ತಹೀನತೆ ಇದೆ. ಗ್ರಾಮೀಣ ಪ್ರದೇಶದಲ್ಲಿ ಅರೆಹೊಟ್ಟೆಯಲ್ಲಿ ಅಂದರೆ ಹೊಟ್ಟೆ ತುಂಬ ಉಣ್ಣದೆ, ಒಡಲಲ್ಲಿ ನಿರಂತರ ಹಸಿವನ್ನಿಟ್ಟುಕೊಂಡೇ ಇರುವವರ ಸಂಖ್ಯೆಯು ಶೇ.40.6 ರಷ್ಟಿದೆ. ನಗರದಲ್ಲಿ ಶೇ. 22.6 ರಷ್ಟು (ಮೂಲ ಎನ್.ಎಫ್.ಹೆಚ್.ಎಸ್.)

ಕರ್ನಾಟಕದ ಜನತೆಯು ಸಹ ಈ ಹಸಿವೆಂಬ ಹೆಬ್ಬಾವಿಗೆ ಬಲಿಯಾಗುತ್ತಿರುವರು. ಆದ್ದರಿಂದಲೇ ದುಡಿವ ಜನರು. "ದುಡಿವ ಕೈಗೆ ಕೆಲಸ ಕೊಡಿ, ಹಸಿದ ಹೊಟ್ಟೆಗೆ ಅನ್ನ ಕೊಡಿ" ಎಂಬ ಹೋರಾಟದ ಕಹಳೆ ಮೊಳಗಿಸಿದರು. ಬಡಜನರಿಗೆ ಕಡಿಮೆ



ದರದಲ್ಲಿ ಅವಶ್ಯಕ ರೇಷನ್ನು ಒದಗಿಸಲೆಂದು ಸಾರ್ವಜನಿಕ ವಿತರಣಾ ವ್ಯವಸ್ಥೆ (ಪಬ್ಲಿಕ್ ಡಿಸ್ಟ್ರಿಬ್ಯೂಷನ್ ಸಿಸ್ಟಮ್ - ಪಿ.ಡಿ.ಎಸ್.)ಯು ಪ್ರಾರಂಭವಾಯ್ತು. ಈ ಯೋಜನೆಯ ಲಾಭವನ್ನು ನಿಜವಾದ ಬಡಜನತೆಗೆ ಪತ್ತೆ ಹಚ್ಚಿ ತಲುಪಿಸಲೆಂದು ಕೆಲವು ಮಾನದಂಡಗಳನ್ನು ರೂಪಿಸಿದರು.

ಮಾನದಂಡಗಳಲ್ಲಿನ ಪ್ರಮುಖ ಅಂಶವೆಂದರೆ ಬಡತನದ ರೇಖೆಯ ಕೆಳಗಿರುವವರನ್ನು (ಬಿ.ಪಿ.ಎಲ್.) ಗುರುತಿಸುವುದು ಮತ್ತು ಅವರಿಗೆ ಆಹಾರಧಾನ್ಯವನ್ನು ಕಡಿಮೆ ದರದಲ್ಲಿ ಪಡೆಯಲು ಕಾರ್ಡುಗಳನ್ನು ವಿತರಿಸುವುದು. ಸರಿ, ಬಡತನದ ರೇಖೆಯ ಕೆಳಗಿರುವವರನ್ನು ಯಾವ ಮಾನದಂಡದಲ್ಲಿ ಗುರುತಿಸುವುದು....? ಈ ಹೊತ್ತಿನ ಸರಕಾರದ ಲೆಕ್ಕಾಚಾರದ ಪ್ರಕಾರ ಕುಟುಂಬದಲ್ಲಿ ಒಬ್ಬ ವ್ಯಕ್ತಿ ಮಾತ್ರ ದುಡಿಯುತ್ತಿದ್ದರೆ, ವಾರ್ಷಿಕ ಆದಾಯ ಕೇವಲ 11,000 ದಷ್ಟಿದ್ದರೆ, ಇನ್ನೇನು ರೇಷನ್ನಿನ ಅನ್ನ ಸಿಕ್ಕರೆ ಮಾತ್ರ ಬದುಕಿಯಾನು, ಇಲ್ಲದಿರೆ ಇಲ್ಲ ಅನ್ನುವಂಥ ದಯನೀಯ ಪರಿಸ್ಥಿತಿಯಲ್ಲಿದ್ದರೆ ಅವರು ಬಿ.ಪಿ.ಎಲ್. ಒಂದು ವೇಳೆ ಒಂದು ಕುಟುಂಬದಲ್ಲಿ ಇಬ್ಬರು ವ್ಯಕ್ತಿಗಳು ದುಡಿಯುತ್ತಿದ್ದರೆ (ಎಷ್ಟೇ ಕಡಿಮೆ ಆದಾಯವಿದ್ದರೂ) ಮನೆಯಲ್ಲಿ ಪುಟ್ಟ ಟಿ.ವಿ. ಇದ್ದರೆ. ಮನೆಯ ಮುಂದೆ ಒಂದು ಸೈಕಲ್ ಇದ್ದರೆ. ಒಂದು ಜೊತೆ ಬಟ್ಟೆ ಹೆಚ್ಚಿಗಿದ್ದರೆ, ಮನೆಯ ಹೆಬ್ಬಾಗಿಲು ಗಟ್ಟಿ - ಮುಟ್ಟಾಗಿದ್ದರೆ ಖಂಡಿತ ಅವರೆಲ್ಲ ಬಿ.ಪಿ.ಎಲ್. ಅಲ್ಲ. ಅವರು ಎ.ಪಿ.ಎಲ್. ಅಂದರೆ ಬಡತನದ ರೇಖೆಯ ಮೇಲಿರುವವರು. ಇತ್ತೀಚೆಗೆ ಸರಕಾರ ನಡೆಸಿದ ಸಮೀಕ್ಷೆಯ ಪ್ರಕಾರ ಬಡತನದ ರೇಖೆಯ ಕೆಳಗಿರುವವರ ಸಂಖ್ಯೆಯು ಶೇ.36 ರಿಂದ 26ಕ್ಕೆ ಇಳಿದಿದೆ. ಅಂದರೆ ಶೇಕಡ 10ರಷ್ಟು ಜನತೆಯು ಶ್ರೀಮಂತರಾಗಿರುವವರು! ನಿಜವಾಗಿಯೂ ಜನರು ಬಡತನದಿಂದ ಬಿಡುಗಡೆ ಹೊಂದುತ್ತಿರುವರೇ...? ಹಾಗಾದರೆ ಶೇಕಡ ಶೇ. 40.6 ರಷ್ಟಿರುವ ಅರೆಹೊಟ್ಟೆಯ ಜನ ಯಾರು...? ಗೇಣು ಹೊಟ್ಟೆ ತುಂಬಿಸಿಕೊಳ್ಳಲೆಂದು ಮಾರುದ್ದ ಮೈ ಮಾರಾಟಕ್ಕಿಟ್ಟ ಈ ಸೋದರಿಯರು ಯಾರು...? ಲಕ್ಷ ಲಕ್ಷ ಜನರು ಕೆಲಸಕ್ಕಾಗಿ ಹಿಡಿ ಅನ್ನಕ್ಕಾಗಿ ಸಾಲು-ಸಾಲಿನಲ್ಲಿ ಕಾಣಿಸುವವರು ಯಾರು...? ಈಚೆಗೆ ಒಂದು ಚೌಕಿದಾರ (ಪಿವನ್) ಹುದ್ದೆಗಾಗಿ ಸಾವಿರಾರು ಅರ್ಜಿ ಗುಜರಾಯಿಸಿದವರು ಯಾರು...? ಒಟ್ಟು ಜನಸಂಖ್ಯೆಯ ಶೇಕಡ 45 ಕ್ಕೂ ಹೆಚ್ಚು ಇರುವ ಕೂಲಿ-ಕಾರ್ಮಿಕರೆಲ್ಲ ಯಾವಾಗ ಶ್ರೀಮಂತರಾದರು(ಎ.ಪಿ.ಎಲ್.)? ಮಧ್ಯಮ, ಸಣ್ಣ, ಅತಿ ಸಣ್ಣ ರೈತಾಪಿ ವರ್ಗದ ಹೊಟ್ಟೆಯು ಬೆನ್ನಿಗಂಟಿದೆಯಲ್ಲ ಇವರು ಯಾರು...? ಸರಕಾರದ ಪ್ರಕಾರ ಇದ್ದಕ್ಕಿದ್ದಂತೆ ಬಿ.ಪಿ.ಎಲ್. ಜನರೆಲ್ಲ ಎ.ಪಿ.ಎಲ್. ಆಗಿರುವರೆಂದು ಹೇಳುತ್ತಿರುವುದು ಅತ್ಯಂತ ಹಾಸ್ಯಾಸ್ಪದವಾಗಿದೆ. ಮಾತ್ರವಲ್ಲ ಬಡವರ ಮತ್ತು ಬಡತನದ ಬಗ್ಗೆ ಲೇವಡಿ ಮಾಡಿದಂತಾಗಿದೆ. ವ್ಯಕ್ತಿಯು ಹೊಟ್ಟೆ ತುಂಬ ಅನ್ನ ಉಣ್ಣುವುದು ಅಂದರೆ ಆರೋಗ್ಯವಂತನಾಗಿ ಬದುಕಲು ಮಾತ್ರಲ್ಲ. ಬದಲಿಗೆ ಸ್ವಾಭಿಮಾನದಿಂದ, ಸ್ವಯಂ ಸಮ್ಮಾನದಿಂದ ಬದುಕಿ ಬಾಳುವ ಸಂಕೇತವಾಗಿರುತ್ತದೆ. ತುತ್ತಿನ ಚೀಲ ತುಂಬಿಕೊಳ್ಳಲಿಕ್ಕಾಗಿ ಅತ್ಯಂತ ಅಪಮಾನಕ್ಕೆ ಬಲಿಯಾಗುವುದು ಮತ್ತು ಪರಿತಾಪ ಪಡುವಂತಾಗುವುದು ಅಂದರೆ ವ್ಯಕ್ತಿಯ ಇರುವಿಕೆಯನ್ನೇ - ಅಸ್ತಿತ್ವವನ್ನೇ ಅಲ್ಲಗಳೆದಂತೆ ಮತ್ತು ಅವಹೇಳನ ಮಾಡಿದಂತೆ. ಇಲ್ಲಿಯವರೆಗೂ ಕೇಂದ್ರ

ಕೆ.ನೀಲಾ

ಮತ್ತು ರಾಜ್ಯ ಸರಕಾರಗಳು ರೇಷನ್ ವಿತರಣೆ ಸಂಬಂಧ ಪಟ್ಟಂತೆ ಬಡ ಜನತೆಯೊಂದಿಗೆ ಚೆಲ್ಲಾಟವಾಡಿದ್ದಾರೆ. ಉಳ್ಳವರ ಕಿಸೆ ತುಂಬಿಸಲು ಬಡವರ ತುತ್ತು ಕಸಿದಿದ್ದಾರೆ.

ಹಿಂದೆ ಕರ್ನಾಟಕದಲ್ಲಿ ಬಡತನದ ರೇಖೆಯ ಕೆಳಗಿರುವ ಜನತೆಗಾಗಿ ಹಸಿರು ಕಾರ್ಡ್‌ಗಳನ್ನು ವಿತರಿಸಿತ್ತು. ಅಂಥ ಕಾರ್ಡುಗಳ ಸಂಖ್ಯೆಯು ಕೇವಲ 64 ಲಕ್ಷವಾಗಿತ್ತು. ಪಕ್ಕದ ರಾಜ್ಯವಾದ ಕೇರಳಕ್ಕೆ ಹೋಲಿಸಿದರೆ ಇದು ಏನೇನೂ ಅಲ್ಲ. ಕೇರಳದಲ್ಲಿ ಶೇ.97ರಷ್ಟು ಕಾರ್ಡುಗಳನ್ನು ವಿತರಿಸಿರುವರು. ಕರ್ನಾಟಕದಲ್ಲಿ ಕೇವಲ ಶೇ.20ರಷ್ಟು. ಅದರಲ್ಲೂ ಶೇ.5 ರಿಂದ 6 ರಷ್ಟು ಕಾರ್ಡುಗಳನ್ನು ಶ್ರೀಮಂತರಿಗೆ ಕೊಡಲಾಗಿದೆ. ನಿಜವಾದ ಬಡವರು ಕಾರ್ಡಿಲ್ಲದೆ ಪರದಾಡುತ್ತಿದ್ದಾರೆ. ಬಡವರಿಗೆ ಹಸಿರು ಕಾರ್ಡು ಕೊಡಿ ಎಂಬ ಚಳುವಳಿಗಳು ಶುರುವಾಗಿದ್ದ ಬೆನ್ನ ಹಿಂದೆಯೇ ಶ್ರೀಮಂತರಿಗೆ ಕಾರ್ಡು ಕೊಟ್ಟಿರುವುದು ಬೆಳಕಿಗೆ ಬರತೊಡಗಿತು.

ಅಂತು ಅನ್ನಕ್ಕಾಗಿ ಚಳುವಳಿಗಳು ಭುಗಿಲೇಳತೊಡಗಿದಂತೆ ಹಿಂದಿನ ರಾಜ್ಯ ಸರಕಾರವು ಪುನಃ ಸಮೀಕ್ಷೆಗೆ ಆದೇಶ ಮಾಡಿತು ಮತ್ತು ಕಾರ್ಡಿನ ಬಣ್ಣ ಬದಲಾಯಿಸಿತು. ಹಸಿರು ಬಣ್ಣದ ಕಾರ್ಡ್‌ನ್ನು ಎ.ಪಿ.ಎಲ್.ಗೊಳಿಸಿ ಹಳದಿ ಬಣ್ಣವನ್ನು ಬಿ.ಪಿ.ಎಲ್.ಗೊಳಿಸಿತು. ಅಂದರೆ ಕೇಂದ್ರ ಸರಕಾರದ ಅನ್ನಪೂರ್ಣ ಮತ್ತು ಅಂತ್ಯೋದಯದೊಂದಿಗೆ ರಾಜ್ಯದ ಹಳದಿ ಕಾರ್ಡ್ ಬಿಪಿಎಲ್ ಎಂದರ್ಥ ಪುನಃ ಸಮೀಕ್ಷೆಯ ಹೆಸರಿನಲ್ಲಿ ವಿಶ್ವಬ್ಯಾಂಕಿನ ಆದೇಶದಂತೆ ಬಡವರ ಕೈಯಲ್ಲಿನ ಕಾರ್ಡು ಕಸಿದುಕೊಳ್ಳುವುದು ಮತ್ತು ರಿಯಾಯಿತಿ

ಲ್ಲಿ ಸಿಗುವ ಚೂರು ಪಾರು ಗಂಜಿಯೂ
ಯದಂತೆ ಮಾಡುವುದೇ ಸರಕಾರದ ಹಿಡನ್
ಡಾವಾಗಿದೆ. ಆದ್ದರಿಂದಲೇ ಈಗ ಸರಕಾರಿ
ಶವೇನೆಂದರೆ ಒಟ್ಟು ಸಮೀಕ್ಷೆಯ ಪೈಕಿ
ಗಳಲ್ಲಾದರೆ ಶೇಕಡ 30ರಷ್ಟು ಮಾತ್ರ ಹಳದಿ
ಕೊಡಬೇಕು ಮತ್ತು ಗ್ರಾಮೀಣ ಪ್ರದೇಶದಲ್ಲಿ
0 ರಷ್ಟು ಮಾತ್ರ.

4 ಲಕ್ಷ ಕಡಿತ ಮಾಡಿದ್ದು ಯಾರ
ರ್ಡ್‌ಗಳನ್ನು...? ಶ್ರೀಮಂತರಿಂದ
ರ್ಡ್‌ಗಳನ್ನು ವಾಪಸು ಪಡೆದಿದ್ದಾರೆಯೇ?
ನ್ನು ಪಡೆದಿದ್ದೆಲ್ಲ ಬಡವರ ಕಾರ್ಡುಗಳನ್ನು.
ತಾವೇ ಶ್ರೀಮಂತರಿಗೆ ಕಾರ್ಡು ಕೊಟ್ಟ
ಲೆಕ್ಕಿಗರು. ಪಂಚಾಯತ್‌ನವರು ಈಗ
ರ್ಡ್‌ಗಳನ್ನು ವಾಪಸು ಪಡೆಯಲಾಗದೆ ಆ ಕೆಲಸಕ್ಕೆ
ನವಾಡಿ ಮಹಿಳೆಯರನ್ನು ಕಳಿಸುತ್ತಿದ್ದಾರೆ. ಜನರ
ಕ್ರೋಶಕ್ಕೆ ಬಲಿಯಾಗುವುದು ಸಾಮಾನ್ಯ ಜನರೇ.
ರ್ನಾಟಕದ ಹಿಂದಿನ ಎಸ್.ಎಂ.ಕೃಷ್ಣ
ಕಾರವು ಕಾರ್ಡುಗಳ ಬಣ್ಣವೇನೋ
ಲಾಯಿಸಿತು. ಆದರೆ ಕನಿಷ್ಠ ಆದಾಯವು
00ಕ್ಕೆ ಹೆಚ್ಚಿಸಲು ಒಪ್ಪಲಿಲ್ಲ. ಸತತ ಪ್ರಯತ್ನಗಳ
ದಾಯ 16,000ಕ್ಕೆ ಹೆಚ್ಚಿಸಲು ಭರವಸೆ ಇತ್ತಿತು.
ನ ಬಿಜೆಪಿ ನೇತೃತ್ವದ ಎನ್.ಡಿ.ಎ. ಸರಕಾರವ
ಗೀಕರಣ, ಉದಾರೀಕರಣ, ಜಾಗತೀಕರಣದ

...ಗಿ......

ಗಳನ್ನು ಬೆನ್ನಿಗಿಟ್ಟುಕೊಂಡು ಬಿಪಿಎಲ್
ರ್ಡ್‌ಗಳನ್ನು 38 ಲಕ್ಷದಷ್ಟು ಕಡಿತ ಮಾಡಬೇಕೆಂದು
ಸರಕಾರಗಳಿಗೆ ಸೂಚಿಸಿತು. ಕೃಷ್ಣ ಸರಕಾರ
ವಾಜಪೇಯಿಯವರ ದನಿಗೆ ದನಿ ಸೇರಿಸಿ ಇದ್ದ
ಕ್ಷ ಕಾರ್ಡುಗಳಲ್ಲಿ 30 ಲಕ್ಷ ಕಾರ್ಡ್‌ಗಳನ್ನು
ಮಾಡಲು ಮುಂದಾಯಿತು. ಅಷ್ಟರಲ್ಲಿಯೇ
ಚುನಾವಣೆಗಳು ಬಂದವು. ಜನತೆಯ ಹಸಿವೆಯ
ಸ್ಯೆಯನ್ನು ಪರಿಹರಿಸದ ಕಾಂಗ್ರೆ ಪಕ್ಷಕ್ಕೆ
ದಾರರು ತ್ರಿಶಂಕು ಸ್ಥಿತಿಯಲ್ಲಿ ತೂಗುಬಿಟ್ಟರು.
ಅವರು ಮನೆಗೆ ಹೋಗಬೇಕಾಯ್ತು.
ಚುನಾವಣೆಯಲ್ಲಿ ಬಹುಮತ ಪಡೆಯದ
ಗ್ರೆ-ಜೆ.ಡಿ.(ಎಸ್.)ನೊಂದಿಗೆ ಕೈ ಜೋಡಿಸಿ
ರ ರಚಿಸಿದೆ. ಜನರ ರೇಷನ್ ಕಡಿತ ಮಾಡಲು
ಗಿ ಕುರ್ಚಿ ಕಳಕೊಳ್ಳುವ ದುಃಸ್ವಪ್ನಕ್ಕೆ ಬೆಚ್ಚಿದ
ರ್ಸಿಂಗ್ ಸರಕಾರವು ಈಗ ರಾಜ್ಯದಲ್ಲಿ ಪುನಃ
ಕ್ಷೆ ಮಾಡಿ 75 ಲಕ್ಷ ಬಿ.ಪಿ.ಎಲ್. ಕಾರ್ಡ್
ಸುವುದಾಗಿ ಘೋಷಿಸಿದೆ. ಅದಕ್ಕಾಗಿ ಹೆಚ್ಚಿನ
ಟ್ ಅಗತ್ಯ ಬೀಳಲಿದೆ. ಆದರೆ ಅದನ್ನು
ಹೊಗಿಸಲು ಪುನಃ ಮಾಡುವ ಸರ್ಕಸ್ಸೆಂದರೆ
ದ್ಯೋಗ ಕಡಿತ, ಬಡವರಿಗಾಗಿ ಇರುವ
ಯೋಜನೆಗಳ ಕಡಿತದ ಮೂಲಕವೇ ಹೆಚ್ಚಿನ ಹೊರೆ
ತೂಗಿಸುವುದಾದರೆ, ಮತ್ತೆ ಬಡವರದ್ದೇ ಕಿಸೆ
ಸಿದಂತಾಗದೇ...?
ಆದ್ದರಿಂದ ಉಳ್ಳವರ ಸಂಪತ್ತಿನ ಮೇಲೆ ತೆರಿಗೆ
, ಕಾಳ ಸಂತೆಗಳಿಗೆ ಕಡಿವಾಣ ಹಾಕಿ ಬಡವರ
ಟ್ಟೆಗೆ ಅನ್ನ, ಕೈಗೆ ಕೆಲಸ ಕೊಡುವ ದಿಕ್ಕಿನತ್ತ
ರ ಹೆಜ್ಜೆ ಇಡುವ ಜರೂರಿ ಇದೆ. ರಾಜ್ಯದಲ್ಲಿ
ಕ್ಷ ಜನರಿಗೆ ಬಿ.ಪಿ.ಎಲ್. ಕಾರ್ಡ್ ಕೊಡುವ
ದನ್ನು ಸ್ವಾಗತಿಸುತ್ತೇವಾದರೂ ಇನ್ನೂ
ಖ್ಯಾತ ಜನ ಬಡತನದಿಂದ ಬಳಲುತ್ತಿದ್ದಾರೆ,
ವರಿಗೆಲ್ಲ ಬಿ.ಪಿ.ಎಲ್. ಕಾರ್ಡ್ ಕೊಡುವ
ವ್ಯಕತೆ ಇದೆ.
ದ್ದು ಬಂಗಾಳದ ಸ್ಥಿತಿಗೆ ವಿರುದ್ಧವಾಗಿ
ರ್ಟಕದಲ್ಲಿ ಹೆಬ್ಬಾಗಿಲಿಗೊಂದು ಕಾರ್ಡು!
ರೆ ಹಿಂದೆ ಅವಿಭಕ್ತ ಕುಟುಂಬವಾಗಿದ್ದಲ್ಲಿ
ವುದು ಒಂದೇ ಮನೆಯಾಗಿದ್ದು, ಕಾಲಕ್ರಮೇಣ
ತಮ್ಮಂದಿರರ ಪ್ರತ್ಯೇಕ ಕುಟುಂಬಗಳಾಗಿ

ಭಾಗವಾಗುವುದು ಸಹಜ. ಒಂದು ಹೆಬ್ಬಾಗಿಲಿರುವ ಮನೆಯಲ್ಲಿ ಕನಿಷ್ಠ ಮೂರು ನಾಲ್ಕು ಕುಟುಂಬಗಳಿರುತ್ತವೆ. ಆದರೆ ಸರಕಾರದ ಆದೇಶದಂತೆ ಮನೆಯ ಹೆಬ್ಬಾಗಿಲಿಗೊಂದು ಸಂಖ್ಯೆ ಇರುತ್ತದೆ, ಆ ಸಂಖ್ಯೆಗೆ ಒಂದು ಕಾರ್ಡು. ಹೀಗಾಗಿ ಅನೇಕ ಬಡ ಕುಟುಂಬ ಗಳು ಕಾರ್ಡಿನಿಂದ ವಂಚಿತರಾಗಿದ್ದಾರೆ. ಮುಂದೆಯೂ ವಂಚಿತರಾಗುವ ಸಾಧ್ಯತೆಗಳಿವೆ.

ಸುಪ್ರೀಂ ಕೋರ್ಟು ರೇಷನ್ ವಿತರಣಾ ಪ್ರಣಾಳಿ ಸಂಬಂಧಪಟ್ಟಂತೆ ಪ್ರಮುಖ ಮಾರ್ಗದರ್ಶನ ಮಾಡಿದೆ. ವಿಧವೆ ಮಹಿಳೆಯರಿಗೆ, ಒಂಟಿಗರಿಗೆ, ವಿಕಲಾಂಗರಿಗೆ ಮತ್ತು ಏಕಾಂಗಿ ವೃದ್ಧರಿಗೆ ಅಂತ್ಯೋದಯ ಕಾರ್ಡು ಕೊಡಬೇಕು. ಅನ್ನಪೂರ್ಣಾ ಕಾರ್ಡು 65 ವಯಸ್ಸು ಮೇಲ್ಪಟ್ಟ ಏಕಾಂಗಿ ವೃದ್ಧರಿಗೆ ಕೊಡುವುದು ಮತ್ತು ತಿಂಗಳಿಗೆ 10 ಕೆ.ಜಿ. ಅಕ್ಕಿ ಪುಕ್ಕಟೆ ಕೊಡುವುದು. ಆದರೆ ಬಹುತೇಕ ಕಡೆಗಳಲ್ಲಿ ಇದು ಜಾರಿಯಾಗಲೇ ಇಲ್ಲ. ವಿಧವೆ ಸ್ತ್ರೀ, ಪರಿತ್ಯಕ್ತ ಸ್ತ್ರೀಯು ತವರ ಮನೆಯಲ್ಲೂ ಗಂಡನ ಮನೆಯಲ್ಲೂ ತಿರಸ್ಕಾರಕ್ಕೆ ಒಳಗಾಗಿ ತುತ್ತು ಅನ್ನವೂ ಸಿಗದ ಪರಿಸ್ಥಿತಿ ಎದುರಿಸುತ್ತಿರುತ್ತಾಳೆ. ಇಂಥ ಸ್ತ್ರೀಯ ಕೈಯಲ್ಲಿ ಒಂದು ಬಿಪಿಎಲ್ ಕಾರ್ಡಿದ್ದರೆ ಒಂದು ಹೊತ್ತು ಗಂಜಿಯಾದರೂ ದಕ್ಕುತ್ತದೆ. ಆದರೆ ಜನವಿರೋಧಿ ನೀತಿಯುಳ್ಳ ರಾಜ್ಯ ಸರಕಾರವ ಬಡವರಿಗೆ ಕಾರ್ಡು ಕೊಡದೆ ವಂಚಿಸುತ್ತಿದೆ.

ಪುಟ 8 ಕ್ಕೆ



ದಕ್ಷಿಣ ಕನ್ನಡ : ಕುಸಿಯುತ್ತಿರುವ ರೇಷನ್ ವ್ಯವಸ್ಥೆ

ಮಂಗಳೂರಿನಲ್ಲಿ 59ನೇ ಸ್ವಾತಂತ್ರ್ಯದಿನದ ಧ್ವಜಾರೋಹಣ ನೆರವೇರಿಸಿ ಭಾಷಣ ಮಾಡಿದ ಜಿಲ್ಲಾ ಉಸ್ತುವಾರಿ ಮಂತ್ರಿ ಜಬ್ಬಾರ್‌ಖಾನ್ ಹೊನ್ನಾಳಿಯವರು ಜಿಲ್ಲೆಯಲ್ಲಿ ಹೊಸತಾಗಿ 1.52 ಲಕ್ಷ ಕುಟುಂಬಗಳನ್ನು ಬಿಪಿಎಲ್ ಪಟ್ಟಿಗೆ ಸೇರಿಸುವುದಾಗಿ ಹೇಳಿಕೊಂಡಿದ್ದಾರೆ. ಬಹುಷಃ ಈ ರೀತಿ ಘೋಷಿಸುವಾಗ ಇದೊಂದು 'ಅದ್ಭುತ ಸಾಧನೆ' ಎಂಬ ಮನೋಭಾವ ಅವರಲ್ಲಿ ಇರಬಹುದು. ಮಂಗಳೂರು ಮಹಾನಗರ ಪಾಲಿಕೆ ವ್ಯಾಪ್ತಿಯಲ್ಲೇ ಏನಿಲ್ಲವೆಂದರೂ ಸರಿಸುಮಾರು 80,000 ಕುಟುಂಬಗಳು ಬಿಪಿಎಲ್ ಪಟ್ಟಿಗೆ ಸೇರಬೇಕಾಗಿರುವಾಗ ಇನ್ನು ಜಿಲ್ಲಾ ವ್ಯಾಪ್ತಿಯಲ್ಲಿ ಕೇವಲ 1.52 ಲಕ್ಷ ಕುಟುಂಬಗಳನ್ನು ಸೇರಿಸಿಕೊಂಡಿದ್ದೇವೆ ಎಂದು ಕೊಚ್ಚಿಕೊಳ್ಳುವುದರಲ್ಲಿ ಯಾವ ಮಹತ್ವವಿದೆ? ಒಂದು ಅಂದಾಜಿನ ಪ್ರಕಾರ ಸರಿಸುಮಾರು 3 ಲಕ್ಷ ಕುಟುಂಬಗಳು ಈ ಬಿಪಿಎಲ್ ಪಟ್ಟಿಗೆ ಸೇರಬೇಕಾಗುತ್ತದೆ.



ಬಿಜೆಪಿ ನೇತೃತ್ವದ ಎನ್‌ಡಿಎ ಸರಕಾರ ದೇಶ ವ್ಯಾಪ್ತಿಯಾಗಿ ಪಡಿತರ ವ್ಯವಸ್ಥೆಯ ಮೇಲೆ ಗಧಾ ಪ್ರಹಾರ ನಡೆಸಿ ತನ್ನ ಮಾಮೂಲಿ ಬೆಂಬಲಿಗರಾದ ಬೃಹತ್ ವಾಣಿಜ್ಯೋದ್ಯಮಿಗಳ ಹಿತಾಸಕ್ತಿಯನ್ನು ಪ್ರತ್ಯಕ್ಷವಾಗಿ ಮತ್ತು ಪರೋಕ್ಷವಾಗಿ ಕಾಯ್ದಿರಿಸಿಕೊಂಡಂತೆ ದಕ್ಷಿಣಕನ್ನಡ ಜಿಲ್ಲೆಯ ಮಟ್ಟಿಗೆ ಗಂಭೀರ ಪ್ರಮಾಣದ ಅನ್ಯಾಯವಾಗಿದೆ. ಕುಟುಂಬವನ್ನು ಬಿಪಿಎಲ್ ಪಟ್ಟಿಯಿಂದ ತೆಗೆದು ಹಾಕಲು ನಿರ್ಧಾರಕ ಅಂಶಗಳಾದ ಗ್ಯಾಸ್ ಕಲೆಕ್ಷನ್, ದ್ವಿಚಕ್ರ ವಾಹನ, ಫೋನು, ಟಿ.ವಿ. ಮೊದಲಾದುವುಗಳನ್ನು ಹೊಂದಿರುವ ಕುಟುಂಬಗಳು ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಜಾಸ್ತಿ ಇವೆ. ದಕ್ಷಿಣ ಕನ್ನಡದಲ್ಲಿ ಸಾಮಾನ್ಯ ಬಡ ಕುಟುಂಬಗಳು ಕೂಡಾ ಗಂಡಾಗುಂಡಿ ಮಾಡಿಯಾದರೂ ಮೇಲ್ಕಂಡ ಅವಶ್ಯಕತೆಗಳನ್ನು ಈಡೇರಿಸಿಕೊಳ್ಳುತ್ತವೆ. ಕರ್ನಾಟಕದ ಇತರ ಜಿಲ್ಲೆಗಳಿಗೆ ಹೋಲಿಸಿದರೆ ಈ ಜಿಲ್ಲೆಯ ಜನ ಸಮುದಾಯ ಮೇಲ್ಕಂಡ ಅವಶ್ಯಕತೆಗಳನ್ನು ಈಡೇರಿಸಿಕೊಂಡಿರುವುದಕ್ಕೆ ಚಾರಿತ್ರಿಕ ಮಹತ್ವ ಇದೆ. ಜಿಲ್ಲೆಯ ಜನಸಾಮಾನ್ಯರ ಬದುಕಿನ ನಾಡಿಮಿಡಿತದಂತಿದ್ದ ಗುಡಿ ಕೈಗಾರಿಕೆಗಳು, ಭೂಸುಧಾರಣೆ, ಶಿಕ್ಷಣ, ವಾಣಿಜ್ಯ ಕೃಷಿ ಮತ್ತು ವಾಣಿಜ್ಯ ಸಂಪರ್ಕಗಳೆಲ್ಲವೂ ಈ ಜಿಲ್ಲೆಯ ಜನರ ಜೀವನಮಟ್ಟ (standard of living)ವನ್ನು ಜಾಸ್ತಿ ಮಾಡುವುದಕ್ಕೆ ಕಾರಣವಾಗಿದೆ. ಹಾಲಿ ಪ್ರಧಾನ ಮಂತ್ರಿಯವರು ವಿತ್ತ ಮಂತ್ರಿಯಾಗಿದ್ದಾಗ ಬಡವರನ್ನು ಉದ್ದೇಶಿಸಿ "ಹೊಟ್ಟೆಗೆ ಬೆಲ್ಟ್ ಕಟ್ಟಿ" ಎಂಬ ಉಚಿತ ಸಲಹೆ ನೀಡಿದ್ದರು. ಈ ಸಿದ್ಧಾಂತ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಬಹಳ ಹಿಂದಿನಿಂದಲೂ ಚಾಲ್ತಿಯಲ್ಲಿದೆ. ಮೇಲ್ಕಂಡ ಅವಶ್ಯಕತೆಗಳನ್ನು ಪೂರೈಸಿಕೊಳ್ಳಲಂತೂ ಹೊಟ್ಟೆಗೆ ಬೆಲ್ಟ್ ಕಟ್ಟಿದ್ದಲ್ಲದೆ ಮತ್ತೇನೂ ಅಲ್ಲ. ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಗೃಹೋಪಯೋಗಿ ವಸ್ತುಗಳನ್ನು ಮನೆ ಮನೆಗೂ ತಲುಪಿಸಿ ವರ್ಷಗಟ್ಟಲೆ ಕಂತಿನ ಮೂಲಕ ಬಡ ಕುಟುಂಬಗಳೊಂದಿಗೆ ಅನನ್ಯ ಸಾಧಿಸಿದ ತಮಿಳುನಾಡು ಮೂಲದ ವ್ಯಾಪಾರಿಗಳ ಅರ್ಧ ದಶಕಕ್ಕೂ ಮೀರಿದ ಇತಿಹಾಸವಿದೆ. ನೂರು, ಇನ್ನೂರು ಮುನ್ನೂರು ರೂಪಾಯಿ ಬಡ್ಡಿಸಾಲ ನೀಡುವ - ಅದನ್ನು ಪರಂಪರಾಗತವಾಗಿ ಉಪಯೋಗಿಸಿ ಸೌಲಭ್ಯಗಳನ್ನು ದಕ್ಕಿಸಿಕೊಳ್ಳುವ ಬಡವರ್ಗವೂ ಇದೆ. ಸಣ್ಣ ಸಣ್ಣ ಮೊತ್ತದ ಸ್ಥಳೀಯ ಮಟ್ಟದ ಕುರಿ ಫಂಡ್, ಚೀಟಿ ವ್ಯವಹಾರಗಳೂ ಸಾಕಷ್ಟು ಸಂಖ್ಯೆಯಲ್ಲಿ ಇವೆ. ಏನಿಲ್ಲವೆಂದರೂ ಆರ್ಥಿಕ ವಹಿವಾಟಿನ ಮೂಲಕ ಬದುಕಿನ ಗಾಲಿ ತಿರುಗಿಸಲು ಹತ್ತಾರು ವಿಧಾನಗಳು ಹಲವಾರು ದಶಕಗಳಿಂದ ಜಾರಿಯಲ್ಲಿವೆ. ಇಂತಹ ಅತಿ ಸಾಹಸದ ಆರ್ಥಿಕತೆ ಇಂದು ಪಡಿತರಕ್ಕೆ ಮುಳುವಾಗಿದೆ. ಒಂದಲ್ಲ ಒಂದು ಮೇಲ್ಕಂಡ ಸೌಲಭ್ಯಗಳು ಇವೆ ಎಂಬ ಕಾರಣಕ್ಕೆ ಈ ಕುಟುಂಬಗಳನ್ನು ಪಡಿತರದಿಂದ ದೂರೀಕರಿಸಲಾಗಿದೆ.

ದಕ್ಷಿಣ ಕನ್ನಡದ ಆಹಾರ ಪದ್ಧತಿ ಮತ್ತು ಪಡಿತರ ವಸ್ತುಗಳು

ದಕ್ಷಿಣ ಕನ್ನಡ ಜಿಲ್ಲೆಯ ಜನತೆ ಅನ್ನಕ್ಕಾಗಿ ಕುಚ್ಚಲು ಅಕ್ಕಿ ಬಳಸುತ್ತಿದ್ದಾರೆ. ಬಡಜನತೆ ಸಾಮಾನ್ಯವಾಗಿ ಬೆಳಿಗ್ಗೆ, ಮಧ್ಯಾಹ್ನ ಮತ್ತು ರಾತ್ರಿ ಎಂದು ಹೇಳಿ ಮೂರು ಹೊತ್ತೂ ಕುಚ್ಚಲು ಅಕ್ಕಿಯ ಅನ್ನ ಸಾಂಬಾರನ್ನೇ ಸೇವಿಸುವುದು ವಾಡಿಕೆಯಾಗಿದೆ. ಕುಚ್ಚಲು ಅಕ್ಕಿಯಲ್ಲೂ ಕೆಂಪು ಬಣ್ಣದ 'ಕಜೆ' ಅಕ್ಕಿಯನ್ನು ಜನ ಹೆಚ್ಚು ಇಷ್ಟಪಡುತ್ತಾರೆ. ಆದರೆ ಪಡಿತರದಲ್ಲಿ ಈಗ ಕುಚ್ಚಲು ಅಕ್ಕಿ ದೊರೆಯುವುದೇ ಇಲ್ಲ. 90ರ ದಶಕದಲ್ಲಿ ಬಿಳಿಬಣ್ಣದ ಬೇಯದ, ಕನಿಷ್ಠ ಗುಣಮಟ್ಟದ ಕುಚ್ಚಲು ಅಕ್ಕಿ ದೊರೆಯುತ್ತಿತ್ತು. ಬಡಜನತೆ ಅದನ್ನೂ ಸಹ ನಿತ್ಯದ ಆಹಾರವಾಗಿ ಉಪಯೋಗಿಸುತ್ತಿದ್ದರು. ಈಗ ದೊರೆಯುತ್ತಿರುವ ಕೇವಲ ಬೆಳ್ತಗೆ ಅಕ್ಕಿ ಅನ್ನಕ್ಕಾಗಿ ಉಪಯೋಗಿಸುವವರೇ ಇಲ್ಲ. ಕೇವಲ ತಿಂಡಿ ಮಾಡಲು ಮಾತ್ರ ಅದನ್ನು ಅತ್ಯಲ್ಪ ಪ್ರಮಾಣದಲ್ಲಿ ಪಡೆಯುತ್ತಿದ್ದಾರೆ. ಬಿಪಿಎಲ್ ರೇಷನ್ ಪದ್ಧತಿಗೆ ಒಳಪಟ್ಟ ರೇಷನ್‌ನಲ್ಲೂ ಇದೇ ಅಕ್ಕಿ ದೊರೆಯುತ್ತಿದೆ. ಇನ್ನೂ ಸಕ್ಕರೆ ಮತ್ತು ಸೀಮೆ ಎಣ್ಣೆ ಅತಿ ಹೆಚ್ಚು ಜನ ಪಡಿತರ ಪದ್ಧತಿಯಿಂದ ಪಡೆಯುವ ವಸ್ತು ಆಗಿದೆ. ಆದರೆ ಗ್ಯಾಸ್ ಕನೆಕ್ಷನ್ ಹೊಂದಿರುವ ಕಾರಣ ಸೀಮೆ ಎಣ್ಣೆಯೂ ರೇಷನ್‌ನಲ್ಲಿ ದೊರೆಯುತ್ತಿಲ್ಲ. ಸೀಮೆ ಎಣ್ಣೆಯ ಗತಿ ಈ ರೀತಿಯಾದರೆ ಸಕ್ಕರೆಯ ಗತಿ ಮತ್ತೊಂದು. ಬಿಪಿಎಲ್ ಚೀಟಿದಾರರಿಗೆ ಸಕ್ಕರೆ ಇಲ್ಲ. ಉಳಿದವರಿಗೆ ದೊರೆಯುವ ಸಕ್ಕರೆಯ ದರ ಮುಕ್ತ ಮಾರುಕಟ್ಟೆಯ ದರಕ್ಕಿಂತ ಸ್ವಲ್ಪ ಮಾತ್ರ ಕಡಿತವಿದೆ. ವಾಸ್ತವತೆ ಹೀಗಿರುವಾಗ ಜನ ರೇಷನ್ ಅಂಗಡಿಗೆ ಹೋಗಿ ಗಂಟೆಗಟ್ಟಲೆ 'ಕ್ಯೂ'ನಲ್ಲಿ ಯಾಕೆ ನಿಲ್ಲಬೇಕು.

ದಕ್ಷಿಣ ಕನ್ನಡ ಜಿಲ್ಲೆಯ ಜನಸಂಖ್ಯೆಯ ಸರಿಸುಮಾರು ಶೇ.70 ಜನ ರೇಷನ್ ಪದ್ಧತಿಗೆ ಒಳಗಾಗಲು ಸಿದ್ಧರಿದ್ದಾರೆ. ಕುಚ್ಚಲು ಅಕ್ಕಿ, ಸೀಮೆ ಎಣ್ಣೆ, ದವಸ ಧಾನ್ಯ ಸಕ್ಕರೆ ಮೊದಲಾದವುಗಳು ಉತ್ತಮ ಗುಣಮಟ್ಟದೊಂದಿಗೆ ಅಗ್ಗದ ದರದಲ್ಲಿ ಅಗತ್ಯವಿರುವಷ್ಟು ಪ್ರಮಾಣದಲ್ಲಿ ದೊರೆಯುವಂತಾದರೆ ಜನ ಮತ್ತೆ ನ್ಯಾಯಬೆಲೆ ಅಂಗಡಿಯತ್ತ ಮುಗಿಬೀಳುತ್ತಾರೆ. ಅದು ಅವರಿಗೆ ಅಗತ್ಯವಾಗಿದೆ. ಅಂತ್ಯೋದಯ ಸ್ಕೀಮ್ ಎಲ್ಲಾ ಕಡುಬಡವರಿಗೆ ದೊರೆಯಬೇಕು. ಕೃಷಿ ಕೂಲಿ ಕಾರ್ಮಿಕರಾಗಿ, ಬೀಡಿ ಮೊದಲಾದ ಗೃಹ ಕೈಗಾರಿಕೆಗಳಲ್ಲಿ ಕೂಲಿನಾಲಿ ಮಾಡುತ್ತಿರುವ ಅರೆಹೊಟ್ಟೆಯಲ್ಲಿರುವ ಲಕ್ಷಾಂತರ ಜನರಿಗೆ ಹೊಟ್ಟೆ ತುಂಬಾ ತಿನ್ನಲು ಸಾಧ್ಯವಾಗುವಂತಹ ರೇಷನ್ ವ್ಯವಸ್ಥೆ ಬೇಕಾಗಿದೆ. ಆಗ ಈ ಜನರ ಆರೋಗ್ಯ, ಶಿಕ್ಷಣ, ಜೀವನಮಟ್ಟ ಮತ್ತು ಉತ್ಪಾದಕತೆಯಲ್ಲಿ ಹೊಸ ಧನಾತ್ಮಕ ಅಂಶಗಳು ಸಾಧ್ಯ.

ದಕ್ಷಿಣ ಕನ್ನಡ ಜಿಲ್ಲೆಯ ರೇಷನ್ ವ್ಯವಸ್ಥೆಯ ಚರಿತ್ರೆಯಲ್ಲಿ ಕಮ್ಯೂನಿಷ್ಟ್ ಪಕ್ಷಗಳ ಹೋರಾಟ ಅಮೋಘವಾಗಿದೆ. ಈ ಭವ್ಯ ಹೋರಾಟದ ಪರಂಪರೆಗೆ ಸಿ.ಪಿ.ಐ(ಎಂ) ಪಕ್ಷದ ಅಖಿಲಭಾರತ ಆಂದೋಲನವು ದಿಕ್ಸೂಚಿಯಾಗಲಿದೆ.

ಕೃಷ್ಣಪ್ಪ ಕೊಂಚಾಡಿ

ಒಡಲ ಕಿಡಿ ಉರಿಯಾಗಿ......

ಪುಟ 7 ರಿಂದ

ಅಷ್ಟು ಮಾತ್ರವಲ್ಲ, ಸಾರ್ವಜನಿಕ ವಿತರಣಾ ವ್ಯವಸ್ಥೆಯನ್ನೇ ಬುಡಮೇಲು ಮಾಡುವಂತಹ ಪ್ರಮುಖ ನಾಲ್ಕು ನೀತಿಗಳನ್ನು ಹೊಂದಿದೆ. ಅವುಗಳೆಂದರ :

1. ಅತಿ ದೊಡ್ಡ ಸಂಖ್ಯೆಯಲ್ಲಿರುವ ಬಡವರನ್ನು ಬಿಪಿಎಲ್ ಲಿಸ್ಟ್‌ನಲ್ಲಿ ಸೇರದಂತೆ ಮಾಡಿರುವುದು. ಈ ಕಾರಣದಿಂದಾಗಿ ಕಾರ್ಡಿನಿಂದ ವಂಚಿತ ಮಾಡಿರುವುದು.

2. ರೇಷನ್ ಬೆಲೆಯಲ್ಲಿ ಅತಿ ಹೆಚ್ಚಳ ಮಾಡಿ ತೆರೆದ ಅಂಗಡಿಯ ಬೆಲೆಯ ಸಮಾನ ತಂದು ಬಡಜನತೆ ಖರೀದಿಸದಂತೆ ಮಾಡಿರುವುದು.

3. ಅತ್ಯಂತ ಕಳಪೆ ಮಟ್ಟದ ರೇಷನ್ ವಿತರಿಸುವುದರಿಂದ ಜನರು ಅನಿವಾರ್ಯವಾಗಿ ತೆರೆದ ಅಂಗಡಿಗಳಿಂದ ದುಬಾರಿ ಆಹಾರ ಸಾಮಗ್ರಿ ಖರೀದಿಸುವಂತೆ ಮಾಡಿರುವುದು.

4. ರೇಷನ್ ಅಂಗಡಿಯವರ ಬಡವರ ವಿರೋಧಿ ನೀತಿ

ಇವುಗಳ ಕಾರಣವಾಗಿ ಜನರು ರೇಷನ್ ಅಂಗಡಿಯಿಂದ ಆಹಾರ ದಾಸ್ತಾನು ತರುವಲ್ಲಿ ಹಿಂದೇಟು ಹಾಕುತ್ತಾರೆ. ತೀರ ಕಡುಬಡತನದಲ್ಲಿರುವವರು ಮಾತ್ರ ಅನಿವಾರ್ಯವಾಗಿ ರೇಷನ್ ತರುವರು. ಹೀಗಾಗಿ ಉಳಿದ ದಾಸ್ತಾನನ್ನು ಅಂಗಡಿಯವನು ಕಾಳಸಂತೆಯಲ್ಲಿ ಮಾರಿಕೊಳ್ಳುವನು. ಅಥವಾ ಹಾಗೆಯೇ ಸರಕಾರಕ್ಕೆ ವರದಿ ಮಾಡದಲ್ಲಿ ಬರುವ ಕೋಟಾ ಖಾಯಮಾಗಿ ಕಡಿತಕ್ಕೊಳಗಾಗುವುದು.

ಎಷ್ಟೋ ಬಾರಿ ಬಡವರಿಗೆ ರೇಷನ್ ಖರೀದಿಸಲು ಬೇಕಾಗುವ ಹಣವು ಒಂದೇ ಸಲಕ್ಕೆ ಕೈಯಲ್ಲಿರದ ಕಾರಣವು ಅವರ ಪಾಲಿನ ರೇಷನ್ ಅವರಿಗೆ ದಕ್ಕುವುದಿಲ್ಲ. ಏಕೆಂದರೆ ರೇಷನ್ ಅಂಗಡಿಗಳು ತೆರೆಯುವುದು ತಿಂಗಳಲ್ಲಿ ವಾರ ಅಥವಾ ಮೂರು - ನಾಲ್ಕು ದಿನಗಳು ಮಾತ್ರ. ಅಷ್ಟು ಅವಧಿಯಲ್ಲಿ ಮಾತ್ರ ಬಡಜನತೆ ತಮ್ಮ ಪಾಲಿನ ರೇಷನ್ ಪಡೆಯಬೇಕು.

ಇನ್ನು ಕಷ್ಟ ಪಟ್ಟು ಖರೀದಿಸಿದ ಅಕ್ಕಿ ಗೋಧಿಯನ್ನು ಹಸನು ಮಾಡಲು ಕನಿಷ್ಠ ಐದು-ಆರು ತಾಸುಗಳು ಬೇಕು. 100-150 ಗ್ರಾಮದಷ್ಟು ಕಳಪೆ, ಕಸ ಬರುತ್ತದೆ.

1997ರಿಂದ ಈ ಹೊತ್ತಿನವರೆಗೆ ಅಕ್ಕಿ ಮತ್ತು ಗೋಧಿಯಲ್ಲಿ ಶೇ.61 ರಷ್ಟು ಮತ್ತು ಶೇ.66 ರಷ್ಟು ಪ್ರಮಾಣದಲ್ಲಿ ಬೆಲೆಯು ಹೆಚ್ಚಳ ಕಂಡಿದೆ. ಅಂದರೆ ಗೋಧಿಯ ಬೆಲೆಯು 2.70 ರೂ. ನಿಂದ 5.00 ರೂ.ಗೆ ಏರಿದೆ. ಅಕ್ಕಿ 3.00 ರಿಂದ 5.65 - 6.00ಕ್ಕೆ ಏರಿದೆ. 2 ರೂ.ಗೆ 1 ಕೆ.ಜಿ. ಅಕ್ಕಿ, 3 ರೂಗೆ ಕೆ.ಜಿ.ಯಂತೆ ಗೋಧಿ ಕೊಡಬೇಕೆಂದು ಈಗಲೂ ಜನತೆಯ ಒತ್ತಾಯವಿದೆ.

ರೇಷನ್ ಅಂಗಡಿಗಳಲ್ಲಿ ಬಡಜನತೆಯ ಜೀವನಕ್ಕೆ ಅವಶ್ಯಕವಿರುವ ವಸ್ತು ಮತ್ತು ಧಾನ್ಯಗಳನ್ನು ಕೊಡಬೇಕು ಎಂಬುದು ಬಹುದಿನಗಳ ಬೇಡಿಕೆ ಇದೆ. ಪಕ್ಕದ ಕೇರಳ ರಾಜ್ಯದಲ್ಲಿ ಶಿಕ್ಷಣ ಮತ್ತು ಆರೋಗ್ಯಕ್ಕೆ ಸಂಬಂಧಪಟ್ಟ ಮೂಲಾವಶ್ಯಕ ವಸ್ತುಗಳನ್ನು ಕಡಿಮೆ ದರದಲ್ಲಿ ಬಡವರಿಗೆ ವಿತರಿಸಲಾಗುತ್ತದೆ. ಆದರೆ ಕರ್ನಾಟಕದ ರೇಷನ್ ಅಂಗಡಿಗಳಲ್ಲಿ ಅಕ್ಕಿ, ಗೋಧಿ,ಸಕ್ಕರೆ, ಸೀಮೆ ಎಣ್ಣೆ ಮತ್ತು ಅಪರೂಪಕ್ಕೊಮ್ಮೆ ಸೀರೆಗಳು ಬಿಟ್ಟರೆ ಮತ್ತೇನು ಕಾಣಿಸದು.

ಜೀವನಕ್ಕೆ ಬೇಕಾದ ಕನಿಷ್ಠ ವಸ್ತುಗಳು :- ಅಕ್ಕಿ, ಗೋಧಿ, (ರಾಗಿ/ಜೋಳ) ಬೇಳೆ, ಸಕ್ಕರೆ, ಖಾರಾ, ಉಪ್ಪು, ಅಡಿಗೆ ಎಣ್ಣೆ, ಸೀಮೆ ಎಣ್ಣೆ, ಕೊಬ್ಬರಿ ಎಣ್ಣೆ, ಸಾಬೂನು, (ಸ್ನಾನದ ಮತ್ತು ಬಟ್ಟೆಯ ಸಾಬೂನು), ಬಟ್ಟೆ, ಓದುವ ಮಕ್ಕಳಿದ್ದರೆ ನೋಟಬುಕ್ಕು, ಪೆನ್ನು, ಪೆನ್ಸಿಲು.... ಮತ್ತು ಅವಶ್ಯಕತೆಯಾದಾಗ ಔಷಧ ಗುಳಿಗೆಗಳು.

ವ್ಯಕ್ತಿಯ ಬದುಕುವ ಹಕ್ಕಿಗಾಗಿ ಕನಿಷ್ಠ ಮೂಲಭೂತ ಸೌಲಭ್ಯಗಳನ್ನು ಚುನಾಯಿತ ಸರಕಾರವು ಒದಗಿಸಬೇಕೆಂದು ಸಂವಿಧಾನವು ಪ್ರತಿಪಾದಿಸುತ್ತದೆ. ಆದರೆ ಇಂದಿಗೂ ಈ ಮೂಲಭೂತ ಸೌಲಭ್ಯಗಳಿಂದ ವಂಚಿತರಾದ ಅಸಂಖ್ಯಾತ ಜನತೆಯು ದೇಶದಗಲಕ್ಕೂ ಕಾಣ ಸಿಗುತ್ತಾರೆ. ಯಾಕೆ ಸರಕಾರವು ಬಡ ಜನತೆಯು ಬದುಕುವ ಹಕ್ಕನ್ನು ರಕ್ಷಿಸುವುದಿಲ್ಲ.....?

ಏಕೆಂದರೆ, ಜಮೀನ್ದಾರಿ ಮೌಲ್ಯವುಳ್ಳ ಬಂಡವಾಳಶಾಹಿ ಪಕ್ಷಗಳಿಗೆ ಯಾವುದೆ ಕಾರಣಕ್ಕೂ ಬಡಜನತೆಯ ಕೈಗೆ ಕೆಲಸ ಮತ್ತು ಹೊಟ್ಟೆ ತುಂಬ ಅನ್ನ ಕೊಡುವ ಇಚ್ಛೆ ಇಲ್ಲ. ಅಸಮಾನ ವ್ಯವಸ್ಥೆಯ ಮೇಲೆಯೇ ಅದು ತನ್ನ ವೈಭೋಗದ, ಸ್ವಾರ್ಥ ಲಾಲಸೆಯ ಮತ್ತು ಸ್ವಹಿತದ ಪ್ರಭುತ್ವ ನಡೆಸಬೇಕೆನ್ನುತ್ತದೆ. ಕೆಲವೇ ಜನ ಉಳ್ಳವರ ಹಿತಕ್ಕಾಗಿ ಭೂಮಂಡಲದ ಸಂಪನ್ಮೂಲವೆಲ್ಲವನ್ನೂ ಲೂಟಿ ಮಾಡಲು ಅಧಿಕಾರವನ್ನು ಬಳಸಿಕೊಳ್ಳುತ್ತದೆ. ಅಮೇರಿಕಾ ಮತ್ತದರ ಏಳು ಮಿತ್ರ ದೇಶಗಳು ಇದೇ ನೀತಿ ಹೊಂದಿರುವುದರಿಂದಲೇ ಅವು ಐ.ಎಂ.ಎಫ್., ಡಬ್ಲ್ಯು.ಬಿ. ಮತ್ತು ವಿಶ್ವಸಂಸ್ಥೆಯ ಮೇಲೆ ತಮ್ಮ ಕಪಿಮುಷ್ಠಿ ಇಟ್ಟುಕೊಂಡು, ಭಾರತದಂತಹ ದೇಶಗಳನ್ನು ಲೂಟಿ ಮಾಡಲು ಸಜ್ಜಾಗಿವೆ. ಶರತ್ತಿನ ಮೇಲೆ ಸಾಲ ಕೊಟ್ಟು, ಬಡ್ಡಿ ಚಕ್ರಬಡ್ಡಿಯಲ್ಲಿ ನಮ್ಮ ಮೂಲಭೂತ ಹಕ್ಕುಗಳನ್ನು ಕಬಳಿಸುತ್ತಿದೆ.

ಈ ಕುತಂತ್ರವನ್ನು ಆತ್ಮೀಯವಾಗಿ ಎದೆಗೆ ಅಪ್ಪಿಕೊಂಡು ತನ್ಮೂಲಕ ತಮ್ಮ ಸ್ವಾರ್ಥದ ಮಟ್ಟೆಯನ್ನೂ ತುಂಬಿಕೊಳ್ಳಲು ಭಾರತದ ಕೇಂದ್ರ ಸರ್ಕಾರವು ಯೋಜನೆ ಹೊಂದಿರುವುದರಿಂದಲೇ ಹಿಂದಿನ ಎನ್.ಡಿ.ಎ. ಸರಕಾರವಂತೂ ಜನವಿರೋಧಿಯಾಗಿಯೇ ನಡೆದುಕೊಂಡಿತು. ಮಾತ್ರವಲ್ಲ ಜನರು ಅನ್ನದ, ಉದ್ಯೋಗದ ಪ್ರಶ್ನೆಯನ್ನು ಎತ್ತದಂತೆ 'ಕೋಮುಜ್ವಾಲೆ' ಹಬ್ಬಿಸಿ ಭಾವನಾತ್ಮಕ ಅಲೆಗಳನ್ನೆಬ್ಬಿಸಿ ದಿಕ್ಕುತಪ್ಪಿಸಲು ಹೆಣಗಿತು. ಗುಜರಾತನಂಥ ರಾಜ್ಯಗಳಲ್ಲಿ ಸರಕಾರವೇ ನರಸಂಹಾರಕ್ಕೆ ನಿಂತುಬಿಟ್ಟಿತು.

ಆದರೆ 'ಹಸಿವು' ಎನ್ನುವುದು ಅದರಲ್ಲೂ 'ಅನ್ನದ ಹಸಿವು' ಎನ್ನುವುದು ಯಾವ ಭ್ರಮೆಗಳ ಅಲೆಗೂ ಕೊಚ್ಚಿ ಹೋಗುವುದಲ್ಲ. ಹುಂಬ ಭಕ್ತಿಗೆ, ಡಾಂಭಿಕ ಆಚರಣೆಗಳಿಗೆ, ಧಾರ್ಮಿಕ ಅಫಿಮಿಗೆ ಬಗ್ಗಿ ಶಮನವಾಗುವುದಲ್ಲ. ಹಸಿದ ಹೊಟ್ಟೆಗೆ ಅನ್ನ ಬೇಕು. ಹಸಿವಿನ ಚೀಲ ತುಂಬಿಸದ ಯಾವುದೇ ಯೋಜನೆಗಳು ತೀರ್ಮಾನಗಳು ಸಾಧನೆಯ ಹಾದಿಯಲ್ಲಿ ಯಶಸ್ಸು ಪಡೆಯಲಾರವು.



ದಾಸ್ತಾನುಗಳಲ್ಲಿ ಆಹಾರ ಧಾನ್ಯ

ಕೋಮುವಾದದ ತ್ರಿಶೂಲವು ಜಾಗತೀಕರಣ, ಉದಾರೀಕರಣ ಖಾಸಗೀಕರಣಗಳೆಂಬ ಮೂರು ಮುಳ್ಳುಗಳನ್ನು ಹೊಂದಿದೆ. ಆ ತ್ರಿಶೂಲವು ಬಡವರ ಕರುಳು ಬಗೆದು ಅಟ್ಟಹಾಸಗೈಯ್ಯುವ ಹುನ್ನಾರ ಹೊಂದಿದೆ.

ಆದ್ದರಿಂದಲೇ ಚುನಾವಣೆಯಲ್ಲಿ ಎಡಪಕ್ಷಗಳು ಕೋಮುವಾದ ಮತ್ತು ಜನವಿರೋಧಿ ಆರ್ಥಿಕ ನೀತಿಗಳನ್ನು ಸೋಲಿಸಲು ಸೆಣಸಿದವು. ತತ್ಫಲವಾಗಿ ಇಂದು ಕೇಂದ್ರದಲ್ಲಿ ಯುಪಿಎ ಸರಕಾರ ರಚನೆಯಾಗಿದೆ. ಕೋಮುವಾದಿಗಳು ಒಳ ಪ್ರವೇಶಿಸದಂತೆ ಎಡ ಪಕ್ಷಗಳು ಸರ್ಕಾರಕ್ಕೆ ಹೊರಗಿನಿಂದ ಬೆಂಬಲಿಸಿವೆ. ಮಾತ್ರವಲ್ಲ ಸಾಮಾನ್ಯ ಕನಿಷ್ಠ ಕಾರ್ಯಕ್ರಮಗಳ ಪಟ್ಟಿಯಲ್ಲಿ ದುಡಿವ ವರ್ಗದ ಉದ್ಯೋಗ ಮತ್ತು ಅನ್ನದ ಅಜೆಂಡಾಗಳನ್ನು ಸೇರಿಸಿವೆ. (100 ದಿನಗಳ ಕೆಲಸದ ಗ್ಯಾರಂಟಿ ಮಸೂದೆಯು ಪಾರ್ಲಿಮೆಂಟಿನಲ್ಲಿ ಅಂಗೀಕಾರವಾಗಿವೆ.) ಯುಪಿಎ ಸರಕಾರವು ಪಿ.ಡಿ.ಎಸ್. ಬಲಪಡಿಸಲು ಭರವಸೆ ಕೊಟ್ಟಿದೆ. ಆದರೆ, ಪಿ.ಡಿ.ಎಸ್. ಸಾರ್ವತ್ರೀಕರಣಗೊಳಿಸಲು ಹಿಂದೇಟು ಹಾಕುತ್ತಿದೆ.

ಆದ್ದರಿಂದ ಸಿಪಿಐ(ಎಂ) ಪಕ್ಷವು ಆಹಾರ, ಭೂಮಿ, ಉದ್ಯೋಗಕ್ಕಾಗಿ ಹೋರಾಟ ರೂಪಿಸಿದೆ. ಕೇಂದ್ರ ಮತ್ತು ರಾಜ್ಯ ಸರಕಾರಗಳ ಆಹಾರ ನೀತಿಯನ್ನು ಜನಪರ ದಿಕ್ಕಿನತ್ತ ತರಲು ಒತ್ತಾಯಿಸಿದೆ. ಎಲ್ಲ ಬಡವರಿಗೂ ಕಡಿಮೆ ದರದಲ್ಲಿ ಆಹಾರ ಧಾನ್ಯ ಸಿಗಬೇಕೆಂಬ ಬೇಡಿಕೆ ಇಟ್ಟು ದೇಶಾದ್ಯಂತ ಚಳುವಳಿಗೆ ಕರೆ ಕೊಟ್ಟಿದೆ. ಬೇಡಿಕೆಗಳು : ರೇಷನ್ನಿನ ಸಾರ್ವತ್ರೀಕರಣವಾಗಬೇಕು. ಜೀವನಾವಶ್ಯಕ ವಸ್ತುಗಳು, (ಉತ್ತಮ ಗುಣಮಟ್ಟದ) ಸುಲಭವಾಗಿ ದೊರೆಯುವಂತಾಗಬೇಕು. 1993-94ರ ಕಾಲಕ್ಕೆ ಅವೈಜ್ಞಾನಿಕವಾಗಿ ತಯಾರಿಸಿದ ಬಿ.ಪಿ.ಎಲ್. ಪಟ್ಟಿಯನ್ನು ಕೈಬಿಟ್ಟು, ಎಲ್ಲ ಬಡವರನ್ನು ಪುನಃ ಬಿಪಿಎಲ್ ಪಟ್ಟಿಯಲ್ಲಿ ಸೇರಿಸಬೇಕು. ಮತ್ತು ಈ ಪಟ್ಟಿಯಾಧರಿಸಿ ಆಹಾರದಾಸ್ತಾನಿನ ಕೋಟಾ ಬಿಡುಗಡೆ ಮಾಡಬೇಕು. ವಾರ್ಷಿಕ ಆದಾಯ ಕನಿಷ್ಠ 25,000 ಇದ್ದಲ್ಲಿ ಅವರನ್ನು ಬಿಪಿಎಲ್ ಎಂದು ಪರಿಗಣಿಸಬೇಕು. ರಾಗಿ, ಜೋಳ, ತೊಗರಿಬೇಳೆಯನ್ನು ಸರಕಾರವೇ ಖರೀದಿಸಿ ಕಡಿಮೆ ದರದಲ್ಲಿ ರೇಷನ್ ಅಂಗಡಿ ಮೂಲಕ ವಿತರಿಸಬೇಕು. '100 ದಿನದ ಕೆಲಸದ ಗ್ಯಾರಂಟಿ' ಯೋಜನೆಯನ್ನು ದೇಶಾದ್ಯಂತ ವಿಸ್ತರಿಸಬೇಕು. ಕೂಲಿಗಾಗಿ ಕಾಳು ಯೋಜನೆಯನ್ನು ತಳಹಂತದವರೆಗೂ ತಲುಪಿಸಬೇಕು ಮತ್ತು ಉತ್ತಮ ಗುಣಮಟ್ಟದ ಕಾಳು ಕೊಡಬೇಕು. "ಹೆಬ್ಬಾಗಿಲಿಗೊಂದು ಕಾರ್ಡು" ಎಂಬ ನೀತಿ ಕೈಬಿಡಬೇಕು. ಕುಟುಂಬಕ್ಕೊಂದು ಹಳದಿ ಕಾರ್ಡು ಕೊಡಬೇಕು. ವಿಧವೆ, ಪರಿತ್ಯಕ್ತ, ವಿಕಲಾಂಗರು, ವೃದ್ಧ ಏಕಾಂಗಿಗಳು ಇವರಿಗೆಲ್ಲ ಯಾವ ಶರತ್ತುಗಳಿಲ್ಲದೆ ನೇರವಾಗಿ ಬಿ.ಪಿ.ಎಲ್. ಕಾರ್ಡುಕೊಡಬೇಕು. ಬಿಡುವಿನ ಸಮಯಕ್ಕನುಸರಿಸಿ ತೆರೆದಿರಬೇಕು. ಬಡಜನತೆಯು ತಮ್ಮ ಕೈಯಲ್ಲಿದ್ದ ಹಣಕ್ಕನುಸರಿಸಿ ರೇಷನನ್ನು ಕಂತು ಕಂತಾಗಿ ಒಯ್ಯಲು ಆಸ್ಪದವಿರಬೇಕು.

ಮತ್ತು ಮುಂದೊಮ್ಮೆ ಸಾರ್ವಜನಿಕ ವಿತರಣಾ ವ್ಯವಸ್ಥೆಯನ್ನು ಸಾರ್ವತ್ರೀಕರಣಗೊಳಿಸುವ ಮೂಲಕ ಸರಕಾರಗಳು ಕೊಂಚವಾದರೂ ಪ್ರಜಾಪ್ರಭುತ್ವ ಮೌಲ್ಯಗಳಿಗೆ ಗೌರವಿಸಿದಂತಾದಾತು. ಈ ದಿಕ್ಕಿನತ್ತ ಕ್ರಮ ಕೈಗೊಳ್ಳದಿದ್ದರೆ ಹಸಿದ ಒಡಲ ಕಿಡಿ ಉರಿಯಾಗಿ ಪಸರಿಸುವ ಕಾಲ ದೂರವಿಲ್ಲವಾಗುತ್ತದೆ.

ಆರೋಗ್ಯ ಕೇಂದ್ರದ ಖಾಸಗೀಕರಣ ವಿರುದ್ಧ ಪ್ರತಿಭಟನೆ

ಮಂಗಳೂರಿನ ಕುಪ್ಪೆ ಪದವು ಸರಕಾರಿ ಆರೋಗ್ಯ ಕೇಂದ್ರವನ್ನು ಖಾಸಗಿ ಸಂಸ್ಥೆಯಾದ ಕೆ.ಎಂ.ಸಿ.ಯವರಿಗೆ ಹಸ್ತಾಂತರಿಸಲು ಕುಪ್ಪೆ ಪದವ ಗ್ರಾಮ ಪಂಚಾಯತ್‌ನ ಸಾಮಾನ್ಯ ಸಭೆಯಲ್ಲಿ ನಿರ್ಣಯ ಅಂಗೀಕರಿಸುವುದರ ವಿರುದ್ಧ ಸಿಪಿಐ(ಎಂ) ನೇತೃತ್ವದಲ್ಲಿ ಆಗಸ್ಟ್ 1 ರಂದು ಪಂಚಾಯತ್ ಕಛೇರಿ ಮುಂದೆ ಪ್ರತಿಭಟನೆ ನಡೆಸಲಾಯಿತು. ಈ ಪ್ರತಿಭಟನಾಕಾರರನ್ನು ಉದ್ದೇಶಿಸಿ ಸಿಪಿಐಎಂ ಜಿಲ್ಲಾ ಕಾರ್ಯದರ್ಶಿ ಮಂಡಳಿ ಸದಸ್ಯರಾದ ಯಚ್ಚಿ.ಲೋಕಯ್ಯ ನವರು ಮಾತನಾಡುತ್ತಾ ಸರಕಾರಿ ಆರೋಗ್ಯ ಕೇಂದ್ರವನ್ನು ಕೆ.ಎಂ.ಸಿ.ಯವರಿಗೆ ವರ್ಗಾಯಿಸಲು ತೆಗೆದುಕೊಂಡ ಪಂಚಾಯತ್‌ನವರ ನಿರ್ಣಯವು ತೀವ್ರ ಬೇಜವಾಬ್ದಾರಿತನದ್ದು. ಈ ಪಂಚಾಯತ್‌ನಲ್ಲಿ 3 ಪಕ್ಷಗಳ 18 ಸದಸ್ಯರು ಇದ್ದರೂ ಯಾರೊಬ್ಬರೂ ಈ ನಿರ್ಣಯವನ್ನು ವಿರೋಧಿಸದಿರುವುದು ದುರದೃಷ್ಟಕರ. ಕೆ.ಎಂ.ಸಿ.ಯಿಂದ ಸಾಮಾನ್ಯ ಬಡಜನರಿಗೆ ಯಾವುದೇ ಸಹಕಾರ ಆಗದು. ಕೆ.ಎಂ.ಸಿ. ಮಾತ್ರ ಉದ್ಧಾರವಾಗಬಹುದು. ಸಾಮಾನ್ಯ ಜನರಿಗೆ ಪ್ರಯೋಜನವಾಗಬೇಕಾದರೆ ಈ ಆರೋಗ್ಯ ಕೇಂದ್ರವನ್ನು ಸರಕಾರಿ ಆರೋಗ್ಯ ಕೇಂದ್ರವಾಗಿ ಉಳಿಸಿ ಇದನ್ನು ಸಾಮುದಾಯ ಆರೋಗ್ಯ ಕೇಂದ್ರವಾಗಿ ಪರಿವರ್ತಿಸಿ ಈ ಪ್ರದೇಶದ ನಾಗರೀಕರಿಗೆ ಇನ್ನಷ್ಟು ಹೆಚ್ಚಿನ ಸೌಲಭ್ಯವನ್ನು ಒದಗಿಸಿ ಎಂಬ ನಿರ್ಣಯವನ್ನು ನಿಮ್ಮ ಪಂಚಾಯತ್‌ನ ಸಭೆಯಲ್ಲಿ ಅಂಗೀಕರಿಸಿ ಒತ್ತಾಯಿಸಿ ನಿಮ್ಮ ಈಗಿನ ನಿರ್ಣಯವನ್ನು ಹಿಂತೆಗೆದುಕೊಳ್ಳದಿದ್ದಲ್ಲಿ ಮುಂದಿನ ದಿನಗಳಲ್ಲಿ ಸಾರ್ವಜನಿಕರ ಸಹಕಾರದೊಂದಿಗೆ ತೀವ್ರತರದ ಹೋರಾಟ ನಡೆಸುವುದು ಅನಿವಾರ್ಯವಾಗಿದೆ ಎಂದರು. ಇನ್ನೋರ್ವ ಕಾರ್ಯದರ್ಶಿ ಮಂಡಳಿ ಸದಸ್ಯರಾದ ಕಾಂ. ವಸಂತ ಆಚಾರಿ ಮಾತನಾಡುತ್ತಾ ಈ ಆರೋಗ್ಯ ಕೇಂದ್ರವು ಕುಪ್ಪೆ ಪದವಿನಲ್ಲಿ ಸ್ಥಾಪನೆಯಾಗಬೇಕಾದರೆ ಜನರ ಹೋರಾಟವೇ ಕಾರಣ. ಹಾಗೂ 18 ತಿಂಗಳು ಈ ಆಸ್ಪತ್ರೆಯಲ್ಲಿ ವೈದ್ಯರು ಇಲ್ಲದ ಸಂದರ್ಭದಲ್ಲಿ ಈ ಊರಿನ ನಾಗರೀಕರ ಸಹಕಾರದೊಂದಿಗೆ ತೀವ್ರ ತರದ ಹೋರಾಟ ನಡೆಸಿ ಜನಸಾಮಾನ್ಯರಿಗೆ ದೊರೆತ ಸೌಲಭ್ಯ ಇದು. ಇದೇನೂ ನಮ್ಮ ಪಂಚಾಯತ್‌ನ ಕೊಡುಗೆಯಲ್ಲ. ಕೆ.ಎಂ.ಸಿ.ಗೆ ಹಸ್ತಾಂತರಿಸಲು ತೆಗೆದುಕೊಂಡ ನಿರ್ಣಯವನ್ನು ಹಿಂತೆಗೆದುಕೊಳ್ಳದಿದ್ದಲ್ಲಿ ತೀವ್ರ ತರದ ಹೋರಾಟ ನಡೆಸಿ ಈ ಆರೋಗ್ಯ ಕೇಂದ್ರವನ್ನು ರಕ್ಷಿಸುವುದು ನಮ್ಮೆಲ್ಲರ ಕರ್ತವ್ಯವಾಗಿದೆ ಎಂದರು. ಸಿಪಿಐ(ಎಂ) ಜಿಲ್ಲಾ ಸಮಿತಿ ಸದಸ್ಯರಾದ ಕೆ.ಸದಾಶಿವದಾಸ್ ಮಾತನಾಡುತ್ತಾ ಗ್ರಾಮದ ಗ್ರಾಮಸಭೆಗಳಲ್ಲಿ ಈ ನಿರ್ಣಯಕ್ಕೆ ತೀವ್ರ ವಿರೋಧ ವ್ಯಕ್ತವಾದರೂ ಪಂಚಾಯತ್‌ನ ಸಾಮಾನ್ಯ ಸಭೆಯಲ್ಲಿ ಕೆ.ಎಂ.ಸಿ.ಯವರಿಗೆ ಹಸ್ತಾಂತರಿಸುವ ನಿರ್ಣಯ ಕೈಗೊಂಡಿರುವುದು ಯಾವ ನ್ಯಾಯ. ನೀವು ಯಾರ ಪರವಾಗಿದ್ದೀರಿ ಎಂದು ಇದರಲ್ಲಿ ಸ್ಪಷ್ಟವಾಗುತ್ತಿದೆ. ಈ ನಿರ್ಣಯವನ್ನು ಕೂಡಲೇ ಹಿಂತೆಗೆಯದಿದ್ದಲ್ಲಿ ಮುಂದಿನ ದಿನಗಳಲ್ಲಿ ನಡೆಯುವ ಹೋರಾಟಕ್ಕೆ ನೀವೇ ಜವಾಬ್ದಾರರಾಗಿರುತ್ತೀರಿ ಎಂದರು.

ಪ್ರತಿಭಟನೆಯ ನೇತೃತ್ವವನ್ನು ನೋಣಯ್ಯ ಗೌಡ, ಸುಂದರ ನಾಯ್ಕ, ವಾರಿಜ, ಬೇಬಿ ನಾಯ್ಕ, ನಳಿನಾಕ್ಷಿ, ವಸಂತಿ, ವೇದಾವತಿಯವರು ವಹಿಸಿದ್ದರು. ಪ್ರಾರಂಭದಲ್ಲಿ ಭಾಸ್ಕರ ಆಚಾರಿಯವರು ಸ್ವಾಗತಿಸಿ ಪ್ರಸ್ತಾವಿಕವಾಗಿ ಮಾತನಾಡಿದರು. ಕೊನೆಯಲ್ಲಿ ಎನ್.ಎ.ಹಸನಬ್ಬನವರು ವಂದಿಸಿದರು.

ಕೆ.ಸದಾಶಿವದಾಸ್.

ವೃತ್ತಿ ಶಿಕ್ಷಣ ಬಿಕ್ಕಟ್ಟು : ಶೈಕ್ಷಣಿಕ ಸಮಸ್ಯೆಗಳ ವಿರುದ್ಧ ವ್ಯಾಪಕ ಪ್ರತಿಭಟನೆ

ಭಾರತ ವಿದ್ಯಾರ್ಥಿ ಫೆಡರೇಷನ್ (ಎಸ್.ಎಫ್.ಐ.) ಕರ್ನಾಟಕ ರಾಜ್ಯ ಸಮಿತಿಯು ಪ್ರಸಕ್ತ ವೃತ್ತಿ ಶಿಕ್ಷಣ ಬಿಕ್ಕಟ್ಟನ್ನು ಶಾಶ್ವತವಾಗಿ ಬಗೆಹರಿಸಲು, ಖಾಸಗಿ ವೃತ್ತಿಶಿಕ್ಷಣ ಸಂಸ್ಥೆಗಳನ್ನು ನಿಯಂತ್ರಿಸಲು ರಾಜ್ಯ ಸರ್ಕಾರಗಳಿಗೆ ಅಧಿಕಾರ ನೀಡುವಂತಹ ಕೇಂದ್ರೀಯ ಶಾಸನ ಜಾರಿಗೆ ತರಲು ಒತ್ತಾಯಿಸಿ, ಸರ್ಕಾರಿ ಶಾಲಾ-ಕಾಲೇಜುಗಳಲ್ಲಿನ ಮೂಲಭೂತ ಸೌಕರ್ಯಗಳಿಗೆ ಆಗ್ರಹಿಸಿ ಹಾಗೂ ಶಿಕ್ಷಣ ಕ್ಷೇತ್ರಕ್ಕೆ ಬಜೆಟ್‌ನಲ್ಲಿ ಹೆಚ್ಚು ಹಣ ಒದಗಿಸಲು ಒತ್ತಾಯಿಸಿ ರಾಜ್ಯಾದ್ಯಂತ ಹೋರಾಟಕ್ಕೆ ಕರೆಕೊಟ್ಟಿತ್ತು. ಶಾಲಾ-ಕಾಲೇಜ್ ಬಂದ್-ಪ್ರತಿಭಟನೆ ಅತ್ಯಂತ ಯಶಸ್ವಿಯಾಗಿ ನಡೆದಿದೆ. ಲಕ್ಷಾಂತರ ಸಂಖ್ಯೆಯಲ್ಲಿ ಶಾಲಾ-ಕಾಲೇಜಿನ ವಿದ್ಯಾರ್ಥಿಗಳು ತರಗತಿಗಳು ಬಹಿಷ್ಕರಿಸಿ ಶೈಕ್ಷಣಿಕ ಬಿಕ್ಕಟ್ಟಿನ ಬಗ್ಗೆ ಆಕ್ರೋಶ ವ್ಯಕ್ತಪಡಿಸಿದ್ದಾರೆ.

ಜಾಗತೀಕರಣದ ಪ್ರಭಾವಕ್ಕೆ ಒಳಗಾಗಿ, ವಿಶ್ವಬ್ಯಾಂಕ್, ಡಬ್ಲ್ಯು.ಟಿ.ಒ. ಷರತ್ತಿಗೆ ಒಳಗಾಗಿ ಶಿಕ್ಷಣ ಕ್ಷೇತ್ರವನ್ನು ಖಾಸಗಿ ಒಡೆತನಕ್ಕೆ ಬಿಟ್ಟುಕೊಟ್ಟಿರುವುದೇ ಇಂದಿನ ಬಿಕ್ಕಟ್ಟಿಗೆ ಕಾರಣವೆಂಬುದನ್ನು ಕೇಂದ್ರ - ರಾಜ್ಯ ಸರ್ಕಾರಗಳು ಮರೆಮಾಚುತ್ತಿವೆ. ಸಮಾಜದ ಅಗತ್ಯಕ್ಕೆ ತಕ್ಕಂತೆ ಎಲ್ಲ ಹಂತದಲ್ಲಿ ಸರ್ಕಾರಿ - ಶಾಲಾ - ಕಾಲೇಜುಗಳನ್ನು ಪ್ರಾರಂಭಿಸದೇ ಖಾಸಗಿ ಶಿಕ್ಷಣ ಸಂಸ್ಥೆಗಳಿಗೆ ಉತ್ತೇಜನ ನೀಡುತ್ತಾ ಬಂದದ್ದು ಇಂದಿನ ಗಂಭೀರ ಶೈಕ್ಷಣಿಕ ಬಿಕ್ಕಟ್ಟಿಗೆ ಕಾರಣವಾಗಿದೆ. ಶೇ.75ಕ್ಕಿಂತ ಹೆಚ್ಚಿರುವ ಗ್ರಾಮೀಣ ಪ್ರದೇಶದ ಹಾಗೂ ಸಾಮಾಜಿಕವಾಗಿ - ಆರ್ಥಿಕವಾಗಿ ಹಿಂದುಳಿದಿರುವ ಬಹುತೇಕ ಜನತೆಗೆ ವೃತ್ತಿ ಶಿಕ್ಷಣವಿರಲಿ, ಸಾಮಾನ್ಯ ಶಿಕ್ಷಣವನ್ನು ನಿರಾಕರಿಸುವ ನೀತಿಗಳು ನಿರಂತರವಾಗಿ ಬರುತ್ತಿವೆ. ದೇಶದ ಸಮಗ್ರ ಅಭಿವೃದ್ಧಿಗೆ ಪೂರಕವಾಗಿ ಸಮಾಜದ ಎಲ್ಲಾ ವರ್ಗದ ಜನರಿಗೆ ಸಿಗಬೇಕಾದ ಶಿಕ್ಷಣ ಶ್ರೀಮಂತರ, ಖಾಸಗಿಯವರ ಸ್ವತ್ತಾಗಿರುವುದರ ಪರಿಣಾಮಗಳು ಭೀಕರವಾಗಿವೆ. ಇಂಥ ಬಹುಜನ ವಿರೋಧಿ, ಬಡ ವಿದ್ಯಾರ್ಥಿಗಳ ವಿರೋಧಿ ನೀತಿಗಳನ್ನು ಖಂಡಿಸಿ ಪ್ರಗತಿಪರ, ವೈಜ್ಞಾನಿಕ, ಆಶಯಗಳೊಳಗೊಂಡ ಎಸ್ಸೆಫ್ಐ ಸಂಘಟನೆ ಶೈಕ್ಷಣಿಕ ಸಮಸ್ಯೆಗಳ ಪರಿಹಾರಕ್ಕಾಗಿ ಶಾಲಾ-ಕಾಲೇಜ್ ಬಂದ್ ಮೂಲಕ ಪ್ರತಿಭಟನೆ ನಡೆಸಿತು. ಸಿದ್ಧತೆಯ ಹಂತದಲ್ಲಿ ರಾಜ್ಯಾದ್ಯಂತ ಸರ್ಕಾರದ ಪೋಲೀಸರು ಎಸ್ಸೆಫ್ಐ ಮುಖಂಡರನ್ನು ಬೆದರಿಸಿದ್ದಾರೆ. ಹಲವರನ್ನು ಬಂಧಿಸಿದ್ದಾರೆ. ರಾಜ್ಯ ಸರ್ಕಾರದ ಹಾಗೂ ಪೋಲೀಸರ ಗೊಡ್ಡು ಬೆದರಿಕೆಗೆ ಜಗ್ಗದ ವಿದ್ಯಾರ್ಥಿ ಸಮುದಾಯ ಸರ್ಕಾರದ ವಂಚನೆಯನ್ನು ಖಂಡಿಸಿ ತಮ್ಮ ಹಕ್ಕುಗಳಿಗಾಗಿ ಇದೇ ಆಗಸ್ಟ್ 25 ರಂದು ರಾಜ್ಯಾದ್ಯಂತ ತರಗತಿ ಬಹಿಷ್ಕರಿಸಿ ಪ್ರತಿಭಟನೆಗೆ ತೊಡಗಿಸಿಕೊಂಡಿದ್ದು ಖಾಸಗಿ ಶಿಕ್ಷಣ ಸಂಸ್ಥೆಗಳಿಗೆ, ರಾಜ್ಯ ಕೇಂದ್ರ ಸರ್ಕಾರದ ವಿದ್ಯಾರ್ಥಿ ವಿರೋಧಿ ನೀತಿಗೆ ಒಂದು ಎಚ್ಚರಿಕೆಯಾಗಿದೆ.

ಎಸ್ಸೆಫ್ಐನ ಹೋರಾಟಕ್ಕೆ ಲಕ್ಷಾಂತರ ವಿದ್ಯಾರ್ಥಿಗಳಲ್ಲದೆ ಪೋಷಕರು, ಅಧ್ಯಾಪಕ ವರ್ಗ, ಭಾರತ ಪ್ರಜಾಸತ್ತಾತ್ಮಕ ಯುವಜನ ಫೆಡರೇಷನ್(ಡಿವೈಎಫ್ಐ) ಕರ್ನಾಟಕ ಪ್ರಾಂತ ರೈತ ಸಂಘ(ಕೆ.ಪಿ.ಆರ್.ಎಸ್.) ಜನವಾದಿ ಮಹಿಳಾ ಸಂಘಟನೆ ಬೆಂಬಲ ಸೂಚಿಸಿದ್ದವು. ಶೈಕ್ಷಣಿಕ ಸಮಸ್ಯೆಗಳಿಗೆ ಮೂಲ ಕಾರಣವನ್ನು ವಿದ್ಯಾರ್ಥಿ ಸಮುದಾಯ ವಿವರಿಸಿದಾಗ ಎಸ್ಸೆಫ್ಐ ಸಂಘಟನೆ ಜೊತೆಗೆ ಲಕ್ಷಾಂತರ ವಿದ್ಯಾರ್ಥಿ ಸಮುದಾಯ ರಾಜ್ಯಾದ್ಯಂತ ಗುರುತಿಸಿಕೊಂಡು ಎಸ್ಸೆಫ್ಐನ ನೇತೃತ್ವದಲ್ಲಿ ಹೋರಾಟದ ಹೊಸ ಛಾಪನ್ನು ಮೂಡಿಸಿದ್ದಾರೆ. ವಿದ್ಯಾರ್ಥಿ ವಿರೋಧಿ - ಸಮಾಜದ ವಿರೋಧಿ ನೀತಿಗಳ ವಿರುದ್ಧ ಬೀದಿಗಿಳಿದು ಹೋರಾಡುತ್ತೇವೆಂಬ ಸೂಚನೆಯನ್ನು ನೀಡಿದ್ದಾರೆ. ರಾಜ್ಯಾದ್ಯಂತ ನಡೆದ ಪ್ರತಿಭಟನೆ ಹಿನ್ನೆಲೆಯಲ್ಲಿ ರಾಜ್ಯ ಸರ್ಕಾರ ತನ್ನ ತಪ್ಪಿನಿಂದ ಪೇಚಿಕೆ ಸಿಕ್ಕಿ ಕೊಂಡಿದ್ದನ್ನು ಗಮನಿಸ ಬಹುದಾಗಿದೆ.

ಶಿಕ್ಷಣ ಸಚಿವರ ಭೇಟಿಯಾದ ಎಸ್.ಎಫ್.ಐ. ನಿಯೋಗ

ವೃತ್ತಿ ಶಿಕ್ಷಣ ಬಿಕ್ಕಟ್ಟು ಹಾಗೂ ರಾಜ್ಯಾದ್ಯಂತ ಉಲ್ಬಣಿಸಿರುವ ಶೈಕ್ಷಣಿಕ ಸಮಸ್ಯೆಗಳ ಬಗ್ಗೆ ಸಚಿವರ ಗಮನಕ್ಕೆ ತಂದಾಗ ಉದಾಸೀನ'ದ' ಮಾತಾಡಿದ್ದನ್ನು ಸಹಿಸದ ವಿವಿಧ ಕಾಲೇಜುಗಳನ್ನು ಪ್ರತಿನಿಧಿಸಿದ ವಿದ್ಯಾರ್ಥಿಗಳು, ಎಸ್.ಎಫ್.ಐ. ರಾಜ್ಯ ಮುಖಂಡರು ಮಾತಿನ ಮುಖಾಂತರ ತಿರುಗೇಟು ನೀಡಿದರು. ಬಹುತೇಕ ಸರ್ಕಾರಿ ಶಾಲಾ-ಕಾಲೇಜುಗಳಲ್ಲಿ ಉಪನ್ಯಾಸಕರ ಕೊರತೆಯಿಂದ ತರಗತಿಗಳು ನಡೆಯುತ್ತಿಲ್ಲವೆಂದು ಗಮನಸೆಳೆದಾಗ ಸಮಸ್ಯೆಗಳನ್ನು ಬಗೆಹರಿಸುವಲ್ಲಿ ವಿಫಲವಾಗಿರುವುದನ್ನು ಒಪ್ಪಿಕೊಂಡರು. ಮುಖಂಡರ ಒತ್ತಾಯಕ್ಕೆ ಮಣಿದು ಆದಷ್ಟು ಬೇಗ ಉಪನ್ಯಾಸಕರ ಕೊರತೆ ಸರಿಮಾಡಿಸುತ್ತೇವೆ, ಜೊತೆಗೆ ಸದ್ಯದಲ್ಲೇ ಇನ್ನಿತರ ಸಮಸ್ಯೆಗಳನ್ನು ಪರಿಹರಿಸಿ ಮಾತುಕತೆಗೆ ಆಹ್ವಾನಿಸುತ್ತೇವೆಂದು ಭರವಸೆ ಕೊಟ್ಟರು. ವೃತ್ತಿ ಶಿಕ್ಷಣ ಬಿಕ್ಕಟ್ಟಿಗೆ ಸಂಬಂಧಪಟ್ಟಂತೆ ಕೇಂದ್ರೀಯ ಶಾಸನಕ್ಕೆ ಒತ್ತಾಯಿಸುತ್ತೇವೆ. ಅಲ್ಲದೆ ಸರ್ಕಾರಿ ವೈದ್ಯಕೀಯ ಕಾಲೇಜುಗಳನ್ನು ಪ್ರಾರಂಭಿಸಲು ಪ್ರಯತ್ನ ಫಲಪ್ರದವಾಗಿ ನಡೆಯುವಂತೆ ನೋಡಿಕೊಳ್ಳುತ್ತೇವೆಂದರು.



ಬೆಂಗಳೂರಿನ ಮಲ್ಲೇಶ್ವರಂ ಮೈದಾನದಲ್ಲಿ ಪ್ರತಿಭಟನೆಯಲ್ಲಿ ಭಾಗವಹಿಸಿದ ವಿದ್ಯಾರ್ಥಿನಿಯರು

ಎಸ್.ಎಫ್.ಐ.ನ ಸ್ಪಷ್ಟ ನಿಲುವು : ಬೇಡಿಕೆಗಳು

ಸಚಿವರಿಗೆ ಮನವಿ ಸಲ್ಲಿಸುವಾಗ ಇಡೀ ರಾಜ್ಯದ ವಿದ್ಯಾರ್ಥಿ ಸಮುದಾಯದ ಪರವಾಗಿ ನಿಮ್ಮ ಗಮನಕ್ಕೆ ಶೈಕ್ಷಣಿಕ ಸಮಸ್ಯೆಗಳ ಪರಿಹಾರಕ್ಕೆ ಈ ಕೆಳಗಿನ ಬೇಡಿಕೆಗಳ ಆಧಾರದಲ್ಲಿ ಬಗೆಹರಿಸಬೇಕೆಂದು ಒತ್ತಾಯಿಸಲಾಗಿತ್ತು. ಇಲ್ಲವಾದಲ್ಲಿ ಮುಂದಿನ ದಿನಗಳಲ್ಲಿ ಉಗ್ರ ಹೋರಾಟ ನಡೆಸಬೇಕಾದೀತೆಂದು ಎಸ್.ಎಫ್.ಐ. ನಿಯೋಗ ಶಿಕ್ಷಣ ಸಚಿವರಿಗೆ ಎಚ್ಚರಿಸಿತು.

ಬೇಡಿಕೆಗಳು

- ವೃತ್ತಿ ಶಿಕ್ಷಣ ಬಿಕ್ಕಟ್ಟಿನ ಶಾಶ್ವತ ಪರಿಹಾರಕ್ಕಾಗಿ ರಾಜ್ಯ ಸರ್ಕಾರಕ್ಕೆ ಅಧಿಕಾರ ನೀಡುವಂತೆ ಕೇಂದ್ರೀಯ ಶಾಸನ ಜಾರಿಗೆ ತರಬೇಕು.
- ಪ್ರತಿ ಜಿಲ್ಲೆಯಲ್ಲೊಂದು ಸರ್ಕಾರಿ ವೈದ್ಯಕೀಯ - ತಾಂತ್ರಿಕ ಕಾಲೇಜುಗಳನ್ನು ಆರಂಭಿಸಬೇಕು.
- ಶಿಕ್ಷಣ ಕ್ಷೇತ್ರಕ್ಕೆ ಅಗತ್ಯವಾಗಿ ಕೇಂದ್ರ ಬಜೆಟ್‌ನ ಶೇ.10ರಷ್ಟು ರಾಜ್ಯ ಬಜೆಟ್ ಶೇ.30ರಷ್ಟು ಹಣವನ್ನು ಮೀಸಲಿಡಬೇಕು.
- ಅಗತ್ಯ ರೀತಿಯಲ್ಲಿ ಎಲ್ಲಾ ಹಂತದ ಸರ್ಕಾರಿ ಶಾಲಾ-ಕಾಲೇಜುಗಳನ್ನು ತೆರೆಯಬೇಕು ಹಾಗೂ ಅಗತ್ಯ ಮೂಲಭೂತ ಸೌಕರ್ಯಗಳನ್ನು ಒದಗಿಸಬೇಕು.
- ರಾಜ್ಯದ ವಿ.ವಿ.ಗಳಲ್ಲಿ ಎಲ್ಲ ಹಂತದ ಸಮಸ್ಯೆಗಳನ್ನು ಬಗೆಹರಿಸಬೇಕು.

● ಬಿ.ರಾಜಶೇಖರಮೂರ್ತಿ


ವೃತ್ತಿ ಶಿಕ್ಷಣ ಬಿಕ್ಕಟ್ಟಿಗೆ ಶಾಶ್ವತ ಪರಿಹಾರ - ಶಿಕ್ಷಣಕ್ಕೆ ಹೆಚ್ಚು ಬಜೆಟ್ - ಮೂಲಭೂತ ಸೌಕರ್ಯಗಳ ಕೊರತೆ ನಿವಾರಣೆಗಳಂತಹ ವಿದ್ಯಾರ್ಥಿಗಳ ಜ್ವಲಂತ ಸಮಸ್ಯೆಗಳ ವಿರುದ್ಧ ಎಸ್ಸೆಫ್ಐ ರಾಜ್ಯಸಮಿತಿ ಕರೆ ನೀಡಿದ ಆಗಸ್ಟ್ 25 ರ ರಾಜ್ಯವ್ಯಾಪಿ ಶೈಕ್ಷಣಿಕ ಬಂದ್ ವಿದ್ಯಾರ್ಥಿ-ಪೋಷಕ ಸಮುದಾಯದಿಂದ ಅಮೋಘ ಪ್ರತಿಕ್ರಿಯೆ ವ್ಯಕ್ತವಾಗಿದೆ. ವ್ಯಾಪಕ ಯಶಸ್ಸು ಕಂಡ ಈ ಹೋರಾಟದ ವರದಿ ಇಲ್ಲಿದೆ

ಎಸ್.ಎಫ್.ಐ. ನಿಂದ ರಾಜ್ಯಾದ್ಯಂತ ಯಶಸ್ವೀ ಶಾಲಾ-ಕಾಲೇಜ್ ಬಂದ್

ವಿದ್ಯಾರ್ಥಿ ಸಮುದಾಯವನ್ನು ಕಾಡುತ್ತಿರುವ ಸಮಸ್ಯೆಗಳನ್ನು ಬಗೆಹರಿಸಲು ಆಗ್ರಹಿಸಿ ಆಗಸ್ಟ್ 25 ರಂದು ಎಸ್.ಎಫ್.ಐ. ನ ರಾಜ್ಯ ಸಮಿತಿ ರಾಜ್ಯವ್ಯಾಪಿ ಸಭೆಯ ನಂತರ ಎಲ್ಲಾ ಜಿಲ್ಲಾ/ತಾಲ್ಲೂಕು ಕೇಂದ್ರಗಳಲ್ಲಿ ಸಮರೋಪಾದಿಯಲ್ಲಿ ಪ್ರಾರಂಭವಾದ ತಯಾರಿಗಳು ಆಗಸ್ಟ್ 25ರ ವರೆಗೆ ನಿರಂತರವಾಗಿ ನಡೆದಿವೆ. ಈ ಮಧ್ಯದಲ್ಲಿ ಆಗಸ್ಟ್ 12 ರಂದು ವೃತ್ತಿಶಿಕ್ಷಣ ಬಿಕ್ಕಟ್ಟಿಗೆ ಸಂಬಂಧಪಟ್ಟಂತೆ ಸಾಮಾಜಿಕ ನ್ಯಾಯವನ್ನು ಕಡೆಗಣಿಸುವಂತಹ ತೀರ್ಪು ಸುಪ್ರೀಂ ಕೋರ್ಟ್‌ನಿಂದ ಬಂದ ಮೇಲೆ ತೀರ್ಪಿನ ಬಗ್ಗೆ ಇದ್ದ ಅಸಮಧಾನ ವಿದ್ಯಾರ್ಥಿ ಸಮೂಹದಲ್ಲಿ ಇನ್ನೊಂದಷ್ಟು ಮಿಂಚಿನ ಸಂಚಲನವನ್ನುಂಟು ಮಾಡಿತು. ಅಂದು ರಾಜ್ಯಾದ್ಯಂತ ಕೆಲ ಶಾಲಾ - ಕಾಲೇಜುಗಳು ಸ್ವಯಂ ಪ್ರೇರಣೆಯಿಂದ ರಜೆಗಳನ್ನು ಘೋಷಿಸಿದ್ದರು. ಜೊತೆಗೆ ಎಸ್.ಎಫ್.ಐ.ನ ಕಾರ್ಯಕರ್ತರು ನಡೆಸಿದ ವ್ಯಾಪಕ ಪ್ರಚಾರ, ಗೋಡೆಬರಹ, ಪತ್ರಿಕಾ ಗೋಷ್ಠಿಗಳು ಸಾವಿರಗಟ್ಟಲೆ ಕರಪತ್ರಗಳು, ಪೋಸ್ಟರ್‌ಗಳು, ವಿದ್ಯಾರ್ಥಿಗಳ ಸಭೆಗಳು, ಆಟೋ ಪ್ರಚಾರ ಈ ರೀತಿಯ ಬಗೆಬಗೆಯ ಪ್ರಚಾರಗಳಿಂದ ಇಡೀ ರಾಜ್ಯಾದ್ಯಂತ, ಮುಖ್ಯವಾಗಿ ಶೈಕ್ಷಣಿಕ ಕ್ಷೇತ್ರದಲ್ಲಿ ವಿದ್ಯಾರ್ಥಿಗಳು, ಪೋಷಕರು, ಉಪನ್ಯಾಸಕರು, ಅಧಿಕಾರಿಗಳು ಮಾತ್ರವಲ್ಲ ಜನರ ನಡುವೆ ವ್ಯಾಪಕವಾಗಿ ಈ ವಿಚಾರಗಳು ಚರ್ಚಿಯಾಗಿವೆ.

ಬೆಂಗಳೂರು : ಬೆಂಗಳೂರು ಶೈಕ್ಷಣಿಕ ಸಂಸ್ಥೆಗಳ ಸಾಗರವಿದ್ದಂತೆ. ಈ ಸಾಗರದಲ್ಲಿ ಈಜಲು ಎಸ್.ಎಫ್.ಐ.ನ ಜಿಲ್ಲಾ ಸಮಿತಿ ರಾಜ್ಯ ಕೇಂದ್ರದೊಂದಿಗೆ ಕೂಡಿ ನಿರ್ದಿಷ್ಟ ಯೋಜನೆಗಳನ್ನು ರೂಪಿಸಿ, ಜಿಲ್ಲಾ ಸಮಿತಿಯ ಹೆಸರಿನಲ್ಲೇ ಪ್ರತ್ಯೇಕ ಪೋಸ್ಟರ್ ಸೇರಿದಂತೆ ಪ್ರಚಾರ ನಡೆಸಲಾಗಿತ್ತು.

ಬಹುತೇಕ ಬೃಹತ್ ಶಾಲಾ-ಕಾಲೇಜುಗಳಾದ ಪಿ.ಇ.ಎಸ್., ಬಿ.ಎಂ.ಎಸ್., ಮಹಾರಾಣಿ ಕಾಲೇಜುಗಳು, ಮಹಾವೀರ್ ಜೈನ್ ಕಾಲೇಜ್, ಆರ್.ಬಿ.ಎ., ಎನ್.ಎಂ.ಕೆ.ಆರ್.ವಿ., ವಿ.ವಿ.ಪುರಂ, ನ್ಯಾಷನಲ್, ಮಿತ್ರಾಲಯ, ಯುನೈಟೆಡ್ ಮಿಷನ್, ಎ.ಪಿ.ಎಸ್. ಹೀಗೆ ಪಟ್ಟಿ ಮಾಡುತ್ತಾ ಹೋದಂತೆಲ್ಲಾ ಬೆಳೆಯುತ್ತಾ ಹೋಗುತ್ತದೆ. ಒಟ್ಟಾರೆಯಾಗಿ ಖಾಸಗಿ, ಅನುದಾನಿತ ಮತ್ತು ಸರ್ಕಾರಿ ಕಾಲೇಜುಗಳು ಬೆಂಗಳೂರಿನಲ್ಲಿ ಬಹುತೇಕ ಬಂದ್ ಆಗಿದ್ದು ಲಕ್ಷಗಟ್ಟಲೆ ವಿದ್ಯಾರ್ಥಿಗಳು ತರಗತಿ ಬಹಿಷ್ಕರಿಸಿದ್ದಾರೆ. ಮಲ್ಲೇಶ್ವರಂ 18ನೇ ಕ್ರಾಸಿನ ಅಮ್ಮಣ್ಣಿ ಕಾಲೇಜಿನಿಂದ ಸಾವಿರಾರು ಸಂಖ್ಯೆಯಲ್ಲಿ ವಿದ್ಯಾರ್ಥಿನಿಯರು ಮುಖ್ಯಮಂತ್ರಿ ಮನೆಯ ಎದುರು ಪ್ರತಿಭಟಿಸಲು ಹೊರಟಾಗ ಪೋಲೀಸರು ಅವರನ್ನು ತಡೆದರು. ಅದೇ ರೀತಿ ಮಹಾರಾಣಿ ಕಾಲೇಜು ವಿದ್ಯಾರ್ಥಿನಿಯರು ಮುಖ್ಯಮಂತ್ರಿ ಮನೆಯ ಮುಂದೆ ಹೋಗಲು ಹೊರಟಾಗ ಅಲ್ಲಿಯೂ ಪೋಲೀಸರು ವಿದ್ಯಾರ್ಥಿಗಳನ್ನು ತಡೆದು ಎರಡೂ ರ್‍ಯಾಲಿಗಳನ್ನು ಮಲ್ಲೇಶ್ವರಂ ಮೈದಾನಕ್ಕೆ ಕರೆ ತಂದರು. ಅದೇ ಸಂದರ್ಭದಲ್ಲಿ ಬಸವನಗುಡಿಯ ನ್ಯಾಷನಲ್ ಕಾಲೇಜ್ ಮತ್ತು ವಿ.ವಿ.ಪುರಂ ಸುತ್ತಮುತ್ತಲಿನ ಎಲ್ಲಾ ಕಾಲೇಜಿನ ವಿದ್ಯಾರ್ಥಿಗಳು ಶಿಕ್ಷಣದ ವ್ಯಾಪಾರೀಕರಣದ ಭೂತದಹನ ಮಾಡಿದರು. ಸಾವಿರಾರು ಜನ ವಿದ್ಯಾರ್ಥಿನಿಯರು ಮಲ್ಲೇಶ್ವರಂ ಮೈದಾನದಲ್ಲಿ ಶಿಕ್ಷಣದ ವ್ಯಾಪಾರೀಕರಣದ ದೈತ್ಯಾಕಾರವಾದ ಭೂತವನ್ನು ದಹಿಸಿ ತಮ್ಮ ಆಕ್ರೋಶವನ್ನು ವ್ಯಕ್ತಪಡಿಸಿದರು ನಂತರ ಎಸ್.ಎಫ್.ಐ. ನಿಯೋಗ ಶಿಕ್ಷಣ ಸಚಿವರನ್ನು ವಿಧಾನಸೌಧದಲ್ಲಿ ಭೇಟಿ ಮಾಡಿತು.



[illegible] ತರಗತಿಗಳನ್ನು ಬಹಿಷ್ಕರಿಸುತ್ತಿರುವ ವಿದ್ಯಾರ್ಥಿಗಳು


ಬೆಂಗಳೂರು ವಿ.ವಿ.ಯಲ್ಲೂ ಬಂದ್ ಯಶಸ್ವಿ: ಬೆಂಗಳೂರು ವಿ.ವಿ. ಕ್ಯಾಂಪಸ್ ಜ್ಞಾನಭಾರತಿಯಲ್ಲಿಯೂ ಕೂಡ ವಿದ್ಯಾರ್ಥಿಗಳು ಎಲ್ಲಾ ವಿಭಾಗಗಳನ್ನು ಬಹಿಷ್ಕರಿಸಿ ಪ್ರತಿಭಟನಾ ಮೆರವಣಿಗೆ ನಡೆಸಿ ವಿ.ವಿ. ರಿಜಿಸ್ಟರ್‌ರವರಿಗೆ ಮನವಿ ಪತ್ರ ಸಲ್ಲಿಸಿದರು. ಜೊತೆಗೆ ಕೋಲಾರದ ಪಿ.ಜಿ. ಕೇಂದ್ರವೂ ಸಂಪೂರ್ಣ ಬಂದ್ ಆಗಿದೆ.

ಕೋಲಾರ : ಕೋಲಾರ ಜಿಲ್ಲೆಯಲ್ಲಿ ಕೋಲಾರ, ಚಿಕ್ಕಬಳ್ಳಾಪುರ, ಬಾಗೇಪಲ್ಲಿ, ಗುಡಿಬಂಡೆ, ಚಿಂತಾಮಣಿ, ಮಾಲೂರು, ಗೌರಿಬಿದನೂರು, ಶಿಡ್ಲಘಟ್ಟ, ಮುಳಬಾಗಿಲು, ಬಂಗಾರಪೇಟೆ, ಒಟ್ಟು 10 ತಾಲ್ಲೂಕುಗಳಲ್ಲಿ ಅತ್ಯಂತ ಯಶಸ್ವಿಯಾಗಿ ಬಂದ್ ಆಚರಿಸಲಾಗಿದೆ ಅಂದರೆ ಕೆಲವು ತಾಲ್ಲೂಕುಗಳ ಹಳ್ಳಿಗಳಲ್ಲಿರುವ ಶಾಲೆಗಳಲ್ಲೂ ಕೂಡ ವಿದ್ಯಾರ್ಥಿಗಳು ತರಗತಿಗಳನ್ನು ಬಹಿಷ್ಕರಿಸಿ ಪ್ರತಿಭಟಿಸಲಾಗಿದೆ. ಕೋಲಾರ ಜಿಲ್ಲೆಯಲ್ಲಿ 160 ಶಿಕ್ಷಣ ಸಂಸ್ಥೆಗಳಲ್ಲಿ 61 ಸಾವಿರ ಜನವಿದ್ಯಾಥಿಗಳು ತರಗತಿಗಳನ್ನು ಬಹಿಷ್ಕರಿಸಿದ್ದು, 30 ಸಾವಿರ ವಿದ್ಯಾರ್ಥಿಗಳು ನೇರವಾಗಿ ಪ್ರತಿಭಟನೆಯಲ್ಲಿ ಭಾಗವಹಿಸಿದ್ದಾರೆ. ಮಂಡ್ಯ ಜಿಲ್ಲೆಯಲ್ಲಿ ಮಂಡ್ಯ, ಮಳವಳ್ಳಿ, ಮದ್ದೂರು, ತಾಲ್ಲೂಕುಗಳಲ್ಲಿ ಪ್ರತಿಭಟನೆ, ತರಗತಿ ಬಹಿಷ್ಕಾರಗಳು ನಡೆದಿವೆ.

ಗದಗ್ ಜಿಲ್ಲೆಯ ಗಜೇಂದ್ರಗಡ, ರೋಣ ತಾಲ್ಲೂಕುಗಳಲ್ಲಿ ಬಂದ್ ಯಶಸ್ವಿಯಾಗಿದೆ. ಹಾವೇರಿ ಜಿಲ್ಲೆಯ ಹಾವೇರಿ, ಹಾನಗಲ್, ಶಿಗ್ಗಾವ್, ಸವಣೂರು ತಾಲ್ಲೂಕುಗಳಲ್ಲಿ ಅತ್ಯಂತ ಯಶಸ್ವಿಯಾಗಿ ಶಾಲಾ-ಕಾಲೇಜುಗಳ ಬಂದ್ ನಡೆದಿದೆ. ರಾಯಚೂರು ಜಿಲ್ಲೆಯ ರಾಯಚೂರು, ಲಿಂಗಸೂರು, ದೇವದುರ್ಗಗಳಲ್ಲಿ, ಉಡುಪಿ ಜಿಲ್ಲೆಯ ಉಡುಪಿ, ಕುಂದಾಪುರ, ಗಂಗೊಳ್ಳಿ ಮುಂತಾಗಿ, ಮಂಗಳೂರಿನ ಮಂಗಳೂರು ಉಳ್ಳಾಲ, ಕಾಪು, ಬಿಜಾಪುರ ಜಿಲ್ಲೆಯ ಸಿಂಧಗಿ, ಮೊರಟಗಿ, ಉ.ಕ. ಜಿಲ್ಲೆಯ ಶಿರಸಿ, ಹೊನ್ನಾವರ, ಕುಮುಟಾ, ಕಾರವಾರ, ದಾಂಡೇಲಿಗಳಲ್ಲಿ, ಬೀದರ್, ಹಾಸನ,

ಪುಟ 11 ಕ್ಕೆ

ಪ.ಬಂಗಾಳ ಕರ್ನಾಟಕಕ್ಕೆ ಮಾದರಿ




ಚುರುಕು ಕಾಂಚಾಣ

ಜಿ.ಎಸ್.ಮಣಿ

ಇದನ್ನು ನಾವು ಹೇಳುತ್ತಿಲ್ಲ. ಕರ್ನಾಟಕ ಸರ್ಕಾರದ ಮಂತ್ರಿ ಮಹಾಶಯರಾದ ಪಿ.ಜಿ.ಆರ್.ಸಿಂಧ್ಯಾ ಹೇಳಿದ್ದಾರೆ. ಇತ್ತೀಚೆಗೆ ಕಲ್ಕತ್ತಾಕ್ಕೆ ಭೇಟಿ ನೀಡಿ ಅಲ್ಲಿನ ಸರ್ಕಾರ ಸರ್ಕಾರಿ ಕ್ಷೇತ್ರದ ಉದ್ದಿಮೆಗಳ ಪುನರುಜ್ಜೀವನದ ವಿಷಯದಲ್ಲಿ ಮಾಡಿರುವ ಕೆಲಸವನ್ನು ಶ್ಲಾಘಿಸಿದ್ದಾರೆ. ಕರ್ನಾಟಕಕ್ಕೆ ಇದು ಮಾದರಿ ಎಂದು ಅವರು ಹೇಳಿದ್ದಾರೆ.

ಪ.ಬಂಗಾಳ ಸರ್ಕಾರ ಕಾರ್ಮಿಕರ ಮತ್ತು ಒಟ್ಟಾರೆ ಜನಸಾಮಾನ್ಯರ ಹಿತಾಸಕ್ತಿಗಳನ್ನು ಕಾಪಾಡಲು ಅವಶ್ಯವಿರುವ ಎಲ್ಲ ಕ್ರಮಗಳನ್ನು ತನ್ನ ಮಿತಿಯೊಳಗೇ ತೆಗೆದುಕೊಂಡು ಇದನ್ನು ಸಾಧಿಸಿರುವುದನ್ನು ಅವರು ಪ್ರಶಂಸಿಸಿದ್ದಾರೆ.

ಕರ್ನಾಟಕದಲ್ಲಿ ಸರ್ಕಾರಿ ಕ್ಷೇತ್ರದ ಉದ್ದಿಮೆಗಳ ವಿಷಯದಲ್ಲಿ ಇಂತಹ ಕಾಳಜಿಯನ್ನು ತೋರಿಸಿಲ್ಲ ಎಂಬುದು ವಾಸ್ತವ ಇಲ್ಲಿನ ಸರ್ಕಾರಗಳಿಗೆ ಇರುವ



ಸೈದ್ಧಾಂತಿಕ ಹಿನ್ನೆಲೆ ನೋಡಿದಾಗ ಅಂತಹ ಕಾಳಜಿ ಬರಲೂ ಸಾಧ್ಯವಿಲ್ಲ.

ಕರ್ನಾಟಕದ ಉದ್ದಿಮೆ ಸಚಿವರು ಪ.ಬಂಗಾಳಕ್ಕೆ ಹೋಗಿ ಅಲ್ಲಿನ ಪ್ರಯತ್ನಗಳನ್ನು ಕಣ್ಣಾರೆ ಕಂಡು ಅಧ್ಯಯನ ಮಾಡಿ ಕರ್ನಾಟಕದಲ್ಲೂ ಹೀಗೆ ಮಾಡಬೇಕು ಎಂಬ ಆಶಯವನ್ನು ವ್ಯಕ್ತಪಡಿಸಿರುದೊಂದೇ ಇಲ್ಲಿನ ಸಕಾರಾತ್ಮಕ ಅಂಶ.

ಇಂತಹ ವಿಷಯದಲ್ಲಿ ಎಡರಂಗ ಸರ್ಕಾರ ಮಾದರಿಯಾಗಿದೆ. ಬೇರಾವ ಸರ್ಕಾರ ಮಾದರಿಯಾಗಲು ಸಾಧ್ಯ? ಅಲ್ಲವೇ.

ಸಿಐಟಿಯು ಅಧ್ಯಕ್ಷ ಕಾಂ.ಎಂ.ಕೆ.ಪಂಧೆ ಅವರು ಬಿಸಿನೆಸ್ ಸ್ಟಾಂಡರ್ಡ್ ಪತ್ರಿಕೆಗೆ ನೀಡಿದ ಸಂದರ್ಶನದ ಅನುವಾದ

ಬಿ.ಸ್ಟಾ : ಕಾರ್ಮಿಕ ಕಾಯಿದೆ ಸುಧಾರಣೆಗಳು ಶೀಘ್ರವಾಗಿ ಬದಲಾಗಬೇಕಾದ ಸಮಯವಲ್ಲವೇ ಇದು?

ಎಂ.ಕೆ.ಪಂಧೆ : ಮಾಲಕರು ಬದಲಾವಣೆಯ ಹೆಸರಿನಲ್ಲಿ ಏನು ಕೇಳುತ್ತಿದ್ದಾರೊ ಅದು ಅವರ ಹಿತಾಸಕ್ತಿಗೆ ಅನುಗುಣವಾಗಿದೆ. ಇಂದು ಬರೀ ಶೇ.8ರಷ್ಟು ಕಾರ್ಮಿಕರು ಮಾತ್ರ ಕಾರ್ಮಿಕ ಕಾಯ್ದೆಗಳಡಿ ಬರುತ್ತಾರೆ. ಮಾಲಕರುಗಳು ಕಾರ್ಮಿಕರ ಪ್ರಾವಿಡೆಂಟ್ ಫಂಡ್ ಖಾತೆಗೆ 1500 ಕೋಟಿ ರೂಪಾಯಿಗಳ ಬಾಕಿ ಉಳಿಸಿಕೊಂಡಿದ್ದಾರೆ ಎಂಬುದು ನಿಮಗೆ ಗೊತ್ತಿದೆಯೇ? ಕಾನೂನಿನ ಪ್ರಕಾರ ಇಂತಹ ಮಾಲಕರನ್ನು ಜೈಲಿಗೆ ಕಳುಹಿಸಬೇಕು. ಆದರೆ ಎಷ್ಟು ಜನ ಮಾಲಿಕರನ್ನು ಜೈಲಿಗೆ ಕಳುಹಿಸಲಾಗಿದೆ.

ಪ್ರಶ್ನೆ : ಮಾಲಿಕರು ಕಾರ್ಮಿಕರೊಂದಿಗಿನ ಮಾತುಕತೆಗಳಲ್ಲಿ ಹೊರಗಿನವರ ಮಧ್ಯಸ್ಥಿಕೆಯ ಅವಶ್ಯಕತೆಯಿಲ್ಲ ಎನ್ನುತ್ತಾರೆ.

ಉತ್ತ : ಮಾಲಕರು ಹೊರಗಿನವರನ್ನು ಸಲಹೆಗಾರರು ಎಂದು ತೆಗೆದುಕೊಂಡು ಅವರನ್ನೂ ಒಳಗಿನವರು ಎನ್ನುವುದಾದರೆ ಕಾರ್ಮಿಕರು ಕೇಂದ್ರೀಯ ಟ್ರೇಡ್ ಯೂನಿಯನ್‌ಗಳ ನೆರವು ಪಡೆಯುವುದರಲ್ಲಿ ತಪ್ಪೇನಿದೆ? ಇದು ಅವರ ದ್ವಿಮುಖ ನೀತಿಗೆ ಒಂದು ಉದಾಹರಣೆ.

ಪ್ರಶ್ನೆ : ಕಾರ್ಮಿಕ ಮಾಲಕರ ನಡುವಿನ ಸಂಘರ್ಷ ಒಮ್ಮಿಂದೊಮ್ಮೆ ಹೆಚ್ಚಾಗಿರುವುದೇಕೆ?

ಉತ್ತರ : ಮಾಲಕರು ವೇತನ ಕಡಿಮೆ ಮಾಡುವುದರ ಮೂಲಕ ಉತ್ಪಾದನಾ ವೆಚ್ಚ ಕಡಿಮೆ ಮಾಡಬಹುದೆಂದು ಯೋಚಿಸುತ್ತಾರೆ. ಯೂನಿಯನ್ನುಗಳು ಬೆಳೆಯದಂತೆ ಅವರು ಎಲ್ಲ ಪ್ರಯತ್ನ ಮಾಡುತ್ತಾರೆ. ಅದಕ್ಕೆ ಅವರು ಬೇಕಾದಾಗ ಕೆಲಸಕ್ಕೆ ತೆಗೆದುಕೊಳ್ಳುವ ಬೇಡವಾದಾಗ ಕಾರ್ಮಿಕರನ್ನು ಮನೆಗೆ ಕಳುಹಿಸುವ ನೀತಿ ಬೇಕೆನ್ನುತ್ತಾರೆ.

ಪ್ರಶ್ನೆ: ಭಾರತೀಯ ಕಂಪನಿಗಳ ಹೆಚ್ಚುತ್ತಿರುವ ಲಾಭದಾಯಕತೆಯಿಂದಾಗಿ ಕಾರ್ಮಿಕರು ಹೆಚ್ಚು ವೇತನ ಕೊಳ್ಳುತ್ತಿದ್ದಾರೆಯೇ?

ಉತ್ತರ: ಇದರಲ್ಲಿ ತಪ್ಪೇನಿದೆ? ಲಾಭದ ಪೂರ್ತಿ ಭಾಗವನ್ನು ಮಾಲಕರೇ ಇಟ್ಟುಕೊಳ್ಳಬೇಕೆ?

ಪ್ರಶ್ನೆ : ಲಾಭ ಕಡಿಮೆಯಾದಾಗ ಕೂಲಿಕಾರರು ಕಡಿಮೆ ವೇತನ ತೆಗೆದುಕೊಳ್ಳಲು ತಯಾರಿದ್ದಾರೆಯೇ?

ಉತ್ತರ : ಖಂಡಿತವಾಗಿ ಇಲ್ಲ. ಲಾಭ ಚೆನ್ನಾಗಿರುವಾಗ ಮಾಲಕರು ಕಷ್ಟದ ದಿನಗಳಿಗೆ ಬೇಕಾಗುವ ಶಿಲ್ಕು ಮಾಡಿಕೊಳ್ಳಬೇಕು.

ಪ್ರಶ್ನೆ : ಗುರಗಾಂವ್ ಘಟನೆಗಳಿಂದಾಗಿ ಕಾರ್ಮಿಕರು ಕಲಿತ ಪಾಠವೇನು?

ಉತ್ತರ : ಪೋಲಿಸರ ಕ್ರೌರ್ಯದಿಂದಲೂ ಕಾರ್ಮಿಕರನ್ನು ಹತ್ತಿಕ್ಕಲು ಸಾಧ್ಯವಿಲ್ಲ. ಹೋರಾಟ ಇನ್ನೂ ದಟ್ಟವಾಗುತ್ತದೆ.

ಪ್ರಶ್ನೆ : ಕಾರ್ಮಿಕರ ಸಮರಧೀರತೆಯನ್ನು ನೀವು ಮೆಚ್ಚುತ್ತೀರೋ?

ಕಾರ್ಮಿಕರ ಸಮರಧೀರ ಹೋರಾಟದಲ್ಲಿ ತಪ್ಪೇನಿದೆ?

ಬಂಡವಾಳಿಗರ/ ಸಾಮ್ರಾಜ್ಯಶಾಹಿಗಳ ಒಳ್ಳೆಯ ಅರ್ಥಶಾಸ್ತ್ರವೆಂದರೆ.....

ಸಾರ್ವಜನಿಕ ವಲಯದ ಉದ್ದಿಮೆಗಳನ್ನು ಮಾರಿ ಖಾಸಗೀಕರಣ ಮಾಡಿ ಬಂದ ಲಾಭವನ್ನು ಸರ್ಕಾರಿ ವೆಚ್ಚಗಳಿಗೆ ಉಪಯೋಗಿಸುವುದೇ ಒಳ್ಳೆಯ ಅರ್ಥಶಾಸ್ತ್ರ ಎಂಬುದು ಕೇಂದ್ರ ಹಣಕಾಸುಮಂತ್ರಿ ಪಿ.ಚಿದಂಬರಂ ಅವರ ಉವಾಚ.

ಸರ್ಕಾರಿ ಕ್ಷೇತ್ರದ ಉದ್ದಿಮೆಗಳ ಮಾರಾಟ ಮಾಡಬಾರದೆಂಬುದು ಈ ಸರ್ಕಾರದ ಕನಿಷ್ಠ ಸಾಮಾನ್ಯ ಕಾರ್ಯಕ್ರಮದ ನಿಲುಮೆ. ಎಡಪಕ್ಷಗಳು, ಸರ್ಕಾರ ಈ ನಿಲುವಿಗೆ ಬದ್ಧವಾಗಿರಬೇಕು. ಮತ್ತು ಯಾವುದೇ ಸರ್ಕಾರಿ ವಲಯದ ಲಾಭದಾಯಕ ಉದ್ದಿಮೆಯನ್ನು ಖಾಸಗೀಕರಿಸಬಾರದು ಎಂದು ಒತ್ತಡ ಹೇರುತ್ತಿರುವಾಗ ಈ ಚಿದಂಬರಂ ಮಹಾಶಯರು ಪತ್ರಿಕೆಗಳಿಗೆ ಸಂದರ್ಶನ ನೀಡಿ ಹೀಗೆ ಮಾರಾಟ ಮಾಡುವುದು ಒಳ್ಳೆಯ ರಾಜಕಾರಣ ಎಂದು ಡಂಗುರ ಸಾರಿದ್ದಾರೆ.

ಜನವಿರೋಧಿ ನೀತಿಗಳು ಕಾಂಗ್ರೆಸ್‌ಗೆ ಹೇಗೆ ರಕ್ತಗತವಾಗಿಬಿಟ್ಟಿದೆ ಎಂಬುದಕ್ಕೆ ಇದೊಂದು ನಿದರ್ಶನ.

ಎಡಪಕ್ಷಗಳ ಒತ್ತಡದಿಂದಾಗಿ ಈಗ ಸಾರ್ವಜನಿಕ ವಲಯದ ಉದ್ದಿಮೆಗಳ ಖಾಸಗೀಕರಣ ಸದ್ಯಕ್ಕೆ ಇಲ್ಲ ಎಂದೂ ಸರ್ಕಾರ ನಂತರದಲ್ಲಿ ಹೇಳಿದೆ ಎಂಬುದು ಬೇರೆ ಮಾತು.

ಹೀಗೆ ಮಾರಾಟ ಮಾಡಿ ಬಂದ ಹಣದ ಒಂದು ಭಾಗವನ್ನು ರಾಷ್ಟ್ರೀಯ ಹೂಡಿಕೆ ನಿದಿ ಎಂಬುದೊಂದು ನಿಧಿ ಸ್ಥಾಪಿಸುತ್ತೇವೆ. ಈ ನಿಧಿಯಿಂದ ಅಭಿವೃದ್ಧಿ ಕಾರ್ಯಗಳು ಸಾಧ್ಯ ಎಂದೆಲ್ಲ ಇವರು ಹೇಳುತ್ತಾರೆ. ಆದರೆ ಲಾಭದಾಯಕ ಉದ್ದಿಮೆಗಳನ್ನು ಏಕೆ ಮಾರಬೇಕು ಎಂಬುದನ್ನು ಹೇಳಲಾರರು. ಈ ಉದ್ದಿಮೆಗಳು ಲಕ್ಷಾಂತರ ಜನರ ಜೀವನದ ದಾರಿ ಎಂದಾದರೆ ಈ ದಾರಿಯನ್ನು ಮುಚ್ಚಬಾರದು ಎಂಬ ವಿವೇಚನೆ ಅವರಿಗಿರುತ್ತಿತ್ತು. ಅವರ ದೃಷ್ಟಿಯಲ್ಲಿ ಬಂಡವಾಳಿಗರಿಗೆ ಲಾಭ ಮಾಡಿಕೊಡಲು ಮಾತ್ರ ಉದ್ದಿಮೆಗಳಿರಬೇಕು ಅಲ್ಲವೇ?

ಬೆಂಗಳೂರು ಈಸ್ಟ್ ಇಂಡಸ್ಟ್ರಿಯಲ್ ವರ್ಕರ್ಸ್ ಸಮಾವೇಶ

ಬೆಂಗಳೂರು ಈಸ್ಟ್ ಇಂಡಸ್ಟ್ರಿಯಲ್ ವರ್ಕರ್ಸ್ ಯೂನಿಯನ್‌ನ ಸರ್ವಸದಸ್ಯರ ಸಭೆಯನ್ನು ಜುಲೈ 07, 2005 ರಂದು ವೈಟ್‌ಫೀಲ್ಡ್ ಹಿಮ್ಮಡಿ ಹಳ್ಳಿ ರಸ್ತೆಯಲ್ಲಿರುವ ಸಪ್ತಪದಿ ಕಲ್ಯಾಣ ಮಂಟಪದಲ್ಲಿ ನಡೆಸಲಾಯಿತು. ಈ ಸರ್ವಸದಸ್ಯರ ಸಭೆಯಲ್ಲಿ 973 ಜನ ಸದಸ್ಯರು ಭಾಗವಹಿಸಿದ್ದರು ಈ ಸಭೆಯ ಅಧ್ಯಕ್ಷತೆಯನ್ನು ಸಂಘದ ಅಧ್ಯಕ್ಷರಾದ ಕೆ.ಪ್ರಕಾಶ್ ವಹಿಸಿದರು. ಇ.ಆರ್.ಕೆ.ವಾರಿಯರ್ ಸಿಐಟಿಯು ಧ್ವಜಾರೋಹಣ ಮಾಡುವ ಮೂಲಕ ಮತ್ತು ಹುತಾತ್ಮರಾದ ಹಿರಿಯ ಸಂಗಾತಿಗಳಿಗೆ ಕೆಂಪು ವಂದನೆಗಳನ್ನು ಸಲ್ಲಿಸುವ ಮೂಲಕ ಈ ಸಭೆ ಪ್ರಾರಂಭವಾಯಿತು. ಸ್ವಾಗತ ಭಾಷಣವನ್ನು ಪಿ.ಮುನಿರಾಜ ಮಾಡಿದರು. ನಂತರ ಗೇರ್ಸ್ ಅಂಡ್ ಪಿನಿಯನ್ಸ್ ಕಾರ್ಮಿಕರಿಂದ ಹೋರಾಟದ ಹಾಡು. ಕಾಂ. ಸೂರ್ಯನಾರಾಯಣ ರಾವ್ ವೇದಿಕೆಯಲ್ಲಿ ಹೆಚ್.ಎನ್.ಗೋಪಾಲಗೌಡ, ಪಿ.ಜಯರಾಮ್, ಸಿ.ರಮೇಶ್, ಇ.ಆರ್.ಕೆ. ವಾರಿಯರ್, ಮತ್ತು ಪಿ.ಮುನಿರಾಜ ರವರು ಉಪಸ್ಥಿತರಿದ್ದರು. ಸಂಘದ ಪ್ರಧಾನ ಕಾರ್ಯದರ್ಶಿ ಹೆಚ್.ಎನ್. ಗೋಪಾಲಗೌಡರು ಮಂಡಿಸಿದ ವರದಿಯ ಮೇಲೆ ಹಲವಾರು ಕಾರ್ಮಿಕ ಮುಖಂಡರು ಚರ್ಚೆ ನಡೆಸಿದ್ದರು. ಕರಡು ವರದಿ ಚರ್ಚೆಯ ಬಗ್ಗೆ ವಿವರ ನೀಡಿದ ಪ್ರಧಾನ ಕಾರ್ಯದರ್ಶಿ ಕಾಂ.ಹೆಚ್.ಎನ್.ಗೋಪಾಲ ಗೌಡರು ಮುಂದೆ ಸಂಘಟನೆಯ ಹೋರಾಟಗಳು ಮತ್ತು ಸಂಘಟನೆಯ ವ್ಯಾಪ್ತಿಯನ್ನು ದ್ವಿಗುಣಗೊಳಿಸಬೇಕೆಂದು ತಿಳಿಸಿದರು. ನೂತನ ಮುಖಂಡರ ಆಯ್ಕೆ ಮಾಡಲಾಯಿತು. ಪ್ರಕಾಶ್ ಅಧ್ಯಕ್ಷರು, ಪಿ.ಜಯರಾಮ್, 1ನೇ ಉಪಾಧ್ಯಕ್ಷರು, ಸಿ.ರಮೇಶ್ 2ನೇ ಉಪಾಧ್ಯಕ್ಷರು, ಹೆಚ್.ಎನ್. ಗೋಪಾಲಗೌಡ, ಪ್ರಧಾನ ಕಾರ್ಯದರ್ಶಿ, ಪಿ.ಮುನಿರಾಜು 1ನೇ ಜಂಟಿ ಕಾರ್ಯದರ್ಶಿ, ಅನಂತ ಶೇಷ ಅಯ್ಯಂಗಾರ್ 2ನೇ ಜಂಟಿ ಕಾರ್ಯದರ್ಶಿ, ಕೃಷ್ಣಗೌಡ 3ನೇ ಜಂಟಿ ಕಾರ್ಯದರ್ಶಿಯಾಗಿ ಆಯ್ಕೆಯಾದರು. ಬಳಿಕ ಪ್ರಕಾಶ್ ಅಧ್ಯಕ್ಷ ಭಾಷಣ ಮಾಡಿದರು ನಂತರ ಪಿ.ಜಯರಾಮ್ ವಂದನಾರ್ಪಣೆ ಮಾಡಿದರು.

ಮೆರವಣಿಗೆ ಬಹಿರಂಗ ಸಭೆ

ಸಪ್ತಪದಿ ಕಲ್ಯಾಣ ಮಂಟಪದಿಂದ ವೈಟ್‌ಫೀಲ್ಡ್ ಬಸ್ ನಿಲ್ದಾಣದವರೆಗೆ ಕಾರ್ಮಿಕರು ಮೆರವಣಿಗೆಯಲ್ಲಿ ತೆರಳಿದರು. ನಂತರ ನಡೆದ ಬಹಿರಂಗ ಸಭೆಯಲ್ಲಿ ಗೌರಮ್ಮ ಮಾತನಾಡಿ ಮಹಿಳಾ ಕಾರ್ಮಿಕರು ಎದುರಿಸುತ್ತಿರುವ ಗಂಭೀರ ಸಮಸ್ಯೆಗಳನ್ನು ವಿವರಿಸಿದರು. ಸಭೆಯ ಅಧ್ಯಕ್ಷತೆ ವಹಿಸಿದ್ದ ಕೆ.ಪ್ರಕಾಶ್ ಕೇಂದ್ರ ರಾಜ್ಯ ಸರ್ಕಾರಗಳ ಕಾರ್ಮಿಕ ವಿರೋಧಿ ನೀತಿಯನ್ನು ಖಂಡಿಸಿದರು ಮತ್ತು ಕಾರ್ಮಿಕ ಸಂಘಟನೆಗಳಲ್ಲದೆ ಎಡಪಕ್ಷಗಳು ಅದರಲ್ಲಿಯೂ ಸಿಪಿಐ(ಎಂ) ಪಕ್ಷವು ನೀತಿಗಳ ವಿರುದ್ಧ ನಡೆಸುತ್ತಿರುವ ಹೋರಾಟಗಳ ಕುರಿತು ವಿವರಿಸಿದರು. ಹೆಚ್.ಎನ್.ಗೋಪಾಲಗೌಡ ಸೇರಿದಂತೆ ವಿವಿಧ ಮುಖಂಡರು ವೇದಿಕೆಯಲ್ಲಿದ್ದರು. ಪಿ.ಜಯರಾಮ್ ಸ್ವಾಗತಿಸಿದರೆ, ಪಿ.ಮುನಿರಾಜು ವಂದಿಸಿದರು. ಎಸ್.ಎಸ್.ಎಲ್.ಸಿ.ಯಲ್ಲಿ ಹೆಚ್ಚು ಅಂಕಗಳಿಸಿದ ಮಕ್ಕಳಿಗೆ ಬಹುಮಾನವನ್ನು ವಿತರಿಸಲಾಯಿತು.

ಪಿ.ಮುನಿರಾಜು

ದೇವದುರ್ಗ ಸಿಪಿಐ(ಎಂ) ತಾಲ್ಲೂಕು ಕಾರ್ಯದರ್ಶಿಯಾಗಿ ಕಾಂ. ಪಿ.ಗಿರಿಯಪ್ಪ ಆಯ್ಕೆ

ರಾಯಚೂರು ಜಿಲ್ಲೆ ದೇವದುರ್ಗ ಸಿಪಿಐ(ಎಂ) ತಾಲೂಕ ಕಾರ್ಯದರ್ಶಿಯಾಗಿದ್ದ ಕಾಂ. ಮಲ್ಲಯ್ಯನವರು ಜಿಲ್ಲಾ ಕಾರ್ಯದರ್ಶಿಯಾಗಿದ್ದರಿಂದ ತೆರವಾಗಿದ್ದ ತಾಲ್ಲೂಕ ಕಾರ್ಯದರ್ಶಿ ಸ್ಥಾನಕ್ಕೆ ತಾಲ್ಲೂಕು ಸಮಿತಿ ಸದಸ್ಯರಾಗಿದ್ದ ಪಿ.ಗಿರಿಯಪ್ಪ ತಾಲ್ಲೂಕು ಆಯ್ಕೆಯಾಗಿದ್ದಾರೆ.

ಪಿ.ಗಿರಿಯಪ್ಪ 1988 ರಲ್ಲಿ ವಿದ್ಯಾರ್ಥಿ ಚಳುವಳಿಯ ಮೂಲಕ ಪಕ್ಷಕ್ಕೆ ಬಂದಿದ್ದರು. 3-4 ವರ್ಷ ವಿದ್ಯಾರ್ಥಿ ಶಾಖೆ ಕಾರ್ಯದರ್ಶಿಯಾಗಿ ದೇವದುರ್ಗ ತಾಲ್ಲೂಕಿನಲ್ಲಿ ಎಲ್ಲಾ ಶಾಲಾಕಾಲೇಜಿನಲ್ಲಿ ವಿದ್ಯಾರ್ಥಿ ಸಂಘಟನೆ ಮಾಡಲು ಶ್ರಮಿಸಿದ್ದರು. 1988 ರಿಂದ 96 ರವರೆಗೆ ವಿದ್ಯಾರ್ಥಿ ನಾಯಕರಾಗಿದ್ದರು. 1996 ರಲ್ಲಿ ಕಾರ್ಮಿಕ ಚಳುವಳಿಯಲ್ಲಿ ತೊಡಗಿಸಿಕೊಂಡು ಮೂರು ವರ್ಷ ಕಾರ್ಮಿಕ ಶಾಖೆ ಕಾರ್ಯದರ್ಶಿಯಾಗಿ 3ನೇ ಬಾರಿಗೆ ಸಿಪಿಐ(ಎಂ) ಜಿಲ್ಲಾ ಸಮಿತಿ ಸದಸ್ಯರಾಗಿದ್ದಾರೆ. ತಾಲ್ಲೂಕಿನಲ್ಲಿ ಅಂಗನವಾಡಿ, ಪಂಚಾಯತಿ ಮತ್ತು ಬಿಸಿಊಟ ನೌಕರರನ್ನು ಸಂಘಟನೆ ಮಾಡಲು ದುಡಿಯುತ್ತಿದ್ದಾರೆ.

ನಮ್ಮ ರಾಜ್ಯದ ಆರೋಗ್ಯ ವ್ಯವಸ್ಥೆ ಎಡವಿರುವುದು ಎಲ್ಲಿ?



ಆರೋಗ್ಯ ವ್ಯವಸ್ಥೆಯು ಜವಾಬ್ದಾರಿ ಸರಕಾರದ್ದು. ಈ ವ್ಯವಸ್ಥೆ ವೈಜ್ಞಾನಿಕವಾಗಿರಬೇಕು ಹಾಗೂ ಜನರಿಗೆ ಮಾಹಿತಿ ಕೊಟ್ಟು, ಅದನ್ನು ಉಪಯೋಗಿಸಲು ಪ್ರೋತ್ಸಾಹಿಸ ಬೇಕಾಗುತ್ತದೆ. ಜಾಗತೀಕರಣ ಹಾಗೂ ಖಾಸಗೀಕರಣದ ಪರಿಣಾಮವಾಗಿ ಖಾಸಗೀ ಆರೋಗ್ಯ ವ್ಯವಸ್ಥೆ ಬಲಗೊಳ್ಳುತ್ತಿದೆ. ಆದರೂ ಸರ್ಕಾರೀ ಆರೋಗ್ಯ ವ್ಯವಸ್ಥೆಗೆ ಈಗಲೂ ಮಹತ್ವವಿದೆ. ಇದನ್ನು ಸರಕಾರ ತಿಳಿದಿದೆಯೇ? ಅಥವಾ ಆರೋಗ್ಯ ವ್ಯವಸ್ಥೆ ಬಲಪಡಿಸುವಲ್ಲಿ ಎಡವಿದೆಯೇ ಎಂಬುದನ್ನು ತಿಳಿಯೋಣ.

ಕರ್ನಾಟಕದ ಆರೋಗ್ಯ ವ್ಯವಸ್ಥೆಯಲ್ಲಿ ಸಾಕಷ್ಟು ನಕಾರಾತ್ಮಕ ಅಂಶಗಳಿದ್ದರೂ, ಕೆಲವು ಸಕಾರಾತ್ಮಕ ಅಂಶಗಳಿವೆ. ಕರ್ನಾಟಕ ಆರೋಗ್ಯ ಸ್ಥಿತಿಗತಿಯ ಸಕಾರಾತ್ಮಕ ಅಂಶವೆಂದರೆ ವ್ಯಾಪಕವಾಗಿ ಕಂಡುಬರುವ ಆರೋಗ್ಯ ಕೇಂದ್ರಗಳು, ವೈದ್ಯಕೀಯ ಶಿಕ್ಷಣ ಸಂಸ್ಥೆಗಳು, ಆರೋಗ್ಯ ವಿಶ್ವವಿದ್ಯಾಲಯ ಇತ್ಯಾದಿ, ಇತರೇ ರಾಜ್ಯಗಳಿಗೆ ಹೋಲಿಸಿದರೆ ಪರಿಸ್ಥಿತಿ ಉತ್ತಮವಾಗಿದೆಯೆಂದೇ ಹೇಳಬಹುದು. ಕೇರಳದ ಪರಿಸ್ಥಿತಿ ಇದಕ್ಕಿಂತಲೂ ಉತ್ತಮವಾಗಿದೆ ಎಂದು ಈ ಕೆಳಗಿನ ಅಂಕಿಅಂಶಗಳು ತೋರಿಸುತ್ತವೆ.

	ಶಿಶು ಮರಣ ಸಂಖ್ಯೆ	ಮಾತೃ ಮರಣ ಸಂಖ್ಯೆ
ಕರ್ನಾಟಕ	58	450
ಕೇರಳ	16	87
ಮಧ್ಯ ಪ್ರದೇಶ	98	711
ಭಾರತ	72	453

ಆರೋಗ್ಯ ಸ್ಥಿತಿಗತಿಯ ನಕಾರಾತ್ಮಕ ಅಂಶಗಳು :

ಗ್ರಾಮೀಣ ಹಾಗೂ ನಗರ ಪ್ರದೇಶದಲ್ಲಿನ ಅಂತರ : ಗ್ರಾಮೀಣ ಪ್ರದೇಶದ ಶಿಶುಮರಣ ಸಂಖ್ಯೆ (ಇನ್‌ಫ್ಯಾಂಟ್ ಮೊರ್ಟಾಲಿಟಿ ರೇಟ್) 70, ಆದರೆ ನಗರ ಪ್ರದೇಶದ್ದು 25. ಗ್ರಾಮೀಣ ಪ್ರದೇಶಗಳಲ್ಲಿ ರಕ್ತಹೀನತೆ, ತಡೆಗಟ್ಟಬಹುದಾದ ರೋಗಗಳು ಇತ್ಯಾದಿ ಹೆಚ್ಚಾಗಿರುವುದು ಕಂಡುಬರುತ್ತದೆ.

ಆರೋಗ್ಯ ನಿರ್ಧಾರಕಗಳು : ಆರೋಗ್ಯ ಸುಧಾರಣೆಗೆ ಪೌಷ್ಟಿಕ ಆಹಾರ, ಸುರಕ್ಷಿತ ಕುಡಿಯುವ ನೀರು, ನೈರ್ಮಲ್ಯಕರ ಶೌಚಾಲಯ ವ್ಯವಸ್ಥೆ, ವಸತಿ ಹಾಗೂ ಸಾಕ್ಷರತೆಯ ಮಟ್ಟ ಹೆಚ್ಚಿಸುವ ಅಗತ್ಯ ಇದೆ. ಇದರೊಂದಿಗೆ ಬಡತನ ನಿರ್ಮೂಲನೆಯೂ ಅಗತ್ಯ.

ಮಕ್ಕಳ ಪೌಷ್ಟಿಕತೆ : ನಾವು ಆಹಾರ ಧಾನ್ಯಗಳನ್ನು ಸಾಕಷ್ಟು ಬೆಳೆಯುತ್ತೇವೆ. ಇಂತಹ ಪರಿಸ್ಥಿತಿಯಲ್ಲಿ ಮಕ್ಕಳಲ್ಲಿ ಅಪೌಷ್ಟಿಕತೆ ಕಂಡುಬರುತ್ತಿರುವುದು ಶೋಚನೀಯ.

ಮಕ್ಕಳ ಪೌಷ್ಟಿಕತೆ

ತೀವ್ರ ಅಪೌಷ್ಟಿಕತೆ	ಶೇ.6.2 ಮಕ್ಕಳಲ್ಲಿ
ಮಧ್ಯಮ ಅಪೌಷ್ಟಿಕತೆ	ಶೇ.45.4 ಮಕ್ಕಳಲ್ಲಿ
ಸ್ವಲ್ಪ ಮಟ್ಟದ ಅಪೌಷ್ಟಿಕತೆ	ಶೇ. 39.0 ಮಕ್ಕಳಲ್ಲಿ

ಪ್ರಾಥಮಿಕ ಆರೋಗ್ಯ ಕೇಂದ್ರಗಳು : ಜನಾರೋಗ್ಯ ಸಾಧಿಸಲು ಪ್ರಾಥಮಿಕ ಆರೋಗ್ಯ ವ್ಯವಸ್ಥೆ ವ್ಯಾಪಕವಾಗಿ ಲಭ್ಯವಾಗಬೇಕು. ಪ್ರಾಥಮಿಕ ಆರೋಗ್ಯ ವ್ಯವಸ್ಥೆಯಿಂದಲೇ ಜನಾರೋಗ್ಯ ಸುಧಾರಣೆ ಸಾಧ್ಯ. ಇದರಂತೆಯೇ ದ್ವಿತೀಯ ಹಾಗೂ ತೃತೀಯ ಸೇವೆಗಳೂ ಲಭ್ಯವಾಗಬೇಕಾಗುತ್ತದೆ.

ಪ್ರಾಥಮಿಕ ಆರೋಗ್ಯ ಸೇವೆಗಳು ಚಿಕಿತ್ಸೆಗಳೊಂದಿಗೆ ಪ್ರತಿಬಂಧಕ ಚಿಕಿತ್ಸೆಗಳಿಗೆ, ಪುನರ್ವಸತಿ ವಿಧಾನಗಳಿಗೆ ಗಮನ ಹರಿಸಬೇಕು. ಪ್ರಾಥಮಿಕ ಆರೋಗ್ಯ ಸುಧಾರಿಸಲು ಆರೋಗ್ಯ ಕ್ಷೇತ್ರ ಇತರೇ ಕ್ಷೇತ್ರದೊಂದಿಗೆ ಹೊಂದಾಣಿಕೆಯಿಂದ ಕೆಲಸಮಾಡಬೇಕಾಗುತ್ತದೆ. ಇತರೇ ಕ್ಷೇತ್ರಗಳಲ್ಲಿ ಮಹಿಳಾ ಅಭಿವೃದ್ಧಿ, ಶಿಕ್ಷಣ ಇತ್ಯಾದಿ ಪ್ರಾಮುಖ್ಯತೆ ವಹಿಸುತ್ತವೆ.

ಪ್ರಾಥಮಿಕ ಆರೋಗ್ಯ ಕೇಂದ್ರಗಳಲ್ಲಿ ಇಬ್ಬರು ವೈದ್ಯರು (ಒಬ್ಬರು ಸ್ಥಳೀಯವಾಗಿ ಯಾವಾಗಲೂ ದೊರಕಬೇಕು) ಹಾಗೂ ಬಹು ಉದ್ದೇಶ ಕೆಲಸಗಾರರು (ಮಲ್ಟಿ ಪರ್ಪಸ್ ವರ್ಕರ್ಸ್) ಇರಬೇಕಾಗುತ್ತದೆ. ಕೇಂದ್ರಗಳಲ್ಲಿ ಹೆರಿಗೆ ಹಾಗೂ ತುರ್ತು ಆರೋಗ್ಯ ಸಮಸ್ಯೆಯ ರೋಗಿಯನ್ನು ಚಿಕಿತ್ಸೆ ಮಾಡುವ ಸೌಕರ್ಯವಿರಬೇಕು.



ರೋಗ ನಿರ್ಧಾರಕ್ಕೆ ಪ್ರಯೋಗಾಲಯವಿದ್ದು ಅದರ ಸೌಲಭ್ಯ ಸದಾ ದೊರಕಬೇಕು.

ಆರೋಗ್ಯ ಕೇಂದ್ರಗಳಲ್ಲಿ ಔಷಧಿಗಳು ದೊರಕಬೇಕು. ಆರೋಗ್ಯ ಕೇಂದ್ರಕ್ಕೆ ಎಷ್ಟು ಔಷಧಿ ಬೇಕಾಗುತ್ತದೆ, ಯಾವ ಔಷಧಿಯ ಅಗತ್ಯತೆ ಇದೆ ಎಂಬುದನ್ನು ತೀರ್ಮಾನ ಮಾಡಿ ಸರಬರಾಜು ಮಾಡಬೇಕಾಗುತ್ತದೆ. ಔಷಧಿಗಳು ಅಗತ್ಯ ಔಷಧಿಗಳಾಗಿದ್ದು ಗುಣಮಟ್ಟದ ಔಷಧಿಗಳಾಗಿರಬೇಕು.

ಆರೋಗ್ಯ ಕೇಂದ್ರಗಳಲ್ಲಿ ತುರ್ತು ಸೇವೆಗಾಗಿ ವಾಹನ ಹಾಗೂ ದೂರವಾಣಿ ಅಗತ್ಯವಿದೆ. ಈ ವ್ಯವಸ್ಥೆ ಮಾಡಲು ಸರಕಾರ ಗಮನ ಹರಿಸಬೇಕು.

ಪ್ರಾಥಮಿಕ ಆರೋಗ್ಯ ಪಾಲನೆಯ ಎಂಟು ಸೂತ್ರಗಳನ್ನು ವಿಶ್ವ ಆರೋಗ್ಯ ಸಂಸ್ಥೆ ತೀರ್ಮಾನಿಸಿದೆ. ಪ್ರಾಥಮಿಕ ಆರೋಗ್ಯ ಕೇಂದ್ರಗಳು ಇವಕ್ಕೆ ಬದ್ಧವಾಗಿರಬೇಕು.

ಪ್ರಾಥಮಿಕ ಆರೋಗ್ಯ ಪಾಲನೆಯ ಎಂಟು ಸೂತ್ರಗಳು :

1. ಆರೋಗ್ಯ ಸಮಸ್ಯೆಗಳ ಬಗ್ಗೆ ತಿಳುವಳಿಕೆ ನೀಡುವುದು.
2. ಪೌಷ್ಟಿಕ ಆಹಾರ ಪೂರೈಕೆ.
3. ಸ್ವಚ್ಛ ಕುಡಿಯುವ ನೀರು ಹಾಗೂ ಪರಿಸರ ನೈರ್ಮಲ್ಯ.
4. ಕುಟುಂಬ ಯೋಜನೆ ಸೇರಿದಂತೆ ತಾಯಿ ಹಾಗೂ ಮಗುವಿನ ಆರೋಗ್ಯ.
5. ಮುಖ್ಯ ಸಾಂಕ್ರಾಮಿಕ ಕಾಯಿಲೆಗಳ ವಿರುದ್ಧ ಲಸಿಕೆ.
6. ಸ್ಥಳೀಯ ಸಾಂಕ್ರಾಮಿಕ ಕಾಯಿಲೆಗಳ ವಿರುದ್ಧ ಲಸಿಕೆ ಹಾಗೂ ನಿಯಂತ್ರಣ.
7. ಸಾಮಾನ್ಯ ಕಾಯಿಲೆಗಳಿಗೆ ಹಾಗೂ ಗಾಯಗಳಿಗೆ ಸರಿಯಾದ ಚಿಕಿತ್ಸೆ.
8. ಸಮಂಜಸ ಅಗತ್ಯ ಔಷಧಿಗಳ ಪೂರೈಕೆ.

ಪ್ರಾಥಮಿಕ ಆರೋಗ್ಯ ಕೇಂದ್ರ ಹಾಗೂ ಉಪಕೇಂದ್ರಗಳು :

ಪ್ರಾಥಮಿಕ ಆರೋಗ್ಯ ಕೇಂದ್ರಗಳು	1676
ಉಪಕೇಂದ್ರಗಳು	8141
ಸಮುದಾಯ ಆರೋಗ್ಯ ಕೇಂದ್ರಗಳು	25
ಜನಸಂಖ್ಯೆ ಆಸ್ಪತ್ರೆ ಅನುಪಾತ	6140:1

ಪ್ರಾಥಮಿಕ ಆರೋಗ್ಯ ಕೇಂದ್ರಗಳ ಕೊರತೆ : ಈ ಆರೋಗ್ಯ ಕೇಂದ್ರಗಳು ಕೇವಲ ವೈದ್ಯಕೀಯ ಚಿಕಿತ್ಸಾ ಕೇಂದ್ರಗಳಾಗಿವೆ, ರೋಗ ಪ್ರತಿಬಂಧನೆಗೆ ಮಹತ್ವವನ್ನು ಕೊಡುತ್ತಿಲ್ಲ.

ಮಕ್ಕಳಲ್ಲಿ ಸಂಪೂರ್ಣ ಲಸಿಕೆ : ಕೇವಲ ಶೇ.60 ರಷ್ಟು ಮಕ್ಕಳಲ್ಲಿ.

ಆರೋಗ್ಯ ಕೇಂದ್ರಗಳಲ್ಲಿ ಸಿಬ್ಬಂದಿಗಳ ಕೊರತೆ ಮೊದಲಿನಿಂದಲೂ ಇದೆ. ಅದನ್ನು ಸರಿಪಡಿಸಲು ಪ್ರಯತ್ನ ನಡೆಯುತ್ತಿದೆ. ಕೇಂದ್ರಗಳಲ್ಲಿ ವೈದ್ಯರ ಕೊರತೆ ಇದೆ. ವೈದ್ಯರು ಗ್ರಾಮೀಣ ಪ್ರದೇಶಗಳಲ್ಲಿ ಕೆಲಸ ಮಾಡಲು ಹಿಂದೇಟು ಹಾಕುತ್ತಿದ್ದಾರೆ. ಕೆಲವು ಕೇಂದ್ರಗಳನ್ನು ಸುಲಭವಾಗಿ ತಲುಪಲು ಸಾಧ್ಯವಿಲ್ಲದ್ದರಿಂದ ಹಾಗೂ ಸ್ಥಳಗಳಲ್ಲಿ ವೈದ್ಯರಿಗೆ ಅಗತ್ಯವಿರುವ ಸೌಲಭ್ಯಗಳು ಲಭ್ಯವಿಲ್ಲದ್ದರಿಂದ ವೈದ್ಯರು ಆ ಸ್ಥಳಗಳಿಗೆ ಹೋಗುತ್ತಿಲ್ಲ. ಈ ಸಮಸ್ಯೆ ಮಹಿಳಾ ವೈದ್ಯರಿಗೂ ಅನ್ವಯಿಸುತ್ತದೆ. ವೈದ್ಯರನ್ನು ಪ್ರೋತ್ಸಾಹಿಸಲು ಅನೇಕ ಪ್ರಯತ್ನಗಳನ್ನು ಮಾಡಲಾಗುತ್ತಿದೆ. ಪರಿಹಾರ ಸಾಧ್ಯ, ಆದರೆ ಕಾದು ನೋಡಬೇಕಿದೆ. ವೈದ್ಯರಂತೆಯೇ ಇತರೇ ಸಿಬ್ಬಂದಿಗಳ ಕೊರತೆ ಮೊದಲಿನಿಂದಲೂ ಇದೆ. ಕರ್ನಾಟಕದ ಆರೋಗ್ಯ ಕಾರ್ಯಪಡೆ ಈ ಸಮಸ್ಯೆಯನ್ನು ಅಧ್ಯಯನ ಮಾಡಿ ಕೆಲವು ಸಲಹೆಗಳನ್ನು ಕೊಟ್ಟಿದೆ.

ಆರೋಗ್ಯ ಕೇಂದ್ರಗಳಲ್ಲಿ ನಿರಂತರವಾಗಿ ಔಷಧಿ ಕೊರತೆ ಇದ್ದುದು ಕಂಡುಬರುತ್ತದೆ. ಇದರಿಂದಾಗಿ ವೈದ್ಯರು ರೋಗಿಗಳಿಗೆ ಔಷಧಿ ಚೀಟಿ ಕೊಟ್ಟು, ಔಷಧಿಗಳನ್ನು ಔಷಧಿ ಅಂಗಡಿಗಳಿಂದ ಕೊಂಡುಕೊಳ್ಳಲು ಹೇಳುತ್ತಾರೆ. ಇತ್ತೀಚೆಗೆ ಆರೋಗ್ಯ ಕೇಂದ್ರಕ್ಕೆ ಕೊಡುತ್ತಿದ್ದ ಔಷಧಿಯೊಂದಿಗೆ 25,000 ರೂಪಾಯಿಯಷ್ಟು ಹೆಚ್ಚು ಔಷಧಿ ನೀಡಲು ಆರೋಗ್ಯ ಕಾರ್ಯಪಡೆ ಸೂಚಿಸಿದೆ. ಇದು ಸ್ವಾಗತಾರ್ಹವಾದರೂ ಸಮಸ್ಯೆಗೆ ಪರಿಹಾರವಲ್ಲ. ಔಷಧಿ ಅಗತ್ಯತೆ ಮಟ್ಟವನ್ನು ಸರಕಾರ ತೀರ್ಮಾನಿಸಬೇಕಾಗಿದೆ.

ಆರೋಗ್ಯ ಕೇಂದ್ರಗಳಿಗೆ ಹೆಚ್ಚಿನ ವೆಚ್ಚದ ಬಗ್ಗೆ ಗಮನಹರಿಸದೇ ಕುಟುಂಬ ಕಲ್ಯಾಣ ಕಾರ್ಯಕ್ರಮಗಳಿಗೆ ಹೆಚ್ಚು ವೆಚ್ಚಮಾಡಲಾಗಿದೆ. ಅದರಿಂದಾಗಿ ಜನಾರೋಗ್ಯ ಸಾಧನೆಯಾಗಿಲ್ಲ.

ಪ್ರಾಥಮಿಕ ಆರೋಗ್ಯ ಕೇಂದ್ರಗಳನ್ನು ಪರಿಣಾಮಕಾರಿಯಾಗಿ ಮುಂದುವರಿಸಿಕೊಂಡು ಹೋಗಲು ಸಾಧ್ಯವಿಲ್ಲ ಎಂಬ ಆಧಾರದ ಮೇಲೆ ಪ್ರಾಥಮಿಕ ಆರೋಗ್ಯ ಕೇಂದ್ರಗಳನ್ನು ಖಾಸಗೀ ಸಂಸ್ಥೆಗಳಿಗೆ ಕೊಡಲಾಗುತ್ತಿದೆ. ಇದು ಅಪಾಯಕರ.

ಆರೋಗ್ಯ ಕೇಂದ್ರದ ಲೋಪದೋಷಗಳ ಬಗ್ಗೆ ಜನರು ಹೀಗೆ ಹೇಳುತ್ತಾರೆ :

"ಆರೋಗ್ಯ ಕೇಂದ್ರಗಳು ಸರಿಯಾದ ಸಮಯಕ್ಕೆ ತೆರೆಯುವುದಿಲ್ಲ"

"ಅಲ್ಲಿ ದೊರಕುವ ಸೌಲಭ್ಯ ಏನೆಂದು ತಿಳಿಯುವುದಿಲ್ಲ"

"ಯಾವ ಸೌಲಭ್ಯ ಎಲ್ಲೆಲ್ಲಿ ಎಂದು ಮಾರ್ಗದರ್ಶನ ಮಾಡುವವರಿಲ್ಲ."

"ಆರೋಗ್ಯ ತುರ್ತು ಪರಿಸ್ಥಿತಿಯಲ್ಲಿ ಸರಿಯಾದ ಚಿಕಿತ್ಸೆ ದೊರೆಯುವುದಿಲ್ಲ."


"ಆರೋಗ್ಯ ಕೇಂದ್ರಗಳು ಸ್ವಚ್ಛತೆ ಬಗ್ಗೆ ಗಮನ ಹರಿಸಿಲ್ಲ."

ಜನಾರೋಗ್ಯದ ಈ ಸ್ಥಿತಿಗೆ ಹಲವಾರು ಕಾರಣಗಳಿವೆ. ಮುಖ್ಯವಾಗಿ ಇಲ್ಲಿಯವರೆಗೆ ಸಮಗ್ರ ಆರೋಗ್ಯ ನೀತಿ ಇಲ್ಲದಿರುವುದು. ಇತ್ತೀಚೆಗೆ ಸರಕಾರ ಸಮಗ್ರ ಆರೋಗ್ಯ ನೀತಿಯನ್ನು ಜಾರಿ ಮಾಡಿದೆ. ಪರಿಣಾಮವನ್ನು ಕಾದುನೋಡಬೇಕಾಗಿದೆ.

ಆರೋಗ್ಯ ಕೇಂದ್ರಗಳು ಸುಧಾರಿಸಲು ಪಂಚಾಯತಿ ಸಮಿತಿಗಳು ಜವಾಬ್ದಾರಿ ತೆಗೆದುಕೊಳ್ಳಬೇಕು, ಮೇಲ್ವಿಚಾರಣೆ ಮಾಡಬೇಕು. ಸರಕಾರ ಎಲ್ಲ ಹಂತದಲ್ಲೂ ಜನಾರೋಗ್ಯ ಸನ್ನದನ್ನು ಜಾರಿಗೆ ತರಬೇಕು. ಜನರು ಈ ಎಲ್ಲ ಬೆಳವಣಿಗೆ ತರಲು ಸರಕಾರದ ಮೇಲೆ ಒತ್ತಡ ತರಬೇಕು, ಆಗ ಮಾತ್ರ ಬದಲಾವಣೆ ಸಾಧ್ಯ. ○

..........ಎಸ್.ಎಫ್.ಐ. ಯಶಸ್ವೀ ಶಾಲಾ-ಕಾಲೇಜ್ ಬಂದ್

ದಾವಣಗೆರೆಯ ಹರಿಹರ, ಹರಪ್ಪನಹಳ್ಳಿ, ಜಗಳೂರು, ದಾವಣಗೆರೆ, ಗುಲ್ಬರ್ಗಾದ ಗುಲ್ಬರ್ಗಾ, ಶಾಪುರ, ಚಿಂಚೋಳಿಗಳಲ್ಲಿ, ಕೊಪ್ಪಳ ಜಿಲ್ಲೆಯಲ್ಲಿ ಗಂಗಾವತಿ, ಯಲಬುರ್ಗಾ, ಕಾರ್ಟಗಿಗಳಲ್ಲಿ. ಬೆಂಗಳೂರು ಗ್ರಾಮಾಂತರ ಜಿಲ್ಲೆಯ ಆನೇಕಲ್, ಹೊಸಕೋಟೆ, ದೊಡ್ಡ ಬಳ್ಳಾಪುರ, ಕೆ.ಆರ್.ಪುರಂಗಳಲ್ಲಿ ಮೈಸೂರಿನ ಹುಣಸೂರಿನಲ್ಲಿ, ಬಳ್ಳಾರಿ ಜಿಲ್ಲೆಯ ಹೊಸಪೇಟೆ ಹೆಚ್.ಬಿ.ಹಳ್ಳಿ, ಸಿರುಗುಪ್ಪ ಮತ್ತು ಬಳ್ಳಾರಿಗಳಲ್ಲಿ ವ್ಯಾಪಕವಾಗಿ ಶಾಲಾ ಕಾಲೇಜುಗಳ ಬಂದ್ ಆಗಿ ಸಾವಿರಾರು ಸಂಖ್ಯೆಯಲ್ಲಿ ವಿದ್ಯಾರ್ಥಿಗಳು ತರಗತಿಗಳನ್ನು ಬಹಿಷ್ಕರಿಸಿ ಬೀದಿಗಿಳಿದು ಪ್ರತಿಭಟಿಸಿದ್ದಾರೆ. ರಾಜ್ಯವ್ಯಾಪಿಯ ಈ ಹೋರಾಟವನ್ನು ನೋಡಿದರೆ 2003ರ ಡಿಸೆಂಬರ್ 11 ರಲ್ಲಿ ನಡೆದ ಅಖಿಲ ಭಾರತ ಶೈಕ್ಷಣಿಕ ಬಂದ್ ನೆನಪು ಮರುಕಳಿಸಿದಂತಾಗುತ್ತದೆ. ಕರ್ನಾಟಕ ರಾಜ್ಯದ ಶೈಕ್ಷಣಿಕ ಇತಿಹಾಸದಲ್ಲೇ ಅಚ್ಚಳಿಯದೇ ಉಳಿಯುವ ಒಂದು ಮಹತ್ವದ ಹೋರಾಟವಾಗಿ ಅತ್ಯಂತ ಯಶಸ್ವಿಯಾಗಿದೆ. 19 ಜಿಲ್ಲೆಗಳಲ್ಲಿ, 56 ತಾಲ್ಲೂಕುಗಳಲ್ಲಿ, 1000 ಕ್ಕೂ ಹೆಚ್ಚು ಶಿಕ್ಷಣ ಸಂಸ್ಥೆಗಳು 6 ಲಕ್ಷದ 50 ಸಾವಿರಕ್ಕೂ ಹೆಚ್ಚು ವಿದ್ಯಾರ್ಥಿಗಳು ರಾಜ್ಯಾದ್ಯಂತ ತರಗತಿ ಬಹಿಷ್ಕರಿಸಿದ್ದಾರೆ ಮತ್ತು 20 ಸಾವಿರಕ್ಕೂ ಹೆಚ್ಚು ವಿದ್ಯಾರ್ಥಿಗಳು ನೇರವಾಗಿ ಬೀದಿಗಿಳಿದು ಪ್ರತಿಭಟನೆಯಲ್ಲಿ ಭಾಗವಹಿಸಿ, ರಸ್ತೆ ತಡೆ, ಮುತ್ತಿಗೆ, ಭೂತದಹನದಂತಹ ಕಾರ್ಯಕ್ರಮಗಳಲ್ಲಿ ಪಾಲ್ಗೊಂಡಿದ್ದಾರೆ.



ವಿದ್ಯಾರ್ಥಿ ಮುಖಂಡರ ಬಂಧನ ಬಿಡುಗಡೆ

ಬೆಂಗಳೂರಿನ ಮಹಾರಾಣಿ ಕಲಾ ಕಾಲೇಜಿನ ವಿದ್ಯಾರ್ಥಿನಿಯರೊಂದಿಗೆ ಪ್ರತಿಭಟನೆಯಲ್ಲಿ ತೊಡಗಿದ್ದಾಗ ಎಸ್.ಎಫ್.ಐ.ನ ರಾಜ್ಯ ಸಮಿತಿಯ ಸದಸ್ಯರಾದ ವಿಕ್ರಮ್ ವಿನ್ಸೆಂಟ್ ಮತ್ತು ಜಿಲ್ಲಾ ಮುಖಂಡರಾದ ಎಸ್.ಎಸ್.ರೆಡ್ಡಿ, ದಾವಣಗೆರೆಯಲ್ಲಿ ಎಸ್.ಎಫ್.ಐ. ರಾಜ್ಯ ಸಹ ಕಾರ್ಯದರ್ಶಿಯಾದ ಅನಂತನಾಯಕ್ ಜಿಲ್ಲಾ ಮುಖಂಡರಾದ ವಿನಾಯಕ ಪೂಜಾರ್ ಜೊತೆಗೆ 3 ಜನ ಸಂಗಾತಿಗಳನ್ನು ಪೋಲೀಸರು ಬಂಧಿಸಿದ್ದಾರೆ. ಜೊತೆಗೆ ಧಾರವಾಡದ ಪ್ರತಿಭಟನೆಯಲ್ಲಿ ಭಾಗವಹಿಸಿದ್ದ ರಾಜ್ಯ ಉಪಾಧ್ಯಕ್ಷರಾದ ವಿಜಯಕುಮಾರ್ ದೊಡ್ಡಮನಿಯವರು ಮತ್ತು ಇತರ ಸಂಗಾತಿಗಳೊಂದಿಗೆ ಪೋಲೀಸರು ಮಾತಿನ ಚಕಮಕಿ ನಡೆಸಿ ಕೈ ಕೈ ಮಿಲಾಯಿಸಿ ಅವರನ್ನು ಬಂಧಿಸಿ ನಂತರ ಬಿಡುಗಡೆ ಮಾಡಿದ್ದಾರೆ.

ರಾಜ್ಯಾದ್ಯಂತ ಶಾಲಾ-ಕಾಲೇಜ್ ಬಂದ್‌ನ ಮುನ್ನೆಚ್ಚರಿಕೆ ಕ್ರಮವಾಗಿ ವ್ಯಾಪಕ ಬಂದೋಬಸ್ತ್ ವ್ಯವಸ್ಥೆ ಮಾಡಲಾಗಿತ್ತು. ಕೆಲವು ಕಡೆಗಳಲ್ಲಿ ಪೋಲೀಸರು ಮರವಣಿಗೆಗೆ ಅಡ್ಡಿ ಪಡಿಸಿದ್ದಾರೆ.

ಒಟ್ಟಾರೆಯಾಗಿ ಹೇಳುವುದಾದರೆ ಸಿ.ಇ.ಟಿ. ಬಿಕ್ಕಟ್ಟಿಗೆ ಕೇಂದ್ರೀಯ ಶಾಸನವನ್ನು ರೂಪಿಸಲು ಕೇಂದ್ರ, ರಾಜ್ಯ ಸರ್ಕಾರಗಳ ಮೇಲೆ ಒತ್ತಡ ತರುವುದಲ್ಲದೆ ರಾಜ್ಯದ ಶೈಕ್ಷಣಿಕ ಸಮಸ್ಯೆಗಳ ಬಗ್ಗೆ ವಿದ್ಯಾರ್ಥಿ ಪೋಷಕ, ಅಧ್ಯಾಪಕರುಗಳಿಗೆ ಅರ್ಥ ಮಾಡಿಸುವುದರ ಜೊತೆಗೆ ಅವರುಗಳ ಆಕ್ರೋಶವನ್ನು ಪ್ರತಿಭಟನೆಯಾಗಿ, ಚಳುವಳಿಯಾಗಿ ಮಾರ್ಪಡಿಸಲು ಎಸ್.ಎಫ್.ಐ. ರಾಜ್ಯಾದ್ಯಂತ ಯಶಸ್ವಿಯಾಗಿದೆ.

■ ಹೆಚ್.ಆರ್.ನವೀನ್ ಕುಮಾರ್



ಮತ್ತೆ ಜನತೆಯತ್ತ..... ‘ಸಮುದಾಯ’



ಕರ್ನಾಟಕ ರಾಜ್ಯದ ರಾಜಕೀಯ - ಸಾಂಸತಿಕ ಚಳುವಳಿಯಲ್ಲಿ ಅತ್ಯಂತ ಮಹತ್ವದ ಪ್ರಗತಿಪರ ಹೆಜ್ಜೆಗುರುತುಗಳು ಮೂಡಿಸಿದ ‘ಸಮುದಾಯ’ದ ಪ್ರಯೋಗಗಳ ಕುರಿತ ‘ರಂಗ ಸಂವಾದ’ ಕಾರ್ಯಕ್ರಮವೊಂದು ಬೆಂಗಳೂರಿನಲ್ಲಿ ಇತ್ತೀಚೆಗೆ ನಡೆಯಿತು. ದಲಿತರು - ಮಹಿಳೆಯರು - ರೈತರು - ಕಾರ್ಮಿಕರು-ಶೋಷಿತ ಜನವಿಭಾಗಗಳ ಸಂಕಟಗಳಿಗೆ ದನಿಯಾಗಿ ಒಡಮೂಡಿದ ಈ ಚಳುವಳಿಯ ಕುರಿತು ಅವಲೋಕನ ನಡೆಸಲಾಯಿತು. ಇಂಥ ಒಂದು ಅವಲೋಕನದಿಂದಾಗಿ ಇಂದಿನ ಸಂದರ್ಭದ ಸವಾಲುಗಳಿಗೆ ತಕ್ಕಂತಹ ರೀತಿಯಲ್ಲಿ ‘ಸಮುದಾಯ’ ಚಳುವಳಿಯನ್ನು ಪುನಶ್ಚೇತನಗೊಳಿಸುವ ದೃಢ ತೀರ್ಮಾನ ಕೈಗೊಂಡಿರುವುದು ಬಹಳ ಮಹತ್ವದ ವಿಚಾರವಾಗಿದೆ.

ಕೆ. ಮಹಾಂತೇಶ್

ಎಲ್ಲಿಂದ ಬಂದಿರುವು ಕೇಳಬಹುದು ನೀವು............
ಜನರ ನಡುವಿನಿಂದ ಎಂದು
ಹೇಳುತ್ತೇವೆ ನಾವು..........
ಮತ್ತೆ ಪಯಣ ಎಲ್ಲಿಗೆಂದು ಕೇಳಬಹುದು
ನೀವು...........
ತಿರುಗಿ ಮತ್ತೆ ಜನರ ನಡುವೆ
ಹೋಗುತ್ತೇವೆ ನಾವು.........

ಬೆಂಗಳೂರಿನ ನಯನ ಸಭಾಂಗಣ ದೊಳಗೆ ಆಗಸ್ಟ್ 21ರ ಬೆಳಿಗ್ಗೆ ಮೇಲಿನ ಹಾಡಿನ ಸಾಲುಗಳನ್ನು ಸಾಮೂಹಿಕವಾಗಿ ಹಾಡುತ್ತಾ ರಾಯಚೂರಿನ ಶಾಂತ, ಮತ್ತಿತರೆ ಗೆಳೆಯರು ಪ್ರವೇಶ ಮಾಡುತ್ತಿದ್ದಂತೆ ಅಲ್ಲಿ ನೆರೆದಿದ್ದ ನೂರಾರು ಜನರ ಮೈ ಮನಗಳೆಲ್ಲಾ ರೋಮಾಂಚನಗೊಂಡು ಆ ಹಾಡಿಗೆ ಧ್ವನಿ ಗೂಡಿಸಿದವು... ಮತ್ತೆ ಮತ್ತೆ ಆ ನೆನಪುಗಳಲ್ಲಿ ತೇಲಿ ಹೋದರು.....

70ರ ದಶಕದ ಕೊನೆ ಮತ್ತು 80ರ ದಶಕದಲ್ಲಿ ಕನ್ನಡ ನಾಡಿನ ಉದ್ದಕ್ಕೂ ಮನೆ ಮಾತಾಗಿದ್ದ ಪತ್ರೆ ಸಂಗಪ್ಪನ ಕೊಲೆ ಪ್ರಕರಣ, ಕತ್ತಲೆದಾರಿ ದೂರ, ಬೆಲ್ಚಿ, ತಾಯಿ, ಹುತ್ತವ ಬಡಿದರೆ, ದಂಗೆಯ ಮುಂಚಿನ ದಿನಗಳು, ಗೆಲಿಲಿಯೋ ಮತ್ತು ಪಂಚಮದಂತಹ ಶ್ರೇಷ್ಠ ನಾಟಕಗಳನ್ನು ಪ್ರದರ್ಶಿಸಿ, ದಲಿತರು, ಕೂಲಿಕಾರರ ಮೇಲೆ ಜಮೀನ್ದಾರರ ದೌರ್ಜನ್ಯ. ಕಾರ್ಮಿಕರ ಮೇಲೆ ಮಾಲಿಕರ ಕ್ರೂರ ದಬ್ಬಾಳಿಕೆ, ಮಹಿಳಾ ದೌರ್ಜನ್ಯ, ವರದಕ್ಷಿಣೆ ಹಾಗೂ ಮೌಢ್ಯಗಳ ಹಿಂದಿರುವ ಕುತಂತ್ರಗಳನ್ನು ಪರಿಣಾಮಕಾರಿಯಾಗಿ ಅನಾವರಣಗೊಳಿಸಿದ್ದ ‘ಸಮುದಾಯ’ ಮತ್ತೆ ತನ್ನ ಸಾಂಸತಿಕ ಚಳುವಳಿಯನ್ನು ಜನತೆಯತ್ತ ಕೊಂಡೊಯ್ಯಲು ನಿರ್ಧರಿಸಿದೆ.

ಅದು ತುರ್ತು ಪರಿಸ್ಥಿತಿಯ ಕಾಲಘಟ್ಟ. ಸರ್ವಾಧಿಕಾರವನ್ನು ಜನತೆಯ ಮೇಲೆ ಹೇರಿ ದೇಶದ ಸಂವಿಧಾನ ಹಾಗೂ ಪ್ರಜಾಪ್ರಭುತ್ವವನ್ನೇ ಮೂಲೆಗುಂಪಾಗಿಸಿದ ದಿನಗಳವು. ಆ ಕರಾಳ ದಿನಗಳ ವಿರುದ್ಧ ನಿರಂತರ ಸಂಘರ್ಷ ಮುಂದುವರೆದಿತ್ತು. ಒಂದೆಡೆ ತುಳಿತಕ್ಕೊಳಗಾದ ‘ದಲಿತ ಸಮುದಾಯ’ ಅಕ್ಷರದತ್ತ ಮುಖಮಾಡಿ ಜಾಗೃತಗೊಳ್ಳುತ್ತಿತ್ತು. ಮತ್ತೊಂದೆಡೆ ರೈತಾಪಿ ಜನರು ಗ್ರಾಮೀಣ ಪ್ರದೇಶದಲ್ಲಿ ಸಂಘಟಿತ ರಾಗತೊಡಗಿದ್ದರು ಅಲ್ಲದೆಎಡಪಂಥೀಯ ಹಲವು ಸಂಘಟನೆಗಳು ಶೋಷಿತ ವರ್ಗಗಳ ನಡುವೆ ಕೆಲಸ ಮಾಡುತ್ತ ವರ್ಗಚಿಂತನೆಯನ್ನು ಮೂಡಿಸುವಲ್ಲಿ ನಿರತರಾಗಿದ್ದವು. ಇಂತಹ ಗಂಭೀರ ಸನ್ನಿವೇಶದಲ್ಲಿ ಒಡಮೂಡಿದ ‘ಸಮುದಾಯ’ ಕೇವಲ ಒಂದು ಹವ್ಯಾಸಿ ರಂಗ ತಂಡವಾಗಿ ಕೆಲಸ ಮಾಡದೆ, ರಾಜ್ಯದಲ್ಲಿ ಪರ್ಯಾಯವಾದ ಸಾಂಸತಿಕ- ರಾಜಕೀಯ ಚಳುವಳಿಯೊಂದು ರೂಪಗೊಳ್ಳಲು ಪ್ರೇರಣೆಯಾಯಿತು.



ಆರಂಭದಲ್ಲಿ ರಂಗಸಮುದಾಯ, ಚಿತ್ರ ಸಮುದಾಯ ಹಾಗೂ ಗ್ರಂಥ ಸಮುದಾಯದಂತಹ ಕಾರ್ಯಕ್ರಮಗಳಲ್ಲಿ ತನ್ನನ್ನು ತೊಡಗಿಸಿಕೊಂಡರೂ, ಆವತ್ತಿನ ರಾಜಕೀಯ ಚಿಂತನೆ ಮತ್ತು ಬೆಳವಣಿಗೆಗಳು ಸಮುದಾಯವನ್ನು ‘ರಂಗ ಸಮುದಾಯ’ವನ್ನೇ ಪ್ರಧಾನ ಆದ್ಯತೆಯನ್ನಾಗಿ ಮಾಡಿಕೊಳ್ಳಲು ಪ್ರೇರೇಪಿಸಿದವು.

ಈ ಹಿನ್ನೆಲೆಯಲ್ಲಿಯೇ ಹುತ್ತವ ಬಡಿದರೆ, ತಾಯಿ(ತಮಿಳು-ಕನ್ನಡ ಎರಡರಲ್ಲೂ) ಕತ್ತಲೆ ದಾರಿ ದೂರ, ಪಾಠ 1 ಮತ್ತು 2, ಕುರಿ, ಗೆಲಿಲಿಯೋ ಮೊದಲಾದ ಪ್ರಯೋಗಗಳು ಮತ್ತು ಬಿಹಾರದಲ್ಲಿ ದಲಿತರ ಸಜೀವ ದಹನ ಕುರಿತು ಬೆಲ್ಚಿ, ಜಮೀನ್ದಾರನ ದೌರ್ಜನ್ಯಕ್ಕೆ ಬಲಿಯಾದ ಕೂಲಿಕಾರನ ಕುರಿತು ‘ಪತ್ರೆ ಸಂಗಪ್ಪನ ಕೊಲೆ ಪ್ರಕರಣ, ಮೆಟಲ್ ಲ್ಯಾಂಪ್ಸ್ ಕಾರ್ಮಿಕರು ಮತ್ತು ಹೋಟೆಲ್ ಕಾರ್ಮಿಕರ ಬವಣೆ ಕುರಿತು ಹೋರಾಟ ಮತ್ತು ಪಂಚತಾರಾ ಎನ್ನುವ ಬೀದಿ ನಾಟಕಗಳು ರೂಪಗೊಂಡು ಜನರಲ್ಲಿ ಜಾಗೃತಿ ಮೂಡಿಸಿದವು.

ಆ ಕಾಲದಲ್ಲಿ ಸಮುದಾಯ ಪ್ರಚಾರಕ್ಕಾಗಿ ರೂಪಿಸಿದ ವಿಭಿನ್ನ ಅಭಿವ್ಯಕ್ತಿ ಸಾಧನಗಳು ಜನತೆಯನ್ನು ಪರಿಣಾಮಕಾರಿ ತಲುಪುವಲ್ಲಿ ಮತ್ತು ಹೊಸ ಸಂಚಲನಾ ಮೂಡಿಸುವಲ್ಲಿ ಯಶಸ್ವಿಯಾಯಿತು. ಕೈಬರಹದ ಆಕರ್ಷಕ ಪೋಸ್ಟರ್ಸ್‌ಗಳನ್ನು, ಬೀದಿ ನಾಟಕಗಳನ್ನು, ಮತ್ತು ಜಾಥಾಗಳನ್ನು ರಾಜ್ಯಕ್ಕೆ ಪರಿಚಯಿಸಿದ ಕೀರ್ತಿ ಸಮುದಾಯದ್ದು. 1979ರಲ್ಲಿ ಹೊಸ ಮೌಲ್ಯಗಳತ್ತ ಸಾಂಸತಿಕ ಜಾಥಾ, 1981ರಲ್ಲಿ ಬಂಡೆದ್ದ ರೈತರೊಂದಿಗೆ ಜಾಥಾ, 1986ರಲ್ಲಿ ಭೀಕರ ಬರಗಾಲದೆದಿರು ಮತ್ತೆ 86ರಲ್ಲೇ ವಿಶ್ವಶಾಂತಿಗಾಗಿ ಮತ್ತು ಅಣು ಸಮರಕ್ಕೆ ತಡೆಯನೊಡ್ಡಿ 120 ಅಡಿಗಳ ಬಣ್ಣದ ನಡಿಗೆ ಮೊದಲಾದ ಸಾಂಸತಿಕ




ಜಾಥಾಗಳನ್ನು ರಾಜ್ಯಾದ್ಯಂತ ಸಂಘಟಿಸುವ ಮೂಲಕ ರಾಜ್ಯದ ರಾಜಕೀಯದಲ್ಲೇ ಪರ್ಯಾಯವೊಂದನ್ನು ಹುಟ್ಟುಹಾಕುವಲ್ಲಿ ಮತ್ತು ಕಲೆ ಕೇವಲ ಕಲೆಗಾಗಿ ಅಲ್ಲ! ಅದು ಬದುಕಿಗಾಗಿ ಎನ್ನುವ ಸಂದೇಶ ಸಾರುವಲ್ಲಿ ಯಶಸ್ಸು ಕಂಡಿತು.

‘ಸಮುದಾಯ’ದ ಹುಟ್ಟು, ಬೆಳವಣಿಗೆ ಹಾಗೂ ಅವಶ್ಯವಿದ್ದ ತಾತ್ವಿಕ ಗಟ್ಟಿತನ ಮತ್ತು ಅದಕ್ಕೊಂದು ಸೈದ್ಧಾಂತಿಕ ಸ್ವರೂಪ ನೀಡುವಲ್ಲಿ ಅಂದು ಪ್ರಸನ್ನ, ಸಿ.ಜಿ.ಕೆ., ಕಿ.ರಂ.ನಾಗರಾಜ್, ಡಿ.ಆರ್.ನಾಗರಾಜ್, ಕೆ.ವಿ.ನಾರಾಯಣ, ಶೂದ್ರ ಶ್ರೀನಿವಾಸ್ ಮೊದಲಾದವರು ಪಟ್ಟ ಶ್ರಮ ಮತ್ತು ನಾಡಿನುದ್ದಕ್ಕೂ ಸಂಚರಿಸಿ ಗಂಗಾಧರ ಸ್ವಾಮಿ, ಲಿಂಗದೇವರು ಹಳೆಮನೆ, ಜೆನ್ನಿ, ಸಿ.ಆರ್.ಭಟ್, ಆರ್.ಕೆ.ಹುಡಿಗಿ, ಮೊದಲಾದವರು ಘಟಕಗಳನ್ನು ರಚಿಸಲು ವಹಿಸಿದ ಮುತುವರ್ಜಿಯ ಪರಿಣಾಮವಾಗಿ ಒಂದು ಕಾಲಕ್ಕೆ 26 ಸಮುದಾಯ ಘಟಕಗಳು ಸಕ್ರಿಯವಾಗಿದ್ದವು. ಮಾತ್ರವಲ್ಲ ಅತ್ಯುನ್ನತ ಕಲಾವಿದರುಗಳನ್ನು, ನಿರ್ದೇಶಕರುಗಳನ್ನು ರಂಗಭೂಮಿಗೆ ಕೊಡುಗೆ ನೀಡಿದವು. ಪ್ರಸ್ತುತ ರಾಷ್ಟ್ರೀಯ ನಾಟಕ ಶಾಲೆ(ಎನ್.ಎಸ್.ಡಿ.)ಗೆ ಅತೀ ಹೆಚ್ಚು ಕಲಾವಿದರನ್ನು ಕಳುಹಿಸಿದ ಸಂಸ್ಥೆ ಎಂದರೆ ‘ಸಮುದಾಯ’ ಮಾತ್ರ. ಸದ್ಯ ಎನ್.ಎಸ್.ಡಿ. ಯಲ್ಲಿ ಕೆಲಸ ಮಾಡುತ್ತಿರುವ ಸುರೇಶ್ ಅನಗಳ್ಳಿ ಸೇರಿದಂತೆ, ಸಿ.ಬಸವಲಿಂಗಯ್ಯ, ಎಸ್.ರಘುನಂದನ್, ಮಾಲತಿ, ವಾಲ್ಟರ್ ಡಿಸೋಜ, ಜೆನ್ನಿ, ಮೊದಲಾದವರಿಂದು ಎನ್.ಎಸ್.ಡಿ. ಯಿಂದ ತರಬೇತಿ ಪಡೆದು ದೇಶದ ಪ್ರತಿಭಾವಂತ ನಿರ್ದೇಶಕರಾಗಲು ಪ್ರೇರಣೆ ನೀಡಿದ್ದು ಸಮುದಾಯ. ಇವತ್ತು ಕಿರುತೆರೆ - ಸಿನಿಮಾಗಳೆರಡರಲ್ಲೂ ಹೆಸರಾಗಿರುವ ಮುಖ್ಯಮಂತ್ರಿ ಚಂದ್ರು, ಲೋಕನಾಥ್, ಟಿ.ಎಸ್.ಲೋಹಿತಾಶ್ವ ಹಾಗೂ ಬಿ.ಜಯಶ್ರೀ, ಲಕ್ಷ್ಮಿ ಚಂದ್ರಶೇಖರ್‌ರಂತಹ ಅತ್ಯುತ್ತಮ ಕಲಾವಿದೆಯರು, ಪಿಚ್ಚಳ್ಳಿ ಶ್ರೀನಿವಾಸ್ ನಂತಹ ಗಾಯಕ, ಓ.ಎಲ್.ನಾಗಭೂಷಣ ಸ್ವಾಮಿಯಂತಹ ಉತ್ತಮ ವಿಮರ್ಶಕ, ಅನುವಾದಕ, ಶಶಿಧರ ಅಡಪ, ಲೈಟ್ ಮುದ್ದಣ್ಣನಂತಹ ತಂತ್ರಜ್ಞರನ್ನು ಹೀಗೆ ಸಮುದಾಯದ ಗರಡಿಯಲ್ಲಿ ಪಳಗಿ ಇಂದು ವಿವಿಧ ಕ್ಷೇತ್ರಗಳಲ್ಲಿ ಖ್ಯಾತರಾಗಿರುವವರ ಸಂಖ್ಯೆ ಅಪಾರ.

ಆರಂಭದಿಂದಲೇ ‘ಬಾದಲ್ ಸರ್ಕಾರ್’ರಂತಹ ಅತ್ಯುತ್ತಮ ನಿರ್ದೇಶಕರು ಹಾಗೂ ಎನ್.ಎಸ್.ಡಿ. ತರಬೇತಿ ಪಡೆದವರನ್ನು ಕರೆಸಿ ರಂಗತರಬೇತಿಗಳನ್ನು ನಡೆಸಿ ಖ್ಯಾತ ನಾಟಕಗಳನ್ನು ‘ಸಮುದಾಯ’ ಪ್ರಯೋಗಕ್ಕಿಳಿಸಿದ್ದರಿಂದ ಸಹಜವಾಗಿಯೇ ಸಾಕಷ್ಟು ಯುವ ಕಲಾವಿದರು, ನಿರ್ದೇಶಕರಿಗೆ ಅವಕಾಶಗಳನ್ನು ಸೃಷ್ಟಿಸಿತು.

ಸಮುದಾಯ ಈಗ 30ರ ಹೊಸ್ತಿಲಲ್ಲಿದೆ. ಪ್ರೊ.ಕಿ.ರಂ. ಹೇಳಿದಂತೆ “ಯಾವುದೇ ಸಂಸ್ಥೆಯು ‘ಶತಮಾನೋತ್ಸವ’ವನ್ನು ಆಚರಿಸಿಕೊಳ್ಳುವುದಕ್ಕಾಗಿಯೇ ರೂಪಗೊಳ್ಳಬೇಕಿಲ್ಲ. 70ರ ಸ್ಥಿತಿಗಿಂತ ಕ್ರೂರ ವ್ಯವಸ್ಥೆಯಲ್ಲಿ ಬದುಕುತ್ತಿದ್ದೇವೆ. ಬಹು ಸಂಸತಿ ಮೇಲೆ ಧಾಳಿ ನಡೆಯುತ್ತಿದೆ. ಸಂಸತಿ ವಾಣಿಜ್ಯೀಕರಣಗೊಂಡಿದೆ ವರ್ತಮಾನದ ತುರ್ತು ಸ್ಥಿತಿಗಳಿಗೆ ನಾವು ಸ್ಪಂದಿಸುವುದು ಇವತ್ತಿನ ಅನಿವಾರ್ಯ”. ಇದು ಅಕ್ಷರಶಃ ಸತ್ಯ.

ರಾಷ್ಟ್ರೀಯ ನಾಟಕ ಶಾಲೆ(ಎನ್.ಎಸ್.ಡಿ.) ಹಾಗೂ ಪ್ರಾದೇಶಿಕ ಸಂಪನ್ಮೂಲ ಕೇಂದ್ರ, (ಆರ್.ಆರ್.ಸಿ.) ಆಗಸ್ಟ್ - 21 ರಂದು ‘ನಯನ ಸಭಾಂಗಣದಲ್ಲಿ’ ಬೆಳಿಗ್ಗೆಯಿಂದ - ಸಂಜೆವರೆಗೂ ಸಂಘಟಿಸಿದ್ದ ‘ಸಮುದಾಯದ ಪ್ರಯೋಗಗಳು (1975-82)’ ಕುರಿತ ವಿಚಾರ ಸಂಕಿರಣ ಸಮುದಾಯದ ಹುಟ್ಟು, ಬೆಳವಣಿಗೆ, ತಾತ್ವಿಕ ಬದ್ಧತೆ ಹಾಗೂ ಸಮುದಾಯ ಸಂಘಟಿಸಿದ್ದ ರಂಗಪ್ರಯೋಗಗಳ ತಾತ್ವಿಕ ನೆಲೆಗಳು, ಸಾಂಸತಿಕ ಜಾಥಾಗಳು ಮತ್ತು ಕಟ್ಟಿದ ಘಟಕಗಳು ಕುರಿತಂತೆ ಪುನರವಲೋಕನಕ್ಕೆ ಆ ಮೂಲಕ ಸಮುದಾಯದ ಪುನಶ್ಚೇತನಕ್ಕೆ ನಾಂದಿ ಹಾಕಿತು. ಸಮುದಾಯವನ್ನು ಮತ್ತೆ ಜನತೆಯತ್ತ ಕೊಂಡೊಯ್ಯುವ ಆಶಯದ ಭಾಗವಾಗಿ ಹಲವು ಗಣ್ಯರ ಸಲಹಾ ಸಮಿತಿಯನ್ನೊಳಗೊಂಡು ಪ್ರತಿಭಾವಂತ ರಂಗ ನಿರ್ದೇಶಕ ಶಶಿಧರ್ ಭಾರಿಘಾಟ್ ಹಾಗೂ ಕೆಜಿಎಫ್‌ನ ಅಚ್ಯುತ್, ಗುಲ್ಬರ್ಗಾದ ಶಂಕ್ರಯ್ಯ ಘಂಟಿ ನೇತೃತ್ವದಲ್ಲಿ ರಾಜ್ಯ ಮಟ್ಟದ



ಸಂಚಾಲನಾ ಸಮಿತಿಯೊಂದು ರೂಪುಗೊಂಡಿದೆ. ಪ್ರೊ|| ಬರಗೂರು ಹೇಳಿದಂತೆ ಸಮುದಾಯ “ಮತ್ತೊಮ್ಮೆ ಬದಲಾದ ರಾಜಕೀಯ- ತಾತ್ವಿಕತೆಯನ್ನು ದೃಢಪಡಿಸಿಕೊಂಡು ಸೃಜನಶೀಲತೆ ಯೊಂದಿಗೆ ಎದ್ದು ಬರಬೇಕಿದೆ”.

ಕೊನೆಯಲ್ಲಿ ಪ್ರೊ. ಸಿ.ಜಿ.ಕೆ. ಹೇಳಿದ್ದು.... “ಸಮುದಾಯ ಮತ್ತೆ ಎದ್ದು ನಿಂತರೆ ಅದಕ್ಕೆ ನೂರು ವರ್ಷ ಮಾಡುವಷ್ಟು ಕೆಲಸವಿದೆ”

ಹೌದು.. ಜನತೆಯ ಬದುಕು ಮತ್ತು ಬಹುಸಂಸತಿಯ ಮೇಲೆ ‘ಜಾಗತೀಕರಣ - ಕೋಮುವಾದೀಕರಣ’ಗಳು ಒಂದಾಗಿ ಧಾಳಿ ಮಾಡುತ್ತಿರುವ ಈ ಸನ್ನಿವೇಶದಲ್ಲಿ ‘ಸಮುದಾಯ’ ಮತ್ತೆ ಜನತೆಯತ್ತ ತನ್ನ ಹೆಜ್ಜೆ ಹಾಕಬೇಕಿದೆ. ○

PRB DECR 319-79/79 AIKYARANGA WEEKLY Reg. No. 17015/64 CPM(G)/KA/BGS-119/2003-05
ಭಾರತ ಕಮ್ಯುನಿಸ್ಟ್ ಪಕ್ಷ(ಮಾರ್ಕ್ಸ್‌ವಾದಿ), ಕರ್ನಾಟಕ ರಾಜ್ಯ ಸಮಿತಿಯ ಪರವಾಗಿ ಮುದ್ರಣ ಮತ್ತು ಪ್ರಕಾಶನ: ಜಿ.ಎನ್.ನಾಗರಾಜ್
ಸಂಪಾದಕರು: ಎಸ್.ವೈ.ಗುರುಶಾಂತ್ ಸಂಪಾದಕೀಯ ಕಛೇರಿ: ನಂ. 12, 18ನೇ ಅಡ್ಡರಸ್ತೆ, ಸಂಪಂಗಿರಾಮನಗರ, ಬೆಂಗಳೂರು - 27 ಫೋನ್ ನಂ. 22236462,
ಮುದ್ರಣ: ಹಂಸ ಪ್ರಿಂಟರ್ಸ್, ಕ್ವೀನ್ ರಸ್ತೆ, ಬೆಂಗಳೂರು.
Printed & Published by Communist Party of India(Marxist), Karnataka State Committee. Editor : S.Y.GURUSHANTH